ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ ೧೨ | ಸಂಚಿಕೆ ೧೦ | ಮಾರ್ಚ್ ೧೧, ೧೯೯೦ | ರೂ. ೧.೫೦

"ಶ್ರೀಸಾಮಾನ್ಯರತ್ತ ಗಮನಹರಿಸಿ"

ಭಾರತೀಯ ರೈಲ್ವೆಗೆ ಕಾಂ. ಸೂರಿ ಕರೆ

ಮೊದಲ ದರ್ಜೆ ಪ್ರಯಾಣ ಮಾಡುವ ಶ್ರೀಮಂತರ ಕಡೆ ಕೊಡುವ ಗಮನವನ್ನು, ವಿನಿಯೋಗಿಸುವ ಹಣವನ್ನು ತೊಡೆದು ಹಾಕಿ ಒಬ್ಬರ ಮೇಲೊಬ್ಬರು ಬಿದ್ದು ಕುರಿಗಳಂತೆ ಪ್ರಯಾಣಿಕರನ್ನು ಕೂಡ ಲಾಗುತ್ತಿರುವ ಜನರಲ್ ಕಂಪಾರ್ಟ್‌ಮೆಂಟ್‌ಗಳ ಕಡೆಗೆ ಗಮನ ಕೊಡಿ. ಪ್ರಯಾಣದ ವಿವಿಧ ವರ್ಗಗಳನ್ನು ತೆಗೆದು ಎರಡನೇ ದರ್ಜೆ ಬೋಗಿಗಳಲ್ಲಿ ಸೌಕರ್ಯ ಹೆಚ್ಚಿಸಿ ಎಂದು ಭಾರತೀಯ ರೈಲ್ವೆ ಆಡಳಿತ ವರ್ಗಕ್ಕೆ ಸಿ.ಪಿ.ಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯ ಕಾಂ. ಸೂರ್ಯನಾರಾಯಣ ರಾವ್ ಒತ್ತಾಯಿಸಿದರು.

ರೈಲ್ವೆಯ ಪರಿಸ್ಥಿತಿ ಬಗ್ಗೆ ಮಂಡಿಸಲಾದ "ಸ್ಟೇಟಸ್ ಪೇಪರ್" ಬಗ್ಗೆ ಪಕ್ಷದ ಅಭಿಪ್ರಾಯವನ್ನು ವ್ಯಕ್ತಪಡಿಸಿ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ "ವಿಚಾರ ಸಂಗ್ರಹ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು. ಸ್ವಾತಂತ್ರ್ಯ ಬಂದಂದಿನಿಂದ ಇತ್ತೀಚಿನವರೆಗೂ ರೈಲ್ವೆಗೊಂದು ರಾಷ್ಟ್ರೀಯ ನೀತಿಯಿಲ್ಲ. ಪ್ರಮುಖ ನಗರಗಳನ್ನಷ್ಟೇ ಸಂಪರ್ಕಿಸುವ ರೈಲ್ವೆ ಮಾರ್ಗಗಳಿಂದ ಕೈಗಾರಿಕೆಗಳೆಲ್ಲವೂ ದೊಡ್ಡ ದೊಡ್ಡ ನಗರಗಳ ಸುತ್ತ ಮಾತ್ರ ಕೇಂದ್ರೀಕೃತವಾಗಿದೆ. ಇದರಿಂದ ನಗರ ಗ್ರಾಮಗಳ ಅಂತರ ಹೆಚ್ಚು ಹೆಚ್ಚಾಗುತ್ತಾ ಗ್ರಾಮಾಂತರಗಳಿಂದ ದೊಡ್ಡ ಪ್ರಮಾಣದ ವಲಸೆಗೆ ಕಾರಣವಾಗಿದೆ. ನಗರಗಳಲ್ಲಿ ವಸತಿ, ನೀರು, ಸಾರಿಗೆ ವ್ಯವಸ್ಥೆಗಳು ಬಿಕ್ಕಟ್ಟಿಗೊಳಗಾಗಿ ಜನ ನರಳುವಂತಾಗಿದೆ. ಕೊಳಚೆ ಪ್ರದೇಶಗಳು ಅತ್ಯಂತ ವ್ಯಾಪಕವಾಗಿ ಬೆಳೆಯಲು ಕಾರಣವಾಗಿದೆ ಎಂದು ಅವರು ಅಭಿಪ್ರಾಯ ಪಟ್ಟರು.

ಹೊಸ ದೃಷ್ಟಿಯಿಂದ ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗಾಗಿ ವಿಶೇಷ ಗಮನ ಹರಿಸುತ್ತೇವೆಂದು ಹೇಳುತ್ತಿರುವ ರಾಷ್ಟ್ರೀಯ ರಂಗದ ಸರ್ಕಾರ ಈ ನಿಟ್ಟಿನಲ್ಲಿ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ, ಅಲ್ಲಿ ಕೈಗಾರಿಕೆಗಳ ಅಭಿವೃದ್ಧಿಗಳಿಗಾಗಿ ರೈಲ್ವೆಯ ಆದ್ಯತೆಯನ್ನು ಪುನರೂಪಿಸಲು ಕಾಂ. ಸೂರಿ ಕರೆಯಿತ್ತರು. ಈ ಸಂಬಂಧದಲ್ಲಿ ಚೀನಾದ ಅನುಭವವನ್ನು ಉದಾಹರಿಸಿದರು.

ಕರ್ನಾಟಕ ವಲಯ ಬೇಕು

ಕರ್ನಾಟಕ ಎರಡು ಮೂರು ರೈಲ್ವೆ ವಿಭಾಗದಲ್ಲಿ ಹರಿದು ಹಂಚಿ ಹೋಗಿದೆ ಈ ಕಾರಣದಿಂದ ರಾಜ್ಯದ ರೈಲ್ವೆ ಅಭಿವೃದ್ಧಿಯ ಬಗ್ಗೆ ಸಮಗ್ರ ದೃಷ್ಟಿಕೋನವಿಲ್ಲದೆ ಸೊರಗಿದೆ. ಬ್ರಾಡ್ ಗೇಜ್‌ಗಳು ಕರ್ನಾಟಕದ ಗಡಿಯವರೆಗೂ ಬಂದು ಅಲ್ಲೇ ನಿಲ್ಲುತ್ತವೆ. ಕರ್ನಾಟಕದವರೇ ಆದ ಅನೇಕ ರೈಲ್ವೆ ಮಂತ್ರಿಗಳಿದ್ದರೂ ಈ ಪರಿಸ್ಥಿತಿಯಾಗಿದೆ. ಇದನ್ನು ನಿವಾರಿಸಲು ಹೊಸ ಕೇಂದ್ರ ಸರ್ಕಾರ ಗಮನ ಕೊಡಬೇಕು ಎಂದು ಅವರು ಒತ್ತಾಯಿಸಿದರು. ಈ ಬೇಡಿಕೆ ಎಲ್ಲ ಪಕ್ಷಗಳು, ಎಲ್ಲ ವಿಭಾಗಗಳು ಒತ್ತಾಯಿಸಿದ ಬೇಡಿಕೆಯಾಗಿತ್ತು.

ಹೊಸ ತಂತ್ರಜ್ಞಾನದಿಂದಾಗಿ ಅನೇಕ ರೈಲ್ವೆ ನೌಕರರ ಮೇಲೆ ಅಪಾಯದ ಕತ್ತಿ ತೂಗುತ್ತಿದೆ. ನೌಕರರ ವಿರುದ್ಧವಾದ ಹೊಸ ಉದ್ಯೋಗಾವಕಾಶ ಸೃಷ್ಟಿಯ ವಿರುದ್ಧವಾದ ಹೊಸ ತಂತ್ರಜ್ಞಾನದ ಅಂಶಗಳನ್ನು ಕೈಬಿಡಬೇಕು ಎಂದು ಕಾಂ. ಸೂರಿ ಒತ್ತಾಯಿಸಿದರು. ಅಪಾರ ಮೊತ್ತದ ಹಣ, ವಿದೇಶಿ ವಿನಿಮಯ ವೆಚ್ಚವಾಗುವ ಡೀಸಲ್ ಇಂಜಿನ್‌ಗಳ ಬದಲಾಗಿ ವಿದ್ಯುದೀಕರಣವಾಗಬೇಕು. ಆದರೆ ವಿದ್ಯುತ್ ಉತ್ಪಾದನೆಯನ್ನು ದೊಡ್ಡ ಪ್ರಮಾಣದಲ್ಲಿ ಸಾಧಿಸುವ ಕ್ರಮಗಳ ಜೊತೆಗೇ ವಿದ್ಯುದೀಕರಣವನ್ನು ಮುಂದುವರೆಸಬೇಕು. ಈ ವಿಷಯದಲ್ಲಿ ಪೆಟ್ರೋಲಿಯಂ ಬಹುರಾಷ್ಟ್ರೀಯ ಕಂಪನಿಗಳು ದೇಶದ ಎಲ್ಲಾ ವಿದ್ಯುತ್ ಉತ್ಪಾದನಾಯೋಜನೆಗಳ ವಿರುದ್ಧ ಕೂಗೆಬ್ಬಿಸಿವೆ ಎಂದು ಕೈಗಾದ" ಉದಾಹರಣೆ ನೀಡಿದರು.

ಪ್ರತಿಯೊಂದು ಹೊಸ ರೈಲ್ವೆ ಮಾರ್ಗಕ್ಕೆ ಉಪನಗರಗಳ ಪ್ರಯಾಣಕ್ಕೆ ನಷ್ಟಕೋರ ರೈಲ್ವೆ ಮಾರ್ಗಗಳಿಗೆ ಒಂದು ಹೊಸ ನಿಗಮ, ಕಂಪನಿ ಸ್ಥಾಪಿಸುವ, ಸಾರ್ವಜನಿಕರಿಂದ ಸಾಲ ಎಂಬ ಹೆಸರಿನಲ್ಲಿ ದೊಡ್ಡ ಬಂಡವಾಳಶಾಹಿಗಳ ವಶಕ್ಕೆ ರೈಲ್ವೆ ಮಾರ್ಗಗಳನ್ನೊಪ್ಪಿಸುವ ಯೋಜನೆಯನ್ನು ನಾವು ಪ್ರಬಲವಾಗಿ ವಿರೋಧಿಸುತ್ತೇವೆ. ಅದು ಹಿಂದಿನ ಸರ್ಕಾರದ ಖಾಸಗೀಕರಣದ ಆರ್ಥಿಕ ನೀತಿಯ ಮುಂದುವರಿಕೆ ಎಂದು ಅಭಿಪ್ರಾಯಪಟ್ಟರು.

ರೈಲ್ವೆ ಮಂಡಳಿಯಲ್ಲಿರುವ ನಾಲ್ಕಾರು ಜನರೇ ಸರ್ವಜ್ಞರೆಂಬಂತೆ ವರ್ತಿಸುವ ತೀರ್ಮಾನಗಳನ್ನು ಕೈಗೊಳ್ಳುವ ಪದ್ಧತಿ ತೊಲಗಬೇಕು. ರೈಲ್ವೆ ಆಡಳಿತ ಪ್ರಜಾ ಪ್ರಭುತ್ವೀಕರಣಗೊಳ್ಳಬೇಕು ಎಂದು ಕರೆ ನೀಡಿದರು.

ರೈಲ್ವೆ ಆಡಳಿತದ ನೌಕರರ ವಿರೋಧಿ ಧೋರಣೆ "ಗುತ್ತಿಗೆ ಪದ್ಧತಿ", ದಿನಗೂಲಿ ಪದ್ಧತಿಗಳ ವಿರುದ್ಧ ದನಿಯೆತ್ತಿದರು. ರೈಲ್ವೆ ಮಂತ್ರಿಗಳು ಹಾಗು ಸಚಿವಾಲಯ ಕೇವಲ ವಾಣಿಜ್ಯ, ಉದ್ದಿಮೆ ಮಂಡಳಿಗಳ ಸಲಹೆಯ ಮೇಲೆ ಅವರಿಗೆ ಮಾತ್ರ ಅನುಕೂಲಕರವಾಗಿನಡೆಯದಿರಲಿ ಎಂದು ಗುಡುಗಿದರು.

ಸ್ವಾಗತಾರ್ಹ ಚರ್ಚೆ ವಿನೂತನ ಅನುಭವ

ರಾಷ್ಟ್ರೀಯ ರಂಗದ ಸರ್ಕಾರ ಅನೇಕ ...ಷ್ಟ್ರೀಯ ಸಮಸ್ಯೆಗಳಿಗೆ ಸಂಬಂಧಿಸಿ ...ಂತೆ ಜನ ಸಮುದಾಯದ ವಿವಿಧ ಭಾಗಗಳ ಅಭಿಪ್ರಾಯವನ್ನು ಪಡೆ ...ಯುವ ಪ್ರಜಾಸತ್ತಾತ್ಮಕ ಪರಂಪರೆ ...ಯೊಂದನ್ನು ಆರಂಭಿಸಿದೆ. ಪಂಜಾಬ್, ...ಶ್ಮೀರ ಸಮಸ್ಯೆಗಳಂತಹ ಕಾಂಗ್ರೆಯಿಂದ ...ದಂಭೂತವಾಗಿ ಬೆಳಸಲ್ಪಟ್ಟ ಸಮಸ್ಯೆಗಳ ...ರಿಹಾರದ ಬಗ್ಗೆ ವಿ.ಪಿ.ಸಿಂಗ್ ಹಾಕಿಕೊಟ್ಟ ...ಮಾದರಿ ದೇಶದ ಎಲ್ಲ ಜನತೆಯ ...ಮೆಚ್ಚುಗೆ ಪಡೆದಿದೆ. ಅದೇ ಸಮಯ ...ಲ್ಲಿ ಯುವಜನರ ಸಮಸ್ಯೆಗಳ ಬಗ್ಗೆ ...ಯುವಕರ ವಿದ್ಯಾರ್ಥಿಗಳ ರಾಷ್ಟ್ರೀಯ ...ಸಂಘಟನೆಗಳನ್ನು, ಮಹಿಳೆಯರ ಬಗ್ಗೆ ...ಮಹಿಳಾ ಸಂಘಟನೆಗಳನ್ನು ಹಾಗೆಯೇ ...ಕಾರ್ಮಿಕರ, ರೈತರ ಸಂಘಟನೆಗಳನ್ನು ...ಪ್ರತ್ಯೇಕವಾಗಿ ಭೇಟಿ ಮಾಡುವ, ಅವರದೆ ...ಸಮಸ್ಯೆಗಳ ಬಗ್ಗೆ ಅವರ ಅಭಿಪ್ರಾಯ ...ವನ್ನು ತಾಳ್ಮೆಯಿಂದ ಕೇಳುವ ಅಭ್ಯಾಸ ...ಬೆಳೆಸಿಕೊಳ್ಳುತ್ತಿದೆ.

"ಅರರೇ ಎನ್ನಯ ಸಮಾನಾರಿಹರು" ...ಎಂಬ ಗರ್ವದಿಂದ ಕೇವಲ ಕೈಬೆರಳೆಣಿಕೆ ...ಯ ಆಪ್ತ ಅಧಿಕಾರಿಗಳನ್ನು ಆಪ್ತ ...ರಾಜಕೀಯ ಬಾಲ ಬಡುಕರನ್ನು ತಮ್ಮ ...ಟೇಜಿನ ಮೇಲಿನ ಕಂಪ್ಯೂಟರ್ ಅನ್ನು ...ಮಾತ್ರ ನೆಚ್ಚಿದ್ದ ತಮ್ಮ ಪಕ್ಷದ ...ನಾಯಕರು, ಎಂ.ಪಿ.ಗಳಿಗೂ ತಿಳಿಸದೆ ...ತೀರ್ಮಾನ ಕೈಗೊಳ್ಳುತ್ತಿದ್ದ ರಾಜೀವ್ ...ಗಾಂಧಿಯವರ 21 ನೆಯ ಶತಮಾನದ ...ದೃಷ್ಟಿಕ ವಿಮಾನಕ್ಕೂ ರಾಷ್ಟ್ರೀಯ ರಂಗ ಸರ್ಕಾರಕ್ಕೂ ಗಮನಾರ್ಹ ವ್ಯತ್ಯಾಸವಿದೆ. ಇದೇ ದಾರಿಯಲ್ಲಿ ಭಾರತದ ಆರ್ಥಿಕದಲ್ಲಿ ರೈಲ್ವೆಯ ಸ್ಥಿತಿಯ ಬಗ್ಗೆ ದೇಶದ ಹತ್ತಾರು ಕಡೆಗಳಲ್ಲಿ ಜನ ಸಾಮಾನ್ಯರ ಅಭಿಪ್ರಾಯ ಪಡೆಯಬೇಕು. ಅದೂ ರೈಲ್ವೆ ಬಜೆಟ್ ಮಂಡಿಸುವ ಮೊದಲು ಎಂಬ ಕ್ರಮವೊಂದನ್ನು ರೈಲ್ವೆ ಸಚಿವರು ಆರಂಭಿಸಿದ್ದಾರೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ದಕ್ಷಿಣ ರೈಲ್ವೆಯ, ಬೆಂಗಳೂರು ವಿಭಾಗೀಯ ಸಭೆಯಲ್ಲಿ ವಿವಿಧ ರಾಜಕೀಯ ಪಕ್ಷಗಳು, ಕಾರ್ಮಿಕ ಸಂಘಗಳ ಪ್ರತಿನಿಧಿಗಳು, ಪ್ರಯಾಣಿಕರ ವಿಭಿನ್ನ ಸಂಘಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಹಿಂದಿನ ರೈಲ್ವೆ ಸಚಿವ ಜಾಫರ್ ಷರೀಫ್ ಆದಿಯಾಗಿ ಎಲ್ಲರು ಈ ಉಪಕ್ರಮವನ್ನು ಒಕ್ಕೊರಲಿನಿಂದ ಸ್ವಾಗತಿಸಿದರು. ಸಿ.ಪಿ.ಐ(ಎಂ) ನಾಯಕ ಕಾಂ. ಸೂರ್ಯನಾರಾಯಣರಾವ್ ಇಂತಹ ಪ್ರಜಾಸತ್ತಾತ್ಮಕ ಕ್ರಮವೊಂದನ್ನು ಆರಂಭಿಸಿದುದಕ್ಕೆ ರಾಷ್ಟ್ರೀಯ ರಂಗ ಸರ್ಕಾರವನ್ನು ಹಾಗೂ ರೈಲ್ವೆ ಸಚಿವರನ್ನು ಅಭಿನಂದಿಸಿದರು.

ಅವಸರ ಅವಸರವಾಗಿ ಈ ಸಭೆಯನ್ನು ಕರೆದ ಬಗ್ಗೆ, ಇಂತಹ ಸಮಸ್ಯೆಯನ್ನು ಅಧ್ಯಯನ ಮಾಡಲು ಸಾಕಷ್ಟು ಕಾಲಾವಕಾಶ ದೊರೆಯದ್ದರ ಬಗ್ಗೆ ಮೊದಲಿನಲ್ಲಿ ಆಕ್ಷೇಪಗಳು ಕೇಳಿ ಬಂದವು. ಆದರೆ, ಇನ್ನು ಮೂರು ತಿಂಗಳ ಅವಧಿಯಲ್ಲಿ ಇಂತಹದೊಂದು ಸಭೆಯನ್ನು ಮತ್ತೆ ಕರೆಯಬೇಕು ಎಂದು ಎಲ್ಲರೂ ಒಮ್ಮತದಿಂದ ಒತ್ತಾಯಿಸಿದರು.

ಕಾಶ್ಮೀರ ಧೋರಣೆಗೊಂದು ಸ್ಪಷ್ಟ ದಿಕ್ಕು ಅಗತ್ಯ

ಕಾಶ್ಮೀರ ಕಣಿವೆಯಲ್ಲಿನ ಇತ್ತೀಚಿನ ...ಬೆಳವಣಿಗೆಗಳು ಎಲ್ಲಾ ದೇಶಪ್ರೇಮಿ ಶಕ್ತಿ...ಗಳಲ್ಲಿ ಬಹಳ ಆತಂಕ ಮೂಡಿಸಿದೆ. ಹೊಸ ಸರ್ಕಾರ ಈ ಸಮಸ್ಯೆಯನ್ನು ಪ್ರಾಮಾಣಿ...ಕತೆಯಿಂದ ಎದುರಿಸುವ ಕಾತುರ ...ತೋರಿದ್ದರೂ ಪರಿಸ್ಥಿತಿ ಇನ್ನೂ ಗಂಭೀರ...ವಾಗಿದೆ. ಕಣಿವೆಯಲ್ಲಿ ಈಗ ಮಾತು ...ನಡೆಯುತ್ತಿರುವುದು ಉಗ್ರಗಾಮಿಗಳದ್ದೇ, ...ಪ್ರತ್ಯೇಕತಾವಾದಿಗಳದ್ದೇ ಎಂದರೂ ತಪ್ಪಲ್ಲ. ...ಕರ್ಫ್ಯೂ, ಮತ್ತಿತರ ಕಟ್ಟುನಿಟ್ಟಾದ ಕ್ರಮಗಳಿಂದ ಅವರು ತಮ್ಮ ತಂತ್ರ ಬದಲಿಸಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ತೂರಿಕೊಳ್ಳುತ್ತಿದ್ದಾರೆ. ಪ್ರತಿಯೊಂದು ಕುಟುಂಬದಿಂದ ಒಬ್ಬ ವ್ಯಕ್ತಿಯನ್ನು ತಮ್ಮ ಹೋರಾಟಕ್ಕೆ ಕೊಡಬೇಕೆಂದು ಜನಗಳ ಮೇಲೆ ಒತ್ತಡ ತರುತ್ತಿದ್ದಾರೆ. ಇದನ್ನು ಎದುರಿಸಲು ಯಾವುದೇ ರಾಜಕೀಯ ಪ್ರಚಾರ ಇಲ್ಲದ್ದರಿಂದಾಗಿ ಜನ ಇದಕ್ಕೆ ಬಲಿಬೀಳಬೇಕಾಗುತ್ತಿದೆ.

ಸರಕಾರ ಏನೇ ಹೇಳಿದರೂ, ಸ್ಥಿತಿ ಸುಧಾರಿಸುವ ಬದಲು ಹದಗೆಡುತ್ತಿದೆ.

ಕಾಶ್ಮೀರ ವಿಧಾನಸಭೆಯನ್ನು ವಿಸರ್ಜಿಸುವ ಅಲ್ಲಿನ ರಾಜ್ಯಪಾಲರ ಇತ್ತೀಚಿನ ನಿರ್ಣಯ ಒಂದು ರಾಜಕೀಯ ಜಾಣ್ಮೆಯ ಕ್ರಮ ಎಂದು ಹೇಳಲು ಸಾಧ್ಯವಿಲ್ಲ. ಅದು ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತದೆ. ಈ ನಿರ್ಣಯದ ಮೂಲಕ ಒಂದು ಕಿರಿಕಿರಿಯನ್ನು ತಾನು ನಿವಾರಿಸಿರುವುದಾಗಿ ರಾಜ್ಯಪಾಲರು ಹೇಳಿದ್ದಾರೆ. ಅದೆಂದರೆ ಮಾರ್ಚ್ 1987ರಲ್ಲಿ ಮೋಸದ ಚುನಾವಣೆಗಳ ಮೂಲಕ ಈ ವಿಧಾನಸಭೆ ರಚಿತವಾಗಿತ್ತು ಎಂದುದು.

ಪುಟ ೪ಕ್ಕೆ



ಕಾಶ್ಮೀರ ಭಯೋತ್ಪಾದಕರು

ಕೊನೆಗೂ ಕಾಶ್ಮೀರದ ಸಮಸ್ಯೆಯ ...ಮೇಲೆ ಸರ್ವಪಕ್ಷ ಸಭೆ ನಡೆಯು...ತ್ತಿದೆ. ಆದರೆ ಇದಕ್ಕೆ ಮೊದಲು ...ಜಗಮೋಹನರನ್ನು ರಾಜ್ಯಪಾಲರ...ನ್ನಾಗಿ ನೇಮಿಸಿ, ಪರಿಣಾಮವಾಗಿ ...ಫಾರೂಕ್ ಸರ್ಕಾರ ರಾಜೀನಾಮೆ ...ನೀಡಿದಾಗ ವಿರೋಧಪಕ್ಷಗಳು ಪ್ರತಿಭಟಿ...ಸಲಿಲ್ಲ. ತಕ್ಷಣ ಅದಕ್ಕೆ ಒಗೊಟ್ಟು ...ಪ್ರಧಾನಿ ಬೇಗನೇ ಸರ್ವಪಕ್ಷ ಸಭೆ ...ಕರೆಯುವುದಾಗಿ ಹೇಳಿದರು. ಆದರೆ ನಡೆಯಲಿಲ್ಲ. ಆದರೆ ಈ ನಡುವೆ ವಿಧಾನಸಭೆಯನ್ನು ವಿಸರ್ಜಿಸುವಂತಹ ಧೈರ್ಯ ರಾಜ್ಯಪಾಲರಿಗೆ ಹೇಗೆ ಬಂತು?

370ನೇ ವಿಧಿಯನ್ನು ಕಿತ್ತು ಹಾಕಬೇಕೆಂದು ಬೊಬ್ಬಿಡುವ ಬಿ.ಜೆ.ಪಿ. ಅದೇ ವಿಧಿಯ ಪ್ರಕಾರ ರಾಜ್ಯಪಾಲರು ಕೈಗೊಂಡ ಕ್ರಮಗಳನ್ನು ತಕ್ಷಣ ಸ್ವಾಗತಿಸಿದ ಏಕೈಕ ಪಕ್ಷ. ಬಿ.ಜೆ.ಪಿ.ಯ ಕಾಶ್ಮೀರ ಧೋರಣೆಯನ್ನು ರಾಜ್ಯಪಾಲರು ಹೇಗೆ ಜಾರಿ ಮಾಡುತ್ತಿದ್ದಾರೆ?

ಸರ್ಕಾರದ ಕಾಶ್ಮೀರ ಧೋರಣೆಗೊಂದು ಸ್ಪಷ್ಟ ದಿಕ್ಕು ನೀಡಬೇಕಾದುದು ಅಗತ್ಯ. ಸವಾಲನ್ನುನಾಲ್ಕು ರಂಗಗಳಲ್ಲಿ ಹೇಗೆ ಎದುರಿಸಬಹುದು ಎಂದು ಕಾಂ. ಹರಿಕಿಷನ್ ಸಿಂಗ್ ಸುರ್ಜಿತ್‌ವಿಶ್ಲೇಷಿಸುತ್ತಾರೆ.

ಭಾರತ ಅಧ್ಭುತ ರಾಷ್ಟ್ರವಾಗಬಲ್ಲದು

ಬೆಂಗಳೂರಿನ ಸಾಹಿತ್ಯ ಸಮಾವೇಶದಲ್ಲಿ ಸಾಹಿತಿ ಪಿ. ಲಂಕೇಶ್

ಕನ್ನಡ ಭಾಷೆ. ಸಂಸ್ಕೃತಿಯ ಅಭಿವೃದ್ಧಿ ವಿಕೇಂದ್ರಿಕರಣದಿಂದ ಮಾತ್ರ ಸಾಧ್ಯ ಎನ್ನುವ ಲಂಕೇಶರು ರಾಷ್ಟ್ರೀಯ ರಂಗದ ಸರ್ಕಾರ ಇಂದು ಜನತೆಗೆ ಅವಶ್ಯವಾಗಿರುವುದು ಈ ಕಾರಣಕ್ಕಾಗಿಯೇ ಎಂದು ಪ್ರತಿಪಾದಿಸುತ್ತಾರೆ. 1957 ರಲ್ಲಿ ಕಾಂ. ಇ.ಎಂ.ಎಸ್ ರವರ ಸರ್ಕಾರ ಕೇರಳದಲ್ಲಿ ಅಧಿಕಾರಕ್ಕೆ ಬಂದಂದಿನಿಂದ ಪಕ್ಷ ಪ್ರತಿಪಾದಿಸಿರುವ ಈ ತತ್ವವನ್ನು ಲಂಕೇಶರ ಮಾತುಗಳಲ್ಲಿ ಓದಿ:

ಕೇಂದ್ರದಲ್ಲಿ ಎರಡನೆಯ ಬಾರಿಗೆ ವಿರೋಧ ಪಕ್ಷಗಳು ಆಡಳಿತ ಸೂತ್ರ ಹಿಡಿದಿವೆ: ರಾಷ್ಟ್ರೀಯ ರಂಗದ ಸರ್ಕಾರವನ್ನು ತಮಗೆ ತಾವು ನೀಡಿಕೊಂಡಿರುವ ಭಾರತದ ಜನರ ಆಶಯಗಳು ಸ್ಪಷ್ಟವಾಗಿವೆ: ದಿನನಿತ್ಯದ ರಾಜಕೀಯ ಒತ್ತಡಗಳಲ್ಲಿ ಈ ಆಶಯಗಳು ಮಬ್ಬಾಗದಿರಲಿ. ಮರೆತುಹೋಗದಿರಲಿ ಎಂಬ ಕಾರಣಕ್ಕೆ ಇಲ್ಲಿ ಇದನ್ನು ಹೇಳುತ್ತಿದ್ದೇನೆ. ಕಳೆದ ನಲವತ್ತೂರು ವರ್ಷದ ಕೇಂದ್ರಿಕೃತ. ಗೊಂದಲಮಯ. ಪ್ರಚ್ಛನ್ನ ಭ್ರಷ್ಟತೆಯ. ಜಾತೀಯತೆಯ ಆಡಳಿತದಲ್ಲಿ ಭಾರತದ ರಾಜ್ಯಗಳು ಬಸವಳಿದವು. ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳುವ ಆರ್ಥಿಕ. ರಾಜಕೀಯ ಶಕ್ತಿಯನ್ನು ಹೊಂದಿರದ ರಾಜ್ಯಗಳು ಭಾರತದ ಸಂಪತ್ತಿಗೆ. ಭಾರತದ ಮುನ್ನಡೆಗೆ ತಮ್ಮ ಅರ್ಥಪೂರ್ಣ ಕೊಡುಗೆ ನೀಡುವುದರಲ್ಲಿ ವಿಫಲವಾದವು. ಈಗ ಎಲ್ಲೆಲ್ಲೂ ಕಂಡುಬರುತ್ತಿರುವ ಹಿಂಸೆ. ಅನ್ಯಾಯ. ಪ್ರತಿಭಟನೆ. ಸಿನಿಕತನ. ಇವುಗಳಿಗೆಲ್ಲ ಎರಡು ಮುಖಗಳಿರುವುದು ಸ್ವಯಂವೇದ್ಯ: ಇದು ಒಂದು ಕಡೆ ಭಾರತದ ರಾಜ್ಯಗಳ ಕಟ್ಟಕಡೆಯ ಹಳ್ಳಿಯ. ಕೆಳಸ್ತರದ ಶ್ರೀಸಾಮಾನ್ಯನ ಶಿಕ್ಷಣ. ತರಬೇತಿ. ಉದ್ಯೋಗ. ವಸತಿಯ ಭರವಸೆ ಕೂಡ ನೀಡಲಾಗದಷ್ಟು ಅಸೂಕ್ಷ್ಮವೂ. ಅಮಾನವೀಯವೂ ಆಗಿಹೋಗಿರುವ ಕೇಂದ್ರದ ವಿರುದ್ಧ ಪ್ರತಿಭಟನೆ; 43 ವರ್ಷದ ಸ್ವತಂತ್ರ ಭಾರತ ಪೂರ್ಣ ಶಿಕ್ಷಣ. ಪೂರ್ಣ ಉದ್ಯೋಗ ನೀಡಲಾ ಗದಂಥ ಸ್ಥಿತಿ ತಲುಪಿರುವುದಕ್ಕೆ ಜನತೆಯ ಪ್ರತಿಕ್ರಿಯೆ. ಪ್ರತಿಯೊಂದು ರಾಜ್ಯವೂ ತನ್ನದೇ ಸ್ಫೂರ್ತಿಯಿಂದ. ತನ್ನದೇ ಕುಶಲತೆಯಿಂದ ಪ್ರಗತಿ ಸಾಧಿಸಿದರೆ ಭಾರತ ಒಟ್ಟಾರೆಯಾಗಿ ಅದ್ಭುತ ರಾಷ್ಟ್ರವಾಗಬಲ್ಲದು. ಇದು ವಿಕೇಂದ್ರಿಕರಣದ ಮುಖ್ಯ ಉದ್ದೇಶ. ಕೇಂದ್ರ ಮತ್ತು ರಾಜ್ಯಗಳೆರಡೂ ಸಮಾನ ಹೊಣೆಗಾರಿಕೆಯ. ಸಮಾನ ಉದ್ದೇಶದ ಘಟಕಗಳಾದೊಡನೆ ಇಲ್ಲಿ ಹೊಸ ರಾಜಕೀಯ. ಆರ್ಥಿಕ. ಸಾಂಸ್ಕೃತಿಕ ಕ್ರಾಂತಿ ಆರಂಭವಾಗುತ್ತದೆ. ಭಾರತದ ಒಗ್ಗಟ್ಟು ಮತ್ತು ಉಜ್ವಲ ಭವಿಷ್ಯದ ಬಗ್ಗೆ ವಿಶ್ವಾಸವುಳ್ಳ ಜನತೆ ರಾಷ್ಟ್ರೀಯ ರಂಗದ ಸರ್ಕಾರ ತಂದಿರುವುದರ ಹಿಂದಿನ ಅಭೀಷ್ಟೆ. ಸೂರ್ತಿ ಇದು.

ಇದು ಕರ್ನಾಟಕ ಮತ್ತು ಕನ್ನಡಕ್ಕೆ ನೇರವಾಗಿ ಸಂಬಂಧಿಸಿದ ವಿಷಯವೆಂಬ ಕಾರಣಕ್ಕೆ ಮೇಲಿನದನ್ನು ಹೇಳಿದ್ದೇನೆ. ಕರ್ನಾಟಕ. ಗುಜರಾತ್ ಅಥವಾ ಪಶ್ಚಿಮ ಬಂಗಾಳ ರಾಜ್ಯಗಳು ತಮ್ಮೊಳಗೇ ರಾಜಕೀಯ ವಿಕೇಂದ್ರೀಕರಣ ಸಾಧಿಸಿದರೆ ಸಾಲದು; ಇದು ದಿಲ್ಲಿಯ ವಿಕೇಂದ್ರಿಕರಣದ ಭಾಗವಾದಾಗಲೇ ಕಟ್ಟಕಡೆಯ ಹಳ್ಳಿಗೂ ಚೈತನ್ಯ ಬರಲು ಸಾಧ್ಯ. ಒಂದೊಂದು ಜಿಲ್ಲೆಯಲ್ಲಿ ಸರಾಸರಿ ಇಪ್ಪತ್ತು ಲಕ್ಷ ಜನ. ಒಂದೊಂದು ಲೋಕಸಭಾ ಕ್ಷೇತ್ರದಲ್ಲಿ ಸರಾಸರಿ ಹನ್ನೆರಡು ಲಕ್ಷ ಜನ ಅಥವಾ ಎಂಟು ಲಕ್ಷ ಮತದಾರರಿರುವ ಕರ್ನಾಟಕದಂಥ ರಾಜ್ಯದ ದೃಷ್ಟಿಯಲ್ಲಿ ಕೇಂದ್ರ ಸರ್ಕಾರ ರಾಜ್ಯದ ಸಂಪತ್ತನ್ನು ಕೊಂಡು ಹೋಗುವ. ಲೋಕಸಭೆ ಔಪಚಾರಿಕ ಭರವಸೆ ನೀಡುವ ಸಂಸ್ಥೆಗಳಾಗುತ್ತವೆ. ಒಂದು ಚಿಕ್ಕ ವಿದ್ಯುತ್ ಘಟಕ ಆರಂಭಿಸಲು. ಒಂದು ಉಕ್ಕಿನ ಕಾರ್ಖಾನೆ ರೂಪಿಸಲು. ಒಂದು ಕಾಗದದ ಕಾರ್ಖಾನೆ ಸಂಘಟಿಸಲು. ಒಂದು ಮುಖ್ಯ ರಸ್ತೆ. ರೈಲು ಮಾರ್ಗ ನಿರ್ಮಿಸಿಕೊಳ್ಳಲು ಕೇಂದ್ರದೆದುರು ಕೈಕಟ್ಟಿ ನಿಲ್ಲುವ ಪರಿಸ್ಥಿತಿ ಇದೆ: ಇಲ್ಲಿಯ ಗ್ರಾಮಗಳ ಶಾಲೆ. ಕೆರೆ. ರಸ್ತೆ. ಫಸಲು. ಮಾರ್ಕೆಟ್ಟು ಯಾವುದರಲ್ಲೂ ಪ್ರಯೋಗಶೀಲತೆ ತೋರುವ ಶಕ್ತಿ ರಾಜ್ಯಗಳಿಗೆ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ರಾಜ್ಯಗಳ ಜನತೆ ದಿಗ್ಭ್ರಮೆಗೊಂಡರೆ ಆಶ್ಚರ್ಯಪಡಬೇಕಾಗಿಲ್ಲ.

ಕನ್ನಡ ಭಾಷೆ. ಸಾಹಿತ್ಯ. ಸಂಸ್ಕೃತಿ. ಶೂನ್ಯದಲ್ಲಿ. ಜನತೆಯ ದಿನನಿತ್ಯದ ಆಶೆ. ನಿರಾಶೆಯನ್ನು ಪರಿಗಣಿಸದಿರುವ ನಿರ್ವಾತ. ನಿರ್ದ್ಯಷ್ಯ ಸ್ಥಿತಿಯಲ್ಲಿ ಬೆಳೆಯುವುದಿಲ್ಲ. ಸಾವಿರಾರು ಮೈಲಿಯಾಚೆಯ ನಿರ್ಜೀವಸೂತ್ರ ಇಲ್ಲಿಯ ಜೀವಂತ ಜನರನ್ನು ನಡೆಸಲೆತ್ನಿಸುವುದು ತಪ್ಪು. ಒಂದು ರಾಜ್ಯದ ಜೀವಂತ ಜನರೆಂದರೆ. ಇಲ್ಲಿ ಉಳುವವರು. ಶ್ರಮಿಸುವವರು. ಉತ್ಪಾದಿಸುವವರು. ಕಲಿಯುವವರು. ಉಸ್ತುವಾರಿ ನೋಡಿಕೊಳ್ಳುವವರು. ಕಾನೂನು ಕಟ್ಟಳೆ ನಿರ್ವಹಿಸುವವರು ಇಲ್ಲಿಯ ಸಾಧ್ಯತೆ. ಸ್ಥಳ. ಸಂಪತ್ತು. ನೆಲ. ಜಲವನ್ನು ಬಲ್ಲವರು. ಇವರ ಕಾರ್ಯಕ್ರಮ. ಕ್ರಿಯೆಗಳಿಗೆ ಇವರೇ ಬಹುಪಾಲು ಜವಾಬ್ದಾರರಾದೊಡನೆ ಇಲ್ಲಿಯ ಭಾಷೆ ಈ ಕಾರ್ಯಕ್ರಮ ಮತ್ತು ಕ್ರಿಯೆಯ ಅವಿಭಾಜ್ಯ ಅಂಗವಾಗುತ್ತದೆ.

ಒಂದು ಜನತೆಗೆ ಅವರ ಭಾಷೆ ಎಷ್ಟು ಮುಖ್ಯ ಎಂಬುದನ್ನು ನಿಜವಾಗಿಯೂ ಗಾಢ ವ್ಯವಹಾರದಲ್ಲಿ ಅಥವಾ ಗಾಢ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿರುವವರಿಗೆ ಗೊತ್ತಿರುತ್ತದೆ. ಇದನ್ನು ಒಂದು ಉದಾಹರಣೆಯೊಂದಿಗೆ ವಿವರಿಸುತ್ತೇನೆ. ಭಾರತದ ಸಮಗ್ರತೆಯನ್ನು ಕಾಪಾಡುವುದಕ್ಕಾಗಿ ಮೂರು ಭಾಷೆಗಳ ಸೂತ್ರವನ್ನು ಮುಂದಿಟ್ಟು ಹಿಂದಿ. ಇಂಗ್ಲಿಷ್. ಭಾಷೆಗಳಿಗೆ ಕನ್ನಡಕ್ಕೆ ಕೊಟ್ಟಷ್ಟೇ ಪ್ರಾಮುಖ್ಯ ಕೊಡುವ ಜನರಿದ್ದಾರೆ. ಆದರೆ ಕೇಂದ್ರ ಕೆಲವೇ ಕೆಲವು ಮುಖ್ಯ ಜವಾಬ್ದಾರಿ ಹೊತ್ತು ಮಿಕ್ಕೆಲ್ಲ ವ್ಯವಹಾರವನ್ನು ರಾಜ್ಯಕ್ಕೆ ವಹಿಸಿದೊಡನೆ ಹಿಂದಿಯ ಬಳಕೆ. ಇಂಗ್ಲಿಷ್ ಬಳಕೆ ಅನಗತ್ಯವೆನ್ನುವಷ್ಟು ಕಡಿಮೆಯಾಗುತ್ತದೆ. ಅಲ್ಲದೆ ರಾಷ್ಟ್ರಮಟ್ಟದ ಚಟುವಟಿಕೆಗಳಲ್ಲಿ ಭಾಗವಹಿಸಲು ಇಚ್ಛಿಸುವವರು. ಅಂತರಾಷ್ಟ್ರೀಯ ಮಟ್ಟದಲ್ಲಿ ಮಿಂಚಲು ಬಯಸುವವರು ಕ್ಷಿಪ್ರವಾಗಿ ಹಿಂದಿ. ಇಂಗ್ಲಿಷ್. ಕಲಿಯುವ ಉಪಾಯಗಳು. ಶಿಕ್ಷಣ ತಂತ್ರಗಳು ಇವೆ. ಅಲ್ಲದೆ. ರಾಜ್ಯಕ್ಕೆ ಅಸಂಖ್ಯ ಕೆಲಸಗಳು. ಕರ್ತವ್ಯಗಳು ಇದ್ದಾಗ ಈ ಕೆಲಸ. ಕರ್ತವ್ಯ. ಉದ್ಯಮ. ಆಡಳಿತದಲ್ಲಿ ಭಾಗವಹಿಸುವುದರ ಮೂಲಕವೇ ಸಂಸತ್ತಿನಲ್ಲಿ ಪಾಲುಗೊಳ್ಳುವುದು ಅಲ್ಪಸಂಖ್ಯಾತ ಭಾಷಾಗುಂಪುಗಳಿ[ge] ಅಗತ್ಯವೂ. ಹರ್ಷದ ಜವಾಬ್ದಾರಿಯೂ ಆಗಿ[…] ಕನ್ನಡ ಬಳಸುವುದು ಅನಿವಾರ್ಯವಾಗುತ್ತದೆ. ಒಂದು ರಾಜ್ಯ ನಿರಂತರ ಆರ್ಥಿಕ ಚಟುವಟಿ[ಕೆ]ಯಲ್ಲಿ ತೊಡಗಿ ಶ್ರೀಮಂತವಾಗತೊಡಗಿದೊಡನೆ ರಾಜ್ಯ ಭಾಷೆಯ ಬಳಕೆ ಸಹಜವಾಗುತ್ತದೆ. ಹಾಗೆಯೇ ಪ್ರತಿಯೊಂದು ಅಲ್ಪಸಂಖ್ಯಾತ ಗುಂಪಿನ ಮಾತೃ ಭಾಷೆಗೂ ಮನ್ನಣೆ ನೀಡಿ ಬೆಳೆಸುವುದು ಸಾಧ್ಯವಾಗುತ್ತದೆ ತನ್ನ ಮಾತೃಭಾಷೆ[…]ಗಾಗಿ ಹೋರಾಡುವ ಪ್ರತಿಯೊಬ್ಬ ವ್ಯಕ್ತಿಯೂ ಎಲ್ಲರ ಮಾತೃಭಾಷೆಯ ಪ್ರಾಮುಖ್ಯ ಅರಿತಿರುತ್ತಾನೆ: ಒಂದು ಪ್ರದೇಶದ ಮಾತೃಭಾಷೆಗೂ ರಾಜ್ಯಭಾಷೆಗೂ ಇರುವ ಸಂಬಂಧ. ವ್ಯತ್ಯಾಸ ತಿಳಿದಿರುತ್ತಾನೆ. ರಾಜ್ಯಭಾಷೆ ಬಹುಸಂಖ್ಯಾತ ಜನರ ಮಾತೃಭಾಷೆ. ಆಡಳಿತ ಭಾಷೆ. ವ್ಯವಹಾರ ಭಾಷೆ. ಅದು ನಮ್ಮಲ್ಲಿ ಕನ್ನಡ: ಹಾಗೆಯೇ ಬಳ್ಳಾರಿಯ ಒಂದು ಹಳ್ಳಿಯೊಂದರಲ್ಲಿ ವಾಸಿಸುವ ತೆಲುಗರ ಆಡಳಿತಭಾಷೆ. ವ್ಯವಹಾ[ರ] ಭಾಷೆ ಕನ್ನಡ: ಅಂತೆಯೇ ಅವರೆಲ್ಲ[ರ] ಮಾತೃಭಾಷೆಯನ್ನು ನಾಶಮಾಡುವುದು ಕರ್ನಾಟ[ಕ] ಆಡಳಿತದ ಉದ್ದೇಶವಾಗಕೂಡದು.

ಇದು ಒಂದು ರಾಜ್ಯ ಗಾಢ ಕ್ರಿಯಾಶೀಲತೆ[…]ಗಳಿಸಲು ಬೇಕಾದ ಸ್ವಾಯತ್ತತೆ. ಸ್ವಾಯತ್ತ[ತೆ]ಯಿದ ಬಂದ ಹೊಣೆಗಾರಿಕೆ ಮತ್ತು ಸಂಪ[ತ್ತಿ]ನಿಂದ ಸಾಧ್ಯವಾಗುತ್ತದೆ. ಕರ್ನಾಟಕದಲ್ಲಿರುವ ಮರಾಠಿ ಜನರ ಮಾತೃ ಭಾಷೆಯನ್ನು ರಕ್ಷಿಸುವುದು. ಮಹಾರಾಷ್ಟ್ರದಲ್ಲಿರುವ ಕೊಲ್ಹಾಪುರ[…] ಸೊಲ್ಲಾಪುರದ ಕನ್ನಡಿಗರ ಮಾತೃಭಾ[ಷೆ…] ರಕ್ಷಿಸುವುದು ಎರಡೂ ರಾಜ್ಯಗಳ ಕರ್ತವ್ಯ.

ವಿಶ್ವ ಕಮ್ಯುನಿಸ್ಟ್ ಚಳುವಳಿಯ ಕುರಿತು ಒಂದು ಕಿರು ನೋಟ

ಪೂರ್ವ ಯುರೋಪ್ ರಾಷ್ಟ್ರಗಳ ಇತ್ತೀಚಿನ ಬೆಳವಣಿಗೆಗಳು ಅನೇಕರಲ್ಲಿ ವಿಭಿನ್ನ ಭಾವನೆಗಳನ್ನು ಮೂಡಿಸಿವೆ. ಈ ಹಿನ್ನೆಲೆಯಲ್ಲಿ ವಿಶ್ವ ಕಮ್ಯುನಿಸ್ಟ್ ಚಳುವಳಿಯ ಒಟ್ಟಾರೆ ನೋಟದ ಅವಶ್ಯಕತೆಯ ಬಗ್ಗೆ ಕಾಂ. ಪಿ. ರಾಮಚಂದ್ರರಾವ್ ಬರೆಯುತ್ತಾರೆ.

1848 ವಿಶ್ವದ ಚರಿತ್ರೆಯಲ್ಲಿ ಒಂದು ಮಹತ್ವದ ಸಂವತ್ಸರ. ಆ ವರ್ಷ ಜಗತ್ತಿನ ಜಾಗೃತ ಕಾರ್ಮಿಕ ವರ್ಗಕ್ಕೆ "ತಮ್ಮ ಕೈ ಕಾಲುಗಳಿಗೆ ಹಾಕಿದ ಬಂಡವಾಳಶಾಹಿ ಸಂಕೋಲೆಗಳನ್ನು ಮುರಿಯೋಣ ಬಾ" ಎಂದು ಕರೆಕೊಟ್ಟ; ಮಾರ್ಕ್ಸ್ ಮತ್ತು ಎಂಗೇಲ್ಸ್‌ರಿಂದ ರಚಿಸಲ್ಪಟ್ಟ "ಕಮ್ಯುನಿಸ್ಟ್ ಘೋಷಣೆ" ಪ್ರಕಟವಾದ ಸಂವತ್ಸರ.

ಅದರ ಕೆಲವು ವಾಕ್ಯಗಳನ್ನು ಕೇಳಿರಿ: ಮಾನವ ಚರಿತ್ರೆಯು ವರ್ಗಾವರ್ಗಗಳ ನಡುವಿನ ಘರ್ಷಣೆಯಿಂದ ಮುನ್ನಡೆಯಿತು.. ಇಂದು ಬಂಡವಾಳ ವರ್ಗಕ್ಕೆ ಸಿಂಹ ಸ್ವಪ್ನವಾಗಿ. ನಿಂತಿದೆ ಕಾರ್ಮಿಕ ವರ್ಗ. ಶೋಷಣೆ ಮತ್ತು ಅಸಮಾನತೆಯ ಮೇಲೆ ನಿಂತ ಬಂಡವಾಳ ಶಾಹಿ ಜಗತ್ತು ಕಾರ್ಮಿಕ ವರ್ಗದ ಮೂಲಕ ತನ್ನ ವಿಮೋಚನೆಯನ್ನು ಕಾಣುತ್ತದೆ. ಇದು ಕಾಲದ ಚರಿತ್ರೆಯ ನಿಯಮ. ಕಾರ್ಮಿಕ ವರ್ಗಕ್ಕೆ ಸಮಾಜದಲ್ಲಿ ಕಳೆದುಕೊಳ್ಳಲು ಕೈಕಾಲುಗಳಿಗೆ ಹಾಕಿದ ಸಂಕೋಲೆಗಳಲ್ಲದೆ ಬೇರೇನೂ ಇಲ್ಲ. ಜಗತ್ತಿನ ಕಾರ್ಮಿಕರೇ ಒಗ್ಗಟ್ಟಾಗಿರಿ.

ಕಳೆದ 142 ವರ್ಷಗಳ ಜಾಗತೀಕ ಚರಿತ್ರೆಯು ಈ ಬಂಡವಾಳ ಶಾಹಿ - ಕಾರ್ಮಿಕ ವರ್ಗಗಳ ನಡುವಿನ ಸರ್ವತೋಮುಖ, ಆರ್ಥಿಕ, ಸಾಮಾಜಿಕ ಮತ್ತು ಸೈದ್ಧಾಂತಿಕ ವರ್ಗ ಘರ್ಷಣೆಯ ಚರಿತ್ರೆಯಾಗಿದೆ ಎಂಬುದನ್ನು ಸಾಧಿಸಿ ತೋರಿಸಿದೆ.ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಆಸಿದ ದಾರಿಯಲ್ಲಿ ಜಗತ್ತು ಸಾಗುತ್ತಿರುವುದನ್ನು ಈ ಚರಿತ್ರೆ ತೋರಿಸಿಕೊಟ್ಟಿದೆ.

1857-60 ರಲ್ಲಿ ಮಾರ್ಕ್ಸ್‌ರು ತಮ್ಮ ಅತ್ಯಮೂಲ್ಯವಾದ ವೈಜ್ಞಾನಿಕ ಗ್ರಂಥ "ಬಂಡವಾಳ"ವನ್ನು ತಮ್ಮ 20 ವರ್ಷಗಳ ಶ್ರಮದಿಂದ ಬರೆದು ಪ್ರಕಟಿಸಿ ಜಗತ್ತಿನಲ್ಲಿ ಬಂಡವಾಳ ಶಾಹಿ ಪದ್ಧತಿಯು ಒಂದಲ್ಲ ಒಂದು ದಿನ ತನ್ನೊಳಗಿನ ಮೂಲ ವೈರುಧ್ಯದ ಫಲವಾಗಿ ಅವಸಾನ ಹೊಂದುವುದು ಅನಿವಾರ್ಯ. ಅದರ ಸ್ಥಾನದಲ್ಲಿ ಸಮಾಜವಾದಿ ಪದ್ಧತಿಯು ಸ್ಥಾಪಿತವಾಗುವುದೂ ಅಷ್ಟೇ ಅನಿವಾರ್ಯ.

ಈ ಪ್ರಕ್ರಿಯೆಯನ್ನೇ ಬಂಡವಾಳಶಾಹಿ ಪದ್ಧತಿಯಿಂದ ಸಮಾಜವಾದಿ ಪದ್ಧತಿಯೆಡೆಗೆ ಜಗತ್ತು ಸಾಗುತ್ತಿರುವ ಪ್ರಕ್ರಿಯನ್ನೇ ನಾವು ನಮ್ಮ ದಿನಗಳಲ್ಲಿ ಕಾಣುತ್ತಾ ಬಂದಿದ್ದೇವೆ. 1917 ಅಕ್ಟೋಬರ್ ಸಮಾಜವಾದಿ ಕ್ರಾಂತಿಯು ಈ ಪ್ರಕ್ರಿಯೆಗೆ ನಾಂದಿಯಾಯಿತು.

1917 ಅಕ್ಟೋಬರ್ ಕ್ರಾಂತಿಯ ನಂತರದ ಈ 73 ವರ್ಷಗಳಲ್ಲಿ ಈ ಪ್ರಕ್ರಿಯೆಯನ್ನು ನಾವು ಜಗತ್ತಿನಾದ್ಯಂತ ಕಾಣುತ್ತೇವೆ.

ಲೆನಿನರು ಈ ಪ್ರಕ್ರಿಯೆಯನ್ನು ನಾವು ಒಂದು ರಾಷ್ಟ್ರದ ಹಿನ್ನೆಲೆಯಲ್ಲಿ ಕಾಣಬಾರದೆಂದೂ, ನಾವು ಈ ಪ್ರಕ್ರಿಯೆಯನ್ನು ಜಾಗತೀಕ ಹಿನ್ನೆಲೆಯಲ್ಲಿ ಕಾಣಬೇಕೆಂದೂ ತಮ್ಮ "ಸಾಮ್ರಾಜ್ಯಶಾಹಿ ಬಂಡವಾಳಶಾಹಿ ಪದ್ಧತಿಯ ಅತ್ಯುನ್ನತ ಘಟ್ಟ" ಎಂಬ ಕೃತಿಯಲ್ಲಿ ಸ್ಪಷ್ಟಪಡಿಸಿದ್ದರು.

ಈಗ ಜಗತ್ತಿನಲ್ಲಿ ಏನೇ ಘರ್ಷಣೆ ಸ್ಫೋಟ, ಕ್ರಾಂತಿ, ಪ್ರತಿಕ್ರಾಂತಿ, ಬದಲಾವಣೆ, ಸುಧಾರಣೆ ಇತ್ಯಾದಿ ನಡೆದರೂ ಅದನ್ನು ಈ ಜಾಗತಿಕ ಪ್ರಕ್ರಿಯೆಯಾಗಿ ಕಾಣ ಬೇಕೇ ವಿನಹಃ ಪ್ರತ್ಯೇಕವಾಗಿ ಕಾಣಬಾರದು.

ಈಗ ಎಲ್ಲಾ ಬದಲಾವಣೆಗಳು ಜಾಗತಿಕ ಬಂಡವಾಳ ವರ್ಗ ಮತ್ತು ಜಾಗತಿಕ ಕಾರ್ಮಿಕ ವರ್ಗದ ಜಾಗತಿಕ ಘರ್ಷಣೆಯ ಭಾಗವಾಗಿ ಕಾಣಬೇಕಾಗಿದೆ.

ಇದೊಂದು "ಸರ್ವವ್ಯಾಪಿ ಯುದ್ಧ"ದಂತಹ ಪ್ರಕ್ರಿಯೆ. ಇದರಲ್ಲಿ ಸ್ವಾಭಾವಿಕವಾಗಿ ಹಿನ್ನಡೆ, ಮುನ್ನಡೆ, ಸಾಧನೆ, ಪ್ರತಿಸಾಧನೆ, ಕ್ರಾಂತಿಯ ವಿಜಯ ಮತ್ತು ಪ್ರತಿಕ್ರಾಂತಿಯ ವಿಜಯ" ಇತ್ಯಾದಿಗಳು ನಡೆಯುತ್ತದೆ. ಒಂದೆಡೆ

ಹೋರಾಟದ ಹಕ್ಕಿಗಾಗಿ 22 ಪ್ರಾಣಗಳ ಬಲಿದಾನ

ಫೆಬ್ರವರಿ 11, 1950. ನಲ್ವತ್ತು ವರ್ಷಗಳ ಹಿಂದೆ. ನಮ್ಮ ಗಣತಂತ್ರ ಸ್ಥಾಪನೆಗೊಂಡು 16 ದಿನಗಳಾಗಿತ್ತಷ್ಟೆ. ಸೇಲಂ ಸೆಂಟ್ರಲ್ ಜೈಲಿನಲ್ಲಿ ಪೋಲೀಸರು ನಿರಾಯುಧ ಕೈದಿಗಳ ಮೇಲೆ ಗುಂಡು ಹಾರಿಸಿದರು. 17 ಮಂದಿ ಸ್ಥಳದಲ್ಲೆ ಸತ್ತರು. 5 ಮಂದಿ ಆಸ್ಪತ್ರೆಯಲ್ಲಿ ಅಸು ನೀಗಿದರು. ನೂರಾರು ಮಂಧಿ ಗಾಯಗೊಂಡರು. ಇವರೆಲ್ಲಾ ರಾಜಕೀಯ ಕೈದಿಗಳು. ಎಲ್ಲರೂ ಕಮ್ಯುನಿಸ್ಟರು. ಜೈಲಿನ ಅಮಾನವೀಯ ವಾತಾವರಣದ ವಿರುದ್ಧ ತಮ್ಮ ಸಾಮಾನ್ಯ ಹಕ್ಕುಗಳಿಗಾಗಿ ದೇಶಾದ್ಯಂತ ರಾಜಕೀಯ ಕೈದಿಗಳು ಹೋರಾಟ ನಡೆಸಿದ್ದರು. ಸೇಲಂ ಸೆಂಟ್ರಲ್ ಜೈಲಿನಲ್ಲೂ ಶಾಂತಿಯುತ ಸತ್ಯಾಗ್ರಹ ನಡೆಸಿದ್ದ ನೂರಾರು ಕೈದಿಗಳನ್ನು ಒಂದೆಡೆ ಕೂಡಿಹಾಕಿದರು. ಗಂಡು ಹಾರಿಸಿದರು.

ದೇಶಾದ್ಯಂತ ಈ ಪಾಶವೀ ಕೃತ್ಯದ ವಿರುದ್ಧ ಪ್ರತಿಭಟನೆ ವ್ಯಕ್ತಗೊಂಡಿತು.

ಮೂರು ವರ್ಷಗಳ ಹಿಂದೆ ಬ್ರಿಟಿಶ್ ಸಾಮ್ರಾಜ್ಯಶಾಹಿಯಿಂದ ಸ್ವಾತಂತ್ರ್ಯ ದೊರೆತರೂ ಹೊಸ ಕಾಂಗ್ರೆಸ್ ಅಳರಸರು ದುಡಿಯುವ ಜನಗಳ ಮೇಲೆ ದುಷ್ಟ ಆಕ್ರಮಣ ನಡೆಸಲಾರಂಭಿಸಿದ್ದರು. ಜನ ಅನ್ನಕ್ಕಾಗಿ. ತಮ್ಮ ಸಾಮಾನ್ಯ ಹಕ್ಕುಗಳಿಗಾಗಿ ಬೀದಿಗಿಳಿಯಬೇಕಾಗಿ ಬಂತು. ಇದರ ವಿರುದ್ಧ ಕಾಂಗ್ರೆಸ್ ತೀವ್ರ ದಮನಚಕ್ರ ಆರಂಭಿಸಿತು. ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಲಾಯಿತು. ದೇಶಾದ್ಯಂತ ಸಾವಿರಾರು ಕಾರ್ಯಕರ್ತರನ್ನು ಬಂಧಿಸಿ ಅವರೊಡನೆ ಜೈಲುಗಳಲ್ಲಿ ಅತ್ಯಂತ ಅಮಾನುಷವಾಗಿ ವರ್ತಿಸಲಾಯಿತು.

ಸೇಲಂ ಜೈಲಿನಲ್ಲಿ ಆಗಿನ ಮದ್ರಾಸ್ ಪ್ರಾಂತ್ಯ ಅಂದರೆ ತಮಿಳುನಾಡು. ಕೇರಳದ ಮಲಬಾರ್ ಪ್ರದೇ[ಶ] ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆ ಹಾಗ[ೂ] ಆಂಧ್ರದ ಬಹುಪಾಲು ಪ್ರದೇಶಗಳ[…] ಜನತೆಯ ಪರವಾಗಿ ಹೋರಾಟದ[…] ತೊಡಗಿದ್ದ ನೂರಾರು ಕಮ್ಯುನಿಸ್ಟರ[…] ಬಂಧಿಸಿ ಇಡಲಾಗಿತ್ತು.

ತಮಿಳುನಾಡು ಹಾಗೂ ಕೇರಳಗಳ[…] ಹೋರಾಡುವ ಹಕ್ಕಿಗಾಗಿ ನೀಡಿದ […] ಬಲಿದಾನವನ್ನು ಪ್ರತಿವ[…] ಸ್ಮರಿಸಲಾಗುತ್ತದೆ. ಈ ವರ್ಷ ಇದ[…] ನಲ್ವತ್ತನೇ ವಾರ್ಷಿಕವನ್ನು ದೊ[…] ಪ್ರಮಾಣದಲ್ಲಿ ಆಚರಿಸಲಾಯಿತು.

ಪಕ್ಷದ ಸೇಲಂ ಜಿಲ್ಲಾ ಸಮಿತಿ[…] ಹೊಸ ಕಟ್ಟಡವನ್ನು ಈ ಸೇಲಂ ಹುತಾತ್[ಮ] ಸ್ಮರಣೆಗೆ ಅರ್ಪಿಸಲಾಯಿತು. ಎಲ್ಲಾ […] ಮಂದಿ ಹುತಾತ್ಮರ ಹೆಸರುಗಳನ[್ನು] ಕಟ್ಟಡದ ಅಡಿಗಲ್ಲಿನಲ್ಲಿ ಕೆತ್ತಲಾಗಿದೆ.

ಈ ನೂತನ ಕಟ್ಟಡದಲ್ಲಿ ಹಾರಿ[…] ಬಾವುಟವನ್ನು ಸೇಲಂ ಜೈಲಿನ ದ್ವಾರದಿಂ[ದ] ದೊಡ್ಡ ಮೆರವಣಿಗೆಯಲ್ಲಿ ತರಲಾಯಿತ[ು…] ಹಗ್ಗವನ್ನು ತಿರುಚೆಂಗೋಡಿನಿಂದ ಕೆಂ[…] ಸ್ವಯಂಸೇವಕರು ಜ್ಯೋತಿಯೊಂದಿ[ಗೆ] ತಂದರು. ಇದರ ನೇತೃತ್ವ ವಹಿಸಿದವ[…] ಹುತಾತ್ಮರಲ್ಲಿ ಒಬ್ಬರಾದ ಕಾವೇ[…] ಮುದಲಿಯಾರ್‌ರವರ ಮೊಮ್ಮಗ. ಹುತಾತ್ಮರ ಮಗ ಹಾಗೂ ಮೊಮ್ಮ[ಗ] ಇಬ್ಬರೂ ಸಿ.ಪಿ.ಐ.(ಎಂ) ಸದಸ್ಯ[ರು…] ಇನ್ನೊಬ್ಬ ಹುತಾತ್ಮ ಅರುಗನ್‌ರ ಪತ್ನಿಕೂ[ಡ] ಈ ಸಮಾರಂಭ ವೇದಿಕೆಯಲ್ಲಿದ್ದರು.

ಎ. ನಲ್ಲಶಿವನ್. ಪಿ.ರಾಮ ಚಂದ್ರನ್[…] ಎಂ.ಕೆ. ಪಂಡೆ. ಪಿ.ಆರ್. ಪರಮೇಶ್ವರ[ನ್] ಮತ್ತಿತರ ಪಕ್ಷದ ಮುಖಂಡರು ಭವ್ಯ ಸಮಾರಂಭದಲ್ಲಿ ಪಾಲ್ಗೊಂಡರು.

ಸಂಪಾದಕೀಯ

ಚುನಾವಣಾ ಫಲಿತಾಂಶ

ಕಾಂಗ್ರೆಸ್(ಐ) ಸರಕಾರಗಳು ಉತ್ತರ ಭಾರತದ ವಿಧಾನಸಭಾ ಚುನಾವಣೆಗಳಲ್ಲಿ ತರಗೆಲೆಗಳು ಉದುರುವಂತೆ ಉದುರಿ ಬಿದ್ದಿವೆ. ಲೋಕ ಸಭಾ ಚುನಾವಣೆಗಳ ಫಲಿತಾಂಶಗಳನ್ನು ನೋಡಿದವರಿಗೆ ಈ ಫಲಿತಾಂಶವೇನೂ ಆಶ್ಚರ್ಯವನ್ನುಂಟು ಮಾಡದಿದ್ದರೂ, ಇಷ್ಟು ಹೀನಾಮಾನವಾಗಿ ಕಾಂಗ್ರೆಸ್(ಐ) ಸೋತುದು ಮಾತ್ರ ಎಲ್ಲರ ದೃಷ್ಟಿಯನ್ನು ಈ ವಿದ್ಯಾಮಾನದೆಡೆಗೆ ಹರಿಸಿದೆ. ಅದೂ ಲೋಕಸಭಾ ಚುನಾವಣೆಗಳ ನಂತರ ಎಲ್ಲಾ ಕಾಂಗ್ರೆಸ್(ಐ) ಮುಖ್ಯ ಮಂತ್ರಿಗಳನ್ನು ಕಾಂಗ್ರೆಸ್(ಐ) ಉನ್ನತ ಸಮಿತಿಯು ನಿರ್ದೇಶನವಿತ್ತು ಕಿತ್ತು ಹಾಕಿ ಹೊಸ ಮುಖ್ಯಮಂತ್ರಿಗಳನ್ನು ನೇಮಕ ಮಾಡಿದ ಹಿನ್ನೆಲೆಯಲ್ಲಿ ಇದು ಸ್ವಲ್ಪ ಕುತೂಹಲಕಾರಿಯಾಗಿದೆ.

ಕಾಂಗ್ರೆಸ್(ಐ) ಸೋತಿತು. ಆದರೆ ಕಾಂಗ್ರೆಸ್(ಐ) ಸೋತು ಅದರ ಸ್ಥಾನದಲ್ಲಿ ಆರಿಸಿ ಬಂದ ಪಕ್ಷಗಳಲ್ಲಿ ಬಿ.ಜೆ.ಪಿ. ಪ್ರಮುಖ ಪಕ್ಷವಾಗಿದೆ. ಬಿ.ಜೆ.ಪಿ.ಯು ಮೂರು ರಾಜ್ಯಗಳಲ್ಲಿ ಮುಖ್ಯಮಂತ್ರಿಗಳಾಗಿ ತಮ್ಮ ಅಥವಾ ತಮ್ಮ ಮತ್ತು ಜನತಾದಳದ ಬೆಂಬಲದಿಂದ ಸರಕಾರಗಳನ್ನು ರಚಿಸುವ ವಿಷಯವನ್ನು ಎಲ್ಲಾ ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಮತ್ತು ಪಕ್ಷಗಳವರನ್ನು "ರಾಜಕೀಯ ಮಂಥನ"ಕ್ಕೆ ಗುರಿ ಮಾಡಲು ಸಿರ್ಭಂಧ ಪಡಿಸುತ್ತದೆ ಎಂಬುದರಲ್ಲಿ ಏನೂ ಸಂಶಯವಿಲ್ಲ.

ಕರ್ನಾಟಕದ ಜಾಫರ್ ಷರೀಫ್‌ರವರು ಈ ಚುನಾವಣೆಗಳ ಫಲಿತಾಂಶಗಳನ್ನು ಕುರಿತು ಕೊಟ್ಟ ಹೇಳಿಕೆಯು ಅರ್ಥ ಗರ್ಭಿತವಾಗಿದೆ. ಅವರ ಹೇಳಿಕೆ "ಕಾಂಗ್ರೆಸ್(ಐ) ಸೋಲಿಗೆ ಅದು ಜಾತ್ಯಾತೀತತೆ ಮತ್ತು ಸಮಾಜವಾದಗಳ ಧೋರಣೆಗಳನ್ನು ಕೈ ಬಿಟ್ಟದೇ ಆಗಿದೆ".

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹೇಳಿಕೆಯನ್ನು ಮತ್ತು ಅವರ ಆಡಳಿತಗಳ ಬಗ್ಗೆ ಹೇಳುತ್ತಾ ಬಂದ ಹೇಳಿಕೆಗಳನ್ನು ನೋಡೋಣ. "ಕಾಂಗ್ರೆಸ್(ಐ) ಸರಕಾರವು ಸಮಾಜವಾದದ ಮಾದರಿಯ ಸಮಾಜವನ್ನು ಕಟ್ಟಿ ಬೆಳೆಸುತ್ತೇವೆ ಎಂದು ಹೇಳಿ ಭಾರತದಲ್ಲಿ ಗುತ್ತೇದಾರಿ ಬಂಡವಾಳ ಶಾಹಿಗಳ ನೇತೃತ್ವದಲ್ಲಿ ಬಂಡವಾಳ ಶಾಹಿ ಪದವನ್ನು ಬೆಳೆಸುವ ಧೋರಣೆಗಳನ್ನು ಅನುಸರಿಸುತ್ತಾ ಬಂದಿದೆ. ಬಡ ಜನತೆಗಳ ಹಿತ ದೃಷ್ಟಿಯಲ್ಲಿ ಈ ಬಂಡವಾಳ ಶಾಹಿ ಪರ ನೀತಿಗಳು ಬದಲಾಗಲೇ ಬೇಕು ಮತ್ತು ಜಾತ್ಯಾತೀತತೆಯು ತಮ್ಮ ಧೋರಣೆ ಎಂದು ಹೇಳುತ್ತಾ ಕಾಂಗ್ರೆಸ್(ಐ) ಪಕ್ಷ ಮತ್ತು ಆಡಳಿತವು ದೇಶದಲ್ಲಿ ಜಾತೀಯತೆ ಮತ್ತು ಮತೀಯತೆಯ ಭಾವಗಳನ್ನು ಮತ್ತು ಶಕ್ತಿಗಳನ್ನು ಬೆಳೆಸುತ್ತಾ ಬರಲು ಅನುಕೂಲ ಮಾಡಿಕೊಟ್ಟದೆ. ಕಾಂಗ್ರೆಸ್(ಐ) ಶಾಹಾಬಾನು ಪ್ರಕರಣದಲ್ಲಿ ಕೈ ಗೊಂಡ ಮುಸ್ಲಿಂ ಮೂಲ ಭೂತವಾದಿಗಳಿಗೆ ಶರಣಾಗುವ ಧೋರಣೆ ಹಾಗೂ ರಾಮಜನ್ಮ ಭೂಮಿ ಬಾಬ್ರಿ ಮಸೀದಿ ಪ್ರಕರಣದಲ್ಲಿ ಹಿಂದೂ ಮೂಲ ಭೂತವಾದಿಗಳಿಗೆ ಶರಣಾಗುವ, ವಿವಾದಗ್ರಸ್ತ ಭೂಮಿಯಲ್ಲಿ ರಾಮ ಮಂದಿರಕ್ಕೆ ಶಿಲಾನ್ಯಾಸ ಮಾಡಲು ಅವಕಾಶಕೊಟ್ಟ ನೀತಿ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಗಂಡಾಂತರವಾಗಿ ಬಂದಿದೆ.

ಫಲಿತಾಂಶವಾಗಿ ಜಾತಿಯ ಮತೀಯ ಮೂಲ ಭೂತವಾದಿಗಳು ಮುಸ್ಲಿಂ ಲೀಗ್ ಮತ್ತು ಜಮಾಯತೇ ಇಸ್ಲಾಮಿಗಳು ಒಂದೆಡೆ, ಇನ್ನೊಂದೆಡೆ ಬಿಜೆಪಿ, ವಿಶ್ವ ಹಿಂದೂ ಪರಿಷತ್ ಮತ್ತು ಆರ್.ಎಸ್.ಎಸ್‌ಗಳು ಇನ್ನೊಂದೆಡೆ ಬೆಳೆದು ಬರುವುದಕ್ಕೆ ಅವಕಾಶ ಕೊಟ್ಟಿತು.

ರಾಷ್ಟ್ರೀಯ ಸ್ವಾತಂತ್ರ್ಯದ ವೇಳೆ ರಾಷ್ಟ್ರೀಯ ಮುಂದಾಳುಗಳು ಪ್ರತಿಪಾದಿಸುತ್ತಾ ಬಂದ ರಾಷ್ಟ್ರೀಯ ಐಕ್ಯತೆಯ ಆದರ್ಶಗಳು ಮತ್ತು ಈ ಆದರ್ಶಕ್ಕಾಗಿ ತೆತ್ತ ಮಹಾತ್ಮಾಗಾಂಧಿಯ ಮಹಾತ್ಯಾಗ ಇವೆಲ್ಲವೂ ಮಣ್ಣು ಗೂಡುವಂತಾಗಿದೆ.

ಈ ಚುನಾವಣೆಗಳ ಫಲಿತಾಂಶಗಳು ಕಾಂಗ್ರೆಸ್(ಐ) ನ ಹಿಂದಿರುವ ಜನ ಸುಮೂಹವನ್ನು "ತೀವ್ರ ಆತ್ಮಶೋಧನೆ"ಗೆ ಪ್ರಚೋದನೆ ನೀಡುತ್ತದೆ ಎಂದು ನಾವು ಆಶಿಸುತ್ತೇವೆ.

ಕಾಂಗ್ರೆಸ್ ಅಳಿದುಳಿದ ಕಡೆಗಳಲ್ಲಿ ಮುಖ್ಯವಾಗಿ ಕಾಂಗ್ರೆ ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿ ವಿಶೇಷವಾಗಿ ತ್ರಿಪುರದಲ್ಲಿ ತಮ್ಮ ನಿರಂಕುಶ ನೀತಿಗಳನ್ನು ಭೀಭತ್ಸ ನೀತಿಗಳನ್ನು ಕೈ ಬಿಡದಿದ್ದರೆ ಅಲ್ಲಿ ಕೂಡ ಧೂಳಿಪಟವಾಗುತ್ತದೆ ಎಂದು ಎಚ್ಚರಿಸ ಬಯಸುತ್ತೇವೆ.

ಕರ್ನಾಟಕದಲ್ಲಿ ಕೂಡ ಆ ಪಕ್ಷವು ಅನುಸರಿಸುತ್ತಿರುವ ಸರ್ವಾಧಿಕಾರಿ ನೀತಿಗಳ ಬಗ್ಗೆ ಮರು ಚಿಂತಿಸದಿದ್ದರೆ ಇಲ್ಲಿಯೂ ಅದೇ ಗತಿ ಕಾದಿದೆ ಎಂದು ಎಚ್ಚರಿಸ ಬಯಸುತ್ತೇವೆ.

ಅಲ್ಲದೆ, ರಾಷ್ಟ್ರೀಯ ಕಾಂಗ್ರೆಸ್ ಸ್ವಾತಂತ್ರ್ಯ ಹೋರಾಟ ಕಾಲದಲ್ಲೂ, ಸ್ವಲ್ಪ ಕಾಲ ನೆಹರೂರವರ ಕಾಲದಲ್ಲೂ ಅನುಸರಿಸುತ್ತಾ ಬಂದ ಜಾತ್ಯಾತೀತ ಧೋರಣೆಗಳ ವಿಷಯದಲ್ಲಿ ಚೌಕಾಶಿ ನೀತಿಯನ್ನು, ಸಂದರ್ಭವಾದಿ ನೀತಿಯನ್ನು ಅನುಸರಿಸುತ್ತಾ ಬರುವುದನ್ನೂ ಬಿಡದಿದ್ದರೆ ಜನರು ಅವರನ್ನು ಮತ್ತಷ್ಟು ದೂರ ಮಾಡುತ್ತಾರೆ.

ಅದೇ ವೇಳೆ, ಜಾತ್ಯಾತೀತತೆ ಮತ್ತು ಸಮಾಜವಾದದ ಆದರ್ಶಗಳ ಆಧಾರದಲ್ಲಿ ದೃಢವಾದ ನಿಲುಮೆಯನ್ನು ನಂಬಿ ದೇಶಾದ್ಯಂತ ಜನ ಸಾಮಾನ್ಯರ ತಮ್ಮ ಜೀವನ ನಡೆಸುವುದಕ್ಕೆ ಮುಂದಾಗುವಂತೆ ಮಾಡಲು ದೇಶದ ಎಲ್ಲಾ ಎಡ ಶಕ್ತಿಗಳು ಮತ್ತು ಪಕ್ಷಗಳು ಕಟಿಬದ್ಧವಾಗಬೇಕು. ಪ್ರಚಾರ, ಸಂಘಟನೆ ಮತ್ತು ಕಾರ್ಯಕ್ರಮವನ್ನು ನಿರ್ದಿಷ್ಟವಾಗಿ ಈ ದಿಕ್ಕಿನಲ್ಲಿ ದೃಢ ಪಡಿಸುವುದಕ್ಕೆ ಈ ಶಕ್ತಿಗಳು ಮುಂದಾಗಬೇಕು.

ಆಗ ಮಾತ್ರ ದೇಶದಲ್ಲಿ ಕಾಂಗ್ರೆಸ್(ಐ) ಸೋತು ಜಾತೀಯ ಮತೀಯ ಶಕ್ತಿಗಳು ಮುಖ್ಯವಾಗಿ ಬಿಜೆಪಿ ಗೆದ್ದುದರ ಪರಿಣಾಮಗಳು ದೇಶದ ಪ್ರಗತಿಯನ್ನು ಕುಂಟಿತಗೊಳಿಸಿದಂತಾಗುವುದು ಹಾಗೂ ಪ್ರತಿಗಾಮಿ ದಿಕ್ಕನ್ನು ದೇಶ ತುಳಿಯುವಂತಾಗುವುದು.

ಕಾಂ। ಇ.ಎಂ.ಎಸ್. "ಜಾತೀಯ ಮತೀಯ ಆರ್.ಎಸ್.ಎಸ್., ಬಿಜೆಪಿ ಮತ್ತು ವಿಶ್ವ ಹಿಂದೂ ಪರಿಷತ್ ಶಕ್ತಿಗಳು ದೇಶದ ದಿಕ್ಕನ್ನು ಪ್ರತಿಗಾಮಿ ದಿಕ್ಕಿನಲ್ಲಿ ಕೊಂಡೊಯ್ಯಲು ಪ್ರಯತ್ನಿಸುತ್ತಿವೆ; ಅವುಗಳನ್ನು ರಾಜಕೀಯವಾಗಿ ಸೋಲಿಸಿ ಜನತೆಯಿಂದ ದೂರ ಮಾಡುವುದು; ಕಾಂಗ್ರೆಸ್(ಐ)ಯನ್ನು ಅಧಿಕಾರದಿಂದ ಕಿತ್ತೊಗೆಯುವುದಕ್ಕೆ ಪ್ರಮುಖವಾಗಿದೆ ಎಂದು ಹೇಳುತ್ತಾ ಬಂದುದರ ಅರ್ಥ ಇದೆಯಾಗಿದೆ.

ಕೊಂಕಣ ರೈಲ್ವೆ - ಹೋರಾಟದ ಫಲ

ಸರಿ ಸುಮಾರು ಒಂದು ಶತಮಾನದ ಕನಸಾಗಿದ್ದು ಇತ್ತೀಚಿನ ದಿನಗಳಲ್ಲಿ ಜನರನ್ನು ವಂಚಿಸುವ ರಾಜಕೀಯ ದಾಳವಾಗಿ ಪರಿಣಮಿಸಿದ್ದ ಕೊಂಕಣ ರೈಲ್ವೆ ಯೋಜನೆ ಕೊನೆಗೂ ಜೀವ ಪಡೆದಿದ್ದು ಕೈಗಾರಿಕಾ ವಲಯಗಳು ಮತ್ತು ಕರ್ನಾಟಕ, ಗೋವಾ, ಮಹಾರಾಷ್ಟ್ರ ರಾಜ್ಯಗಳ ಜನರಲ್ಲಿ ಲವಲವಿಕೆ ಮೂಡಿಸುವ ನಿಟ್ಟಿನಲ್ಲಿ ಸಾಗಿದೆ.

1989 ನವೆಂಬರ್ ಲೋಕಸಭಾ ಚುನಾವಣೆಗಳಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್(ಐ)ಯನ್ನು ಅಧಿಕಾರ ಚ್ಯುತಿಗೊಳಿಸಿ ಎಡ ಬಲ ಶಕ್ತಿಗಳ ಬೆಂಬಲದಿಂದ ಅಧಿಕಾರಕ್ಕೆ ಬಂದ ರಾಷ್ಟ್ರೀಯ ರಂಗ ಸರಕಾರ ತೋರಿಸಿರುವ ಕಾಳಜಿಯ ಪರಿಣಾಮವಾಗಿ ಮಂಗಳೂರಿನಿಂದ ಮುಂಬಯಿ ತನಕದ ಈ ರೈಲ್ವೆ ಮಾರ್ಗದ ಅಂಗವಾಗಿ ಮಂಗಳೂರು ಉಡುಪಿ ಬ್ರಾಡ್‌ಗೇಜ್ ರೈಲ್ವೆ ಮಾರ್ಗದ ಕಾಮಗಾರಿಯ ಶಂಕುಸ್ಥಾಪನೆಯನ್ನು ರೈಲ್ವೆ ಸಚಿವ ಜಾರ್ಜ್ ಫೆರ್ನಾಂಡಿಸ್ 26.2.1990 ರಂದು ಉಡುಪಿಯ ಇಂದ್ರಾಳಿಯಲ್ಲಿ ನೆರವೇರಿಸಿದರು. 60 ಕೋಟಿ ರೂ. ವೆಚ್ಚದ ಈ ಮಾರ್ಗವನ್ನು ಎರಡು ವರ್ಷಗಳಲ್ಲಿಯೂ ಮತ್ತು ಒಟ್ಟು 1020 ಕೋಟಿ ರೂ. ವೆಚ್ಚದ ಇಡೀ ಕೊಂಕಣ ರೈಲ್ವೆ ಯೋಜನೆಯನ್ನು ಐದು ವರ್ಷಗಳೊಳಗೆ ಪೂರ್ತಿಗೊಳಿಸಲಾಗುವುದು ಎಂದು ಜಾರ್ಜ್ ಫೆರ್ನಾಂಡಿಸ್ ಭರವಸೆ ನೀಡಿದ್ದಾರೆ ಈ ಸಮಾರಂಭದಲ್ಲಿ.

ಹಿಂದಿನ ಕಾಂಗ್ರೆಸ್(ಐ) ಸರಕಾರ, ಆ ಪಕ್ಷದ ಪ್ರತಿನಿಧಿಗಳು, ಲೋಕಸಭಾ ಸದಸ್ಯರಾದ ಬಿ. ಜನಾರ್ಧನ ಪೂಜಾರಿ, ಆಸ್ಕರ ಫೆರ್ನಾಂಡಿಸ್ ಕೊಂಕಣ ರೈಲ್ವೆ ಯೋಜನೆ ಬಗ್ಗೆ 'ರೈಲು' ಬಿಡುತ್ತಿದ್ದರೆ ಹೊರತು ಬೇರೇನೂಮಾಡಿರಲಿಲ್ಲ ಎಂಬುದು ಇದೀಗಸಿದ್ಧವಾದಂತಾಗಿದೆ. ಹಿಂದಿನ ಸರಕಾರ 50 ಲಕ್ಷ ರೂ.ಗಳನ್ನು ಮಂಜೂರು ಮಾಡಿತ್ತು; ಆದರೀಗ ರಾಷ್ಟ್ರೀಯರಂಗ ಸರಕಾರ ಒಂದೂವರೆ ಕೋಟಿ ರೂ. ಗಳನ್ನು ಮಂಜೂರುಮಾಡಿದೆಯೆಂದು ಶಂಕುಸ್ಥಾಪನೆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಅವರೇ ಶ್ಲಾಘಿಸಿದ್ದು ಗಮನೀಯವಾಗಿದೆ. ಹಿಂದೆ ಕೇಂದ್ರದಲ್ಲಿ ಕಾಂಗ್ರೆ ಇದ್ದು ಕರ್ನಾಟಕದಲ್ಲಿ ಜನತಾದಳ ಸರಕಾರವಿದ್ದುದರಿಂದ ಯೋಜನೆ ಬಗ್ಗೆ ಕೇಂದ್ರ ಕಾಳಜಿ ವಹಿಸದಿರುವ ಕಾರಣ ಪಕ್ಷಪಾತ ನೀತಿಯ ಕಳಂಕ ಹೊರಬೇಕಾಗಿತ್ತು. ಈಗ ಕೇಂದ್ರ, ರಾಜ್ಯದಲ್ಲಿ ತದ್ವಿರುದ್ಧವಾದ ಪಕ್ಷಗಳ ಸರಕಾರವಿದ್ದರೂ ಕೇಂದ್ರ ಸರ್ಕಾರ ರಾಜ್ಯದ ರೈಲ್ವೆ ಯೋಜನೆಗೆ ಆದ್ಯತೆ ನೀಡಿದೆ.

ಮಹಾರಾಷ್ಟ್ರದ ರೋಹಾದಿಂದ ಈ ಯೋಜನೆಯ ಕಾಮಗಾರಿ ಈಗಾಗಲೇ ಆರಂಭವಾಗಿದ್ದು, ಕರ್ನಾಟಕದ ಹೆಬ್ಬಾಗಿಲು ಮಂಗಳೂರು ಮತ್ತು ರಾಷ್ಟ್ರದ ಹೆಬ್ಬಾಗಿಲು ಮುಂಬಯಿ ಯನ್ನು ಸಂಪರ್ಕಿಸುವ ಮಹತ್ವದ ಕೊಂಕಣ ರೈಲ್ವೆ. ಯೋಜನೆಯ ಕನಸು ಶೀಘ್ರ ನನಸಾಗಬೇಕಾಗಿದೆ ಒಂದು ರೀತಿಯಲ್ಲಿ ಕನ್ನಡಿಗರಿಗೆ ನೆಂಟರ ಮನೆಯಂತಿರುವ ಮುಂಬಯಿಗೆ ಹೆಚ್ಚು ವೆಚ್ಚವಿಲ್ಲದೆ ಜನಸಾಮಾನ್ಯರ ಪ್ರಯಾಣ ಮತ್ತು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಕೈಗಾರಿಕೆಗಳ ಸ್ಥಾಪನೆಗೆ ಈ ಮಾರ್ಗ ನೆರವಾಗಲಿದೆ.

ಹೋರಾಟಗಳು:

ವಿಜಯನಗರ ಉಕ್ಕಿನ ಕಾರ್ಖಾನೆ, ಮಂಗಳೂರು ತೈಲಾಗಾರ ಮೊದಲಾದ ಯೋಜನೆಗಳಲ್ಲದೆ ಕೊಂಕಣ ರೈಲ್ವೆ ಯೋಜನೆಯನ್ನು ಕೂಡ ತ್ವರಿತವಾಗಿ ಜಾರಿಗೊಳಿಸಬೇಕಾದ ಅವಶ್ಯಕತೆಯನ್ನು ಮನಗಂಡ ಕರ್ನಾಟಕದ ಎಡ ಪ್ರಜಾಸತ್ತಾತ್ಮಕ ಚಳವಳಿ, ಅದರಲ್ಲೂ ಮುಖ್ಯವಾಗಿ ಸಿ.ಪಿ.ಐ(ಎಂ) ಮತ್ತಿತರ ಸಾಮೂಹಿಕ ಸಂಘಟನೆಗಳು ಈ ದಿಸೆಯಲ್ಲಿ ಹಲವಾರು ಹೋರಾಟಗಳನ್ನು ನಡೆಸಿದ್ದನ್ನು ಸ್ಮರಿಸಬಹುದಾಗಿದೆ. ಜನತಾದಳ ರಾಜ್ಯದಲ್ಲಿಅಧಿಕಾರದಲ್ಲಿದ್ದು ಯೋಜನೆಗಳ ಅನುಷ್ಠಾನಕ್ಕಾಗಿ ಕೇಂದ್ರವನ್ನು ಒತ್ತಾಯಿಸಲು ಚಳುವಳಿ ರೂಪಿಸದ ಸ್ಥಿತಿಯಲ್ಲಿದ್ದಾಗಲೂ ಸಿಪಿಐ (ಎಂ) ಈ ಬಗ್ಗೆ ಕಾಳಜಿ ವಹಿಸಿತ್ತೆನ್ನುವುದು ಗಮನಾರ್ಹವಾಗಿದೆ. ಸಿಐಟಿಯು, ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಸಕ್ರಿಯ ಹೋರಾಟ ನಡೆಸಿವೆ.

ಮನವಿ, ಹೇಳಿಕೆಗಳ ಮೂಲಕ ಆಗ್ರಹವಲ್ಲದೆ ಕೇಂದ್ರ ಸರಕಾರಿ ಕಚೇರಿಗಳ ಪಿಕೆಟಿಂಗ್ ಕೂಡ ನಡೆಸಲಾಗಿತ್ತು. ಕೊಂಕಣ ರೈಲ್ವೆ ಮತ್ತು ಮಂಗಳೂರು ತೈಲಾಗಾರ ಯೋಜನೆಗಳ ಜಾರಿಗಾಗಿ ಒತ್ತಾಯಿಸಲಿಕ್ಕೆಂದೇ ಸಿ.ಪಿ.ಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜನಜಾಗೃತಿಗಾಗಿ 1988 ಫೆಬ್ರವರಿ 14 ಮತ್ತು 15 ರಂದು ಮಂಗಳೂರಿನಿಂದ ಜಿಲ್ಲೆಯ ಉತ್ತರ ಗಡಿಯಾದ ಶಿರೂರು ತನಕ ಜೀಪ್ ಜಾಥಾ ನಡೆದಿತ್ತು. ಡಿವೈಎಫ್‌ಐ ಕೂಡ ಒಂದೆರಡು ಬಾರಿ ಸಭೆ ಮೆರವಣಿಗೆ ನಡೆಸಿತ್ತು.

ಒಟ್ಟಿನಲ್ಲಿ ಜನತೆಯ ಆಶಯದ ಮಹತ್ವ ಪೂರ್ಣ ಕಾರ್ಯವನ್ನು ಕೈಗೆತ್ತಿಕೊಂಡಿರುವ ರಾಷ್ಟ್ರೀಯರಂಗ ಸರಕಾರ ಅಭಿನಂದನಾರ್ಹ. ಇದು ಒಂದು ಕಣ್ಣೊರೆಸುವ ತಂತ್ರವಾಗದೆ ಶೀಘ್ರವಾಗಿ ಪೂರ್ಣಗೊಳ್ಳುವ ದಿಸೆಯಲ್ಲಿ ಮೂರು-ರಾಜ್ಯಗಳ ಜನತೆ ಕಣ್ಗಾವಲಿಡಬೇಕಾಗಿದೆ.

-- ವಿಶ್ವ. ಕುಂದಾಪುರ

ಯುವಕರನ್ನು ಆಕರ್ಷಿಸಲು ತೆರತೆರನ ಚಟುವಟಿಕೆ ನಡೆಸಿ

- ಎನ್.ಕೆ. ಉಪಾಧ್ಯಾಯ

ಬೆಲೆಯೇರಿಕೆ, ಆರ್ಥಿಕ ಬಿಕ್ಕಟ್ಟು, ಅತಿಪ್ರಸರಣ, ನಿರುದ್ಯೋಗ ಮತ್ತು ಇನ್ನಿತರ ಹಲವಾರು ಸಮಸ್ಯೆಗಳಿಂದಾಗಿ ಕಂಗೆಟ್ಟ ಜನತೆಯ ಮನೋಭಾವನೆ ನಕರಾತ್ಮಕವಾಗಿಲ್ಲ. ನಮ್ಮ ಚಳುವಳಿಯನ್ನು ಅದರ ಮೂಲಕ ಯುವಕರ ಸಂಘಟನೆಯನ್ನು ಬೆಳೆಸಲು, ವಿಸ್ತರಿಸಲು, ಸಹಾಯಕವಾಗುತ್ತಿದೆ. ಆದ್ದರಿಂದ ಕರ್ನಾಟಕದಲ್ಲಿ ಬಲಿಷ್ಠವಾದ ಯುವ ಜನಸಂಘಟನೆಯನ್ನು ಕಟ್ಟಿರಿ ಎಂದು ಕರೆಕೊಟ್ಟವರು ಆಂಧ್ರ ಪ್ರದೇಶದ ಡಿ.ವೈ.ಎಫ್.ಐ. ಮುಖಂಡರಾದ ಶ್ರೀನಿವಾಸರಾವ್ ಸಂದರ್ಭ ಮಾರ್ಚ್ 2-3ರಂದು ನಡೆದ ಡಿ.ವೈ.ಎಫ್.ಐ. ರಾಜ್ಯ ಸಮಿತಿ ಸಭೆಯಲ್ಲಿ.

ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ 18ರಿಂದ 21 ವಯಸ್ಸಿನ ಯುವಕರಿಗೂ ಮತದಾನ ಹಕ್ಕು ಲಭಿಸಿದೆ. ಆ ಹಕ್ಕಿಗಾಗಿ ಡಿ.ವೈ.ಎಫ್.ಐ. ಹೋರಾಡುತ್ತಾ ಬಂದಿತ್ತು. ಆದರೆ ಹೋದ ವರ್ಷ ನವಂಬರಿನಲ್ಲಿ ನಡೆದ ಚುನಾವಣೆಯಲ್ಲಿ ಆಂಧ್ರ ಮತ್ತು ಕರ್ನಾಟಕದ ಹೆಚ್ಚಿನ ಯುವಕರು ಕಾಂಗ್ರೆಸ್ಸಿಗೆ ಮತಹಾಕಿದಂತೆ ಕಂಡು ಬರುತ್ತದೆ. ಅದೇ ಸಮಯದಲ್ಲಿ ಉತ್ತರಭಾರತದಲ್ಲಿಯ ಯುವಕರು ಕಾಂಗ್ರೆನ ವಿರುದ್ಧ ಮತ ನೀಡಿದ್ದಾರೆ. ಸೈದ್ಧಾಂತಿಕ ಅಭಾವದಿಂದ ಹಾಗಾಗಿದೆ ಎಂಬುದನ್ನು ತಿಳಿಯಬೇಕು. ಯುವಕರನ್ನು ಸಂಘಟಿಸುವುದು ಸುಲಭವೇನಲ್ಲ. ಬೇರೆ ಬೇರೆ ಶಕ್ತಿಗಳು ಆಸೆ-ಆಮಿಷ ತೋರಿಸಿ ಜಾತಿ ಧರ್ಮಗಳ ನೆಲೆಯಲ್ಲಿ ಅವರನ್ನು ಆಕರ್ಷಿಸುತ್ತಾರೆ, ವಿಭಜನೆ ಮಾಡುತ್ತಾರೆ, ಸಮಾಜವಾದಿ ವಿಚಾರ ಧಾರೆಯತ್ತ ಬಾರದಂತೆ ಬೇರೆಡೆಗೆ ಅವರ ಗಮನ ಸೆಳೆಯುತ್ತಾರೆ. ಅಂಥ ಪರಿಸ್ಥಿತಿಯಲ್ಲಿ ಯುವಕರನ್ನು ಡಿ.ವೈ.ಎಫ್.ಐ. ಯತ್ತ ಸೆಳೆಯಬೇಕಾದರೆ, ನಾವು ಹಲವಾರು ತರದ ಚಟುವಟಿಕೆಗಳನ್ನು ಮಾಡಬೇಕಾಗುತ್ತದೆ.

ಪಶ್ಚಿಮ ಬಂಗಾಳದಲ್ಲಿ ಕೂಡ ಕೆಲವು ವರ್ಷಗಳ ಹಿಂದೆ ಅದೇ ಯುವಕರು ಎಡರಂಗದ ವಿರುದ್ಧ ಮತನೀಡಿದ್ದರು. ಆದರೆ ಅವರ ಮಧ್ಯೆ ನಿರಂತರ ಕೆಲಸ ಮಾಡಿದ ಫಲವಾಗಿ ಈಗ ಅವರೆಲ್ಲ ನಮ್ಮ ಸಮೀಪ ಬರುತ್ತಿದ್ದಾರೆ. ಕೇರಳದಲ್ಲಿ ಕೂಡ ಡಿ.ವೈ.ಎಫ್.ಐ. ಹಲವಾರು ಸ್ವರೂಪದ ಚಟುವಟಿಕೆಗಳನ್ನು ನಡೆಸುತ್ತಿದೆ. ಕಳೆದ 2-3 ವರ್ಷಗಳಲ್ಲಿ ಮಾನವ ಸರಪಣಿ, ಮಾನವ ಗೋಡೆ ಮತ್ತಿತರ ಚಟುವಟಿಕೆಗಳನ್ನು ನಡೆಸಿದ್ದಲ್ಲದೆ, ಈಗ ಕೇರಳ ರಾಜ್ಯದ ಅಭಿವೃದ್ಧಿ ಕೆಲಸಗಳನ್ನು ಪೂರೈಸಲು 5 ಕೋಟಿ ಮಾನವದಿನಗಳ ಶ್ರಮದಾನವನ್ನು ಇ.ಕೆ. ನಯನಾರ್ ಸರ್ಕಾರಕ್ಕೆ ನೀಡಿದೆ. ಯಾವ ಪ್ರತಿಫಲವಿಲ್ಲದೆ ಸಾವಿರಾರು ಯುವಕರ ಶ್ರಮದಾನ ನಡೆಯಲಿದೆ. ಯುವಕರ ಮಧ್ಯೆ ನಿರಂತರ ಹಲವಾರು ತರದ ಚಟುವಟಿಕೆಗಳಿಂದ ಮಾತ್ರ ಅದು ಸಾಧ್ಯವಾಗಿದೆ ಎಂದು ಶ್ರೀನಿವಾಸರಾವ್ ಹೇಳಿದರು.

ಆಂಧ್ರಪ್ರದೇಶದ ಡಿ.ವೈ.ಎಫ್.ಐ. ಸಂಘಟನೆಯ ಅನುಭವಗಳನ್ನು ವಿವರಿಸುತ್ತಾ, ಪ್ರಾರಂಭದಲ್ಲಿ ನಾವು ರಾಜಕೀಯ ಚಟುವಟಿಕೆಗಳನ್ನು ಮಾತ್ರ ನಡೆಸುತ್ತಿದ್ದೆವು. ಅದರಿಂದ ಮಾತ್ರ ಯುವಕ ಸಮುದಾಯವನ್ನು

→ ಪುಟ 6


ರೈಲ್ವೆ ಪ್ರಯಾಣ ದರ, ಸಾಗಣೆದರ ಏರಿಸದಿರಲಿ

ಜನಗಳನ್ನು ಪ್ರತಿನಿಧಿಸುವರೆಂದು ಹೇಳಲಾದ ಅನೇಕ ಎಂ.ಪಿ.ಗಳ ಅಮೂಲ್ಯ ಸಲಹೆ:
"ಪ್ರಯಾಣದರಗಳನ್ನು ಸಾಗಣೆ ದರಗಳನ್ನು ಏರಿಸದೆ ನಿರ್ವಾಹವಿಲ್ಲ. ಏರಿಸಿ ಪರವಾ ಇಲ್ಲ."

ಆದರೆ ಸಿ.ಪಿ.ಐ. (ಎಂ) ಪಕ್ಷದ ಪರವಾಗಿ ಅದನ್ನು ಕಾಂ. ಸೂರಿ ಬಲವಾಗಿ ಖಂಡಿಸಿದರು. ಈ ರೈಲ್ವೆ ಬಜೆಟ್‌ನಲ್ಲಿ ಪ್ರಯಾಣ ದರ, ಸಾಗಣೆ ದರ ಏರಿಸ ಬಾರದು. ಇದರ ಬಗ್ಗೆ, ಸರ್ಕಾರದ ಸಾಮಾನ್ಯ ಬಜೆಟ್‌ನಿಂದ ರೈಲ್ವೆಗೆ ಸಹಾಯ ಧನ ಮುಂದುವರಿಸು ಬೇಕು ಎಂದು ಒತ್ತಾಯಿಸಿದರು. ಈ ವಿಚಾರ ಸಂಗ್ರಹ ಸಭೆಗಳನ್ನು ಏರ್ಪಡಿಸಿದ್ದು ಸ್ತುತ್ಯವೆಂಬುದೇನೋ ನಿಜ. ಆದರೆ ದರ ಏರಿಕೆಗೆ ಸಾರ್ವಜನಿಕರನ್ನು ಸಂಪರ್ಕಿಸಿದ ನಿಜವಾಗಿ ಬಳಕೆಯಾಗಲಾರದು. ಹಾಗೇನಾದರೂ ಆಗಿ ದರ ಏರಿಕೆಯಾದರೆ ಜನರ ಪ್ರತಿಭಟನೆಯನ್ನು ಎದುರಿಸಬೇಕಾದೀತು ಎಂದು ಎಚ್ಚರಿಕೆಯಿತ್ತರು.

ರಾಷ್ಟ್ರೀಯ ರಂಗ ಸರ್ಕಾರಕ್

ರಾಷ್ಟ್ರೀಯ ರಂಗ
ರೈತರು ಬಯ



ಅಖಿಲ ಭಾರತ ಕಿಸಾನ್ ಸಭಾದ ನಿಯೋಗವೊಂದು ಜನವರಿ 28 ರಂದು ಕೇಂದ್ರ ಕೃಷಿ ಮಂತ್ರಿ ದೇವೀಲಾಲರನ್ನು ಭೇಟಿಯಾಗಿ ರೈತಾಪಿ ವರ್ಗದ ವಿವಿಧ ವಿಭಾಗಗಳ ಪರಿಹಾರ ಒದಗಿಸುವ ಕ್ರಮಗಳ ಬಗ್ಗೆ ಸಲಹೆ ಸೂಚನೆ ಪ್ರಸ್ತಾಪಗಳನ್ನೊಳಗೊಂಡ 18 ಅಂಶಗಳ ಮನವಿಯೊಂದನ್ನು ಸಲ್ಲಿಸಿತು.

ತನ್ನ ಚುನಾವಣಾ ಭರವಸೆಗಳನ್ನು ಈಡೇರಿಸುವ ಆಶಯದ ಸೂಚನೆಗಳನ್ನು ರಾಷ್ಟ್ರೀಯ ರಂಗ ಸರ್ಕಾರ ನೀಡಿದೆ. ಕೃಷಿ ಮತ್ತು ಸಂಬಂಧಪಟ್ಟ ಬಾಬ್ತುಗಳಿಗೆ ಬಜೆಟ್‌ನಲ್ಲಿ 50% ಮೀಸಲಿಡುವ, ಕೃಷಿ ಉತ್ಪನ್ನಗಳಿಗೆ ಫಲಕಾರಿ ಬೆಲೆ ನೀಡುವ, ಎಲ್ಲಾ ಭೂಸುಧಾರಣೆಗಳನ್ನು ಸಂವಿಧಾನದ ಒಂಭತ್ತನೇ ಶೆಡ್ಯೂಲಿನಲ್ಲಿ ಸೇರಿಸುವ, ಸಣ್ಣ,ಅತಿ ಸಣ್ಣ ರೈತರ, ಕೃಷಿ ಕಾರ್ಮಿಕರ, ಕಸುಬುದಾರರ 10 ಸಾವಿರ ರೂ ವರೆಗಿನ ಸಾಲ ಮನ್ನಾ ಮಾಡುವ, ಹರಿಜನ - ಗಿರಿಜನರಿಗೆ ಸಾಲ ಸೌಲಭ್ಯ ಹೆಚ್ಚಿಸುವ, ಕೋಮು ಗಲಭೆ, ಅತ್ಯಾಚಾರಗಳಿಗೆ ಸಂಬಂಧಪಟ್ಟ ಕೇಸುಗಳ ಪರಿಶೀಲನೆಗೆ ವಿಶೇಷ ನ್ಯಾಯಾಲಯ, ಉಗ್ರಾಣ, ಗೋಡೌನ್‌ಗಳ ಒಂದು ಜಾಲವನ್ನೇ ಒದಗಿಸುವ ಬೃಹತ್ ಯೋಜನೆ, ಕೃಷಿ ಕೂಲಿಕಾರರಿಗೆ ನ್ಯಾಯ ಪೂರ್ಣ ಕನಿಷ್ಠ ಕೂಲಿ - ಈ ವಿಷಯಗಳ ಬಗ್ಗೆ ಅದು ಈಗಾಗಲೇ ಕೆಲವು ಹೇಳಿಕೆ ನೀಡಿದೆ. ಇವನ್ನು ಸ್ವಾಗತಿಸಿರುವ ಎ.ಐ.ಕೆ.ಎಸ್. ಮನವಿ ಇವನ್ನೆಲ್ಲಾ ಬೇಗನೆ ಕಾರ್ಯರೂಪಕ್ಕೆ ತರಲಾಗುವುದು ಎಂದು ನಿರೀಕ್ಷೆ ವ್ಯಕ್ತಪಡಿಸುತ್ತಾ ರೈತಾಪಿ ವರ್ಗದ ತುರ್ತು ಸಮಸ್ಯೆಗಳನ್ನು ಎದುರಿಸುವಲ್ಲಿ ನೆರವಾಗಬಹುದಾದ 18 ಪ್ರಸ್ತಾಪಗಳನ್ನು ಮಂಡಿಸಿದೆ.

ಇವು ಭಾರತದ ಗ್ರಾಮೀಣರಂಗವನ್ನು ಆವರಿಸಿರುವ ಪ್ರಸ್ತಾಪಗಳಿವು. ಈ ಹಾದಿಯಲ್ಲಿ ಕ್ರಮಗಳನ್ನು ಕೈಗೊಂಡರೆ ಗ್ರಾಮೀಣ ಶ್ರಮ ಜೀವಿಗಳ ಜೀವನ ಪರಿಸ್ಥಿತಿಯಲ್ಲಿ ಗಣನೀಯ ಪರಿವರ್ತನೆ ಕಾಣಲು ಸಾಧ್ಯ ಎಂದು ಎ.ಐ.ಕೆ.ಎಸ್. ಅಭಿಪ್ರಾಯ ಪಡುತ್ತಾ ಈ ಪರಿವರ್ತನೆ ಕೈಗಾರಿಕಾ - ಆರ್ಥಿಕ ಬೆಳವಣಿಗೆಯ ಮೇಲೂ ದೊಡ್ಡ ಪರಿಣಾಮ ಬೀರುತ್ತದೆ ಎಂದಿದೆ.

ಎ.ಐ.ಕೆ.ಎಸ್. ಅಧ್ಯಕ್ಷ ಸುರ್ಜಿತ್, ಪ್ರಧಾನ ಕಾರ್ಯದರ್ಶಿ ರಾಮನಾರಾಯಣ ಗೋಸ್ವಾಮಿ ಮತ್ತು ಜಂಟಿ ಕಾರ್ಯದರ್ಶಿ ಪಿ.ಕೆ. ಟಂಡನ್ ಈ ನಿಯೋಗದಲ್ಲಿದ್ದರು.

ಈ ಬೇಡಿಕೆಗಳಿಗೆ ಬೆಂಬಲವಾಗಿ ರೈತಾಪಿ ವರ್ಗವನ್ನು ಅಣಿನೆರೆಸಲು. ತುರ್ತು ಕ್ರಮ ಕೈಗೊಳ್ಳಬೇಕೆಂದು ಎ.ಐ.ಕೆ.ಎಸ್. ತನ್ನೆಲ್ಲಾ ಘಟಕಗಳಿಗೆ ಕರೆ ನೀಡಿದೆ. ಎಡ ನೇತೃತ್ವದ ರೈತ ಹಾಗೂ ಕೃಷಿ ಕೂಲಿಕಾರರ ಸಂಘಟನೆಗಳು ಜಂಟಿಯಾಗಿ ಈ ಬಗ್ಗೆ ಆಂದೋಲನ ರೂಪಿಸುವುದರಲ್ಲಿ ತೊಡಗಿವೆ.

ಮನವಿಯ ಅಂಶಗಳನ್ನು ಮುಂದೆ ಕೊಡಲಾಗಿದೆ.

ಭೂಸುಧಾರಣೆ

1. ಸದ್ಯದ ಎಲ್ಲಾ ಭೂಸುಧಾರಣೆಗಳ ಪುನರ್ವಿಮರ್ಶೆ ನಡೆಸಿ ಅವುಗಳಲ್ಲಿನ ಲೋಪ- ದೋಷಗಳನ್ನು ಸರಿಪಡಿಸಲು (ವಿಶೇಷವಾಗಿ ಭೂಮಿತಿ ಕಾನೂನುಗಳ ಬಗ್ಗೆ) ಸೂಕ್ತ ತಿದ್ದುಪಡಿ ತರಬೇಕು. ಈ ಮೂಲಕ ರೈತ ಸಂಘಟನೆಗಳ ಸಕ್ರಿಯ ಸಹಕಾರ ಪಡೆದು ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಮಿಗುತೆ ಭೂಮಿಯನ್ನು ಭೂಹೀನರಿಗೆ ಅತಿ ಕಮ್ಮಿ ಭೂಮಿ ಇರುವವರಿಗೆ ತ್ವರಿತವಾಗಿ ಹಂಚಬೇಕು. ನಿಜವಾದ ಗೇಣಿದಾರರ ಭಾಗದಾರರ ಹಕ್ಕುಗಳನ್ನು ರಕ್ಷಿಸಲು ಭೂದಾಖಲೆಗಳನ್ನು ಸರಿಪಡಿಸಬೇಕು.

2. ಸರಕಾರದ ಹತೋಟಿಯಲ್ಲಿರುವ ಎಲ್ಲಾ ಬಂಜರುಭೂಮಿ, ಗ್ರಾಮದ ಸಾರ್ವಜನಿಕ ಭೂಮಿ, ಮರಗಳಿಲ್ಲದ ಆವರಣವಿರದ ಅರಣ್ಯಭೂಮಿ, ಭೂದಾನ ಜಮೀನು ಮತ್ತಿತರ ಕೃಷಿಯೋಗ್ಯಭೂಮಿಯನ್ನು ಹಂಚಬೇಕು. ಎಲ್ಲೆಲ್ಲಿ ಅವನ್ನು ಕೃಷಿಯೋಗ್ಯಗೊಳಿಸಲು ಕ್ರಮ ಕೈಗೊಳ್ಳಬೇಕೋ ಅಲ್ಲೆಲ್ಲಾ ಸೂಕ್ತ ಕ್ರಮ ಕೈಗೊಳ್ಳಬೇಕು.

ಕೃಷಿಗೆ ತಕ್ಕುದಲ್ಲ ಎಂದು ಘೋಷಿಸಿದ ಭೂಮಿಯನ್ನು ಹಿಂದೆ ಪಡೆದು ಸರ್ಕಾರಿ ಖರ್ಚಿನಲ್ಲಿ ಅದನ್ನು ಕೃಷಿಯೋಗ್ಯಗೊಳಿಸಬೇಕು.

ಬುಡಕಟ್ಟು ಜನರ ಹಕ್ಕುಗಳು

3. ಅರಣ್ಯಗಳ ಒಳಗೆ ಅಥವಾ ಅಂಚಿನಲ್ಲಿ ವಾಸಿಸುವ ಎಲ್ಲಾ ಗಿರಿಜನರ ಹೆಸರುಗಳನ್ನು ದಾಖಲಿಸಬೇಕು. ಕಳೆದ ವರ್ಷಗಳಲ್ಲಿ ಇಂತಹ ಭೂಮಿಯಿಂದ ಓಡಿಸಲ್ಪಟ್ಟವರಿಗೆ ಅದನ್ನು ವಾಪಾಸು ನೀಡಬೇಕು.

ಸಣ್ಣ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವ ಗಿರಿಜನರ ಹಕ್ಕನ್ನು ಮಾನ್ಯ ಮಾಡಬೇಕು.ಬುಡಕಟ್ಟು ಮೀಸಲು ಪ್ರದೇಶಗಳಲ್ಲಿ ಕಾನೂನು ಬಾಹಿರವಾಗಿ ಪರಭಾರೆಯಾದ ಜಮೀನನ್ನು ಬುಡಕಟ್ಟು ಜನರಿಗೇ ಹಿಂತಿರುಗಿಸಬೇಕು.

ಭೂಮಾಲಕರಿಂದ, ಲೇವಾದೇವಿಗಾರರಿಂದ, ಕಂಟ್ರಾಕ್ಟರುಗಳಿಂದ, ಅರಣ್ಯ ಸಿಬ್ಬಂದಿಯಿಂದ ಬುಡಕಟ್ಟು ಜನರ ಶೋಷಣೆಯನ್ನು ತಡೆಯಬೇಕು ನಿರುದ್ಯೋಗ ಬಡತನ, ಹಿಂದುಳಿಕೆಯ ಸಮಸ್ಯೆ ಪರಿಹಾರಕ್ಕೆ ಯೋಜನೆ ರೂಪಿಸಬೇಕು. ಬುಡಕಟ್ಟು ಜನರ ನಿವಾಸ ಪ್ರದೇಶಗಳಲ್ಲಿ ಕುಡಿಯುವ ನೀರು, ಆರೋಗ್ಯ ಮತ್ತು ವೈದ್ಯಕೀಯ ಸೌಲಭ್ಯ, ಚರಂಡಿ ವ್ಯವಸ್ಥೆ, ಶಾಲೆಗಳು, ಮನರಂಜನೆ ಸೌಲಭ್ಯ ಇತ್ಯಾದಿಗಳನ್ನು ಒದಗಿಸಬೇಕು.

ಗ್ರಾಮೀಣ ಬಡವರ ವಸತಿ ನಿವೇಶನ

4. ಎಲ್ಲಾ ಬಡರೈತರು, ಭೂಹೀನ ಕೃಷಿ ಕೂಲಿಕಾರರು ಮತ್ತು ಕಸಬುದಾರರಿಗೆ ಅಗತ್ಯವಿರುವ ಎಲ್ಲಾ ಕುಟುಂಬಗಳಿಗೆ ವಸತಿ ನಿವೇಶನ ಮತ್ತು ಸಾಕಷ್ಟು ನೆರವು ಒದಗಿಸಬೇಕು.

ಈ ಜನರು ವಾಸಿಸುವ ಸ್ಥಳದ ಕೆಳಗಿರುವ ಎಲ್ಲಾ ಭೂಮಿಯನ್ನು ಅಲ್ಲಿ ವಾಸಿಸುವ ಕುಟುಂಬದ ಪೂರ್ಣ ಒಡೆತನದ ಮನೆ - ನಿವೇಶನ ಎಂದು ಘೋಷಿಸಬೇಕು. ಅಗತ್ಯವಿದ್ದಲ್ಲಿ ಅದರ ಈಗಿನ ಒಡೆಯರಿಗೆ ಸರಕಾರ ಸೂಕ್ತ ಪರಿಹಾರ ನೀಡಬೇಕು. ಈ ಖರ್ಚು ಅಲ್ಲಿ ವಾಸಿಸುವ ಬಡಕುಟುಂಬದ ಮೇಲೆ ಬೀಳಬಾರದು...

ಕೃಷಿ ಭೂಮಿಯಿಂದ,ಮನೆ-ನಿವೇಶನದಿಂದ ಒಕ್ಕಲೆಬ್ಬಿಸುವುದನ್ನು ಪ್ರತಿಬಂಧಿಸಬೇಕು.

ಕೃಷಿ ಕೂಲಿಕಾರರಿಗೆ ಕೇಂದ್ರೀಯ ಶಾಸನ

5. ಕೃಷಿ ಕೂಲಿಕಾರರಿಗೆ ಕನಿಷ್ಠ ಕೂಲಿಯ ಭರವಸೆ ಒದಗಿಸುವ, ಮುದಿವಯಸ್ಸಿನ, ಸಾಮಾಜಿಕ ಭದ್ರತೆಯೂ ಸೇರಿದಂತೆ ಮಾನವೀಯ ಪರಿಸ್ಥಿತಿಯ ಭರವಸೆ ನೀಡುವ, ನಿಗದಿಗೊಳಿಸುವ ಒಂದು ಕೇಂದ್ರೀಯ ಶಾಸನ ರೂಪಿಸಬೇಕು. ಇಂತಹ ಶಾಸನದ ಪರಿಣಾಮಕಾರಿ ಜಾರಿಗೆ ಕೃಷಿಕೂಲಿಕಾರರ ಪ್ರತಿನಿಧಿಗಳ ಸಹಕಾರದೊಂದಿದೆ ಒಂದು ಆಡಳಿತ ವ್ಯವಸ್ಥೆ ರೂಪಿಸಬೇಕು.

1980 ರಲ್ಲಿ ಗ್ರಾಮೀಣ ಶ್ರಮ ಕುರಿತ ಸ್ಥಾಯೀ ಸಮಿತಿ ಶಿಫಾರಸು ಮಾಡಿದ ಒಂದು ಮಾದರಿ ಮಸೂದೆ ಈಗಾಗಲೇ ಕಾರ್ಮಿಕ ಮಂತ್ರಾಲಯದ ಕಡತದಲ್ಲಿದೆ.

ಸಾಮಾಜಿಕ ಅತ್ಯಾಚಾರ

6. ಸಾಮಾಜಿಕ ಮತ್ತು ಜಾತಿ ಅತ್ಯಾಚಾರಗಳ ಎಲ್ಲಾ ಕೇಸುಗಳಲ್ಲಿ ಕಟ್ಟುನಿಟ್ಟಾದ ಕ್ರಮ ವಹಿಸಬೇಕು. ಅಪರಾಧಿಗಳಿಗೆ ಅವರ ಜತೆ ಶಾಮೀಲಾಗುವ ಪೋಲೀಸ್ ಹಾಗೂ ಆಡಳಿತ ಸಿಬ್ಬಂದಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಇಂತಹ ಅತ್ಯಾಚಾರಗಳ ಹಿಂದಿನ ಕಾರಣಗಳ ತನಿಖೆ ಮಾಡಿ ದಲಿತ ಗ್ರಾಮೀಣ ಬಡವರು ನ್ಯಾಯ ಪಡೆಯಲು ಕ್ರಮ ಕೈಗೊಳ್ಳಬೇಕು.

ಗ್ರಾಮೀಣ ನಿರುದ್ಯೋಗ

7. ಬೇಸಾಯವಿಲ್ಲದ ಅವಧಿಯಲ್ಲಿ ಉದ್ಯೋಗ ಒದಗಿಸುವ ಎಲ್ಲಾ ಯೋಜನೆಗಳಿಗೆ ಮೀಸಲಿಡುವ ಹಣದ ಮೊತ್ತ ಹೆಚ್ಚಬೇಕು. ಈಗಿರುವ ಯೋಜನೆಗಳನ್ನು ಹೆಚ್ಚು ಪರಿಣಾಮಕಾರಿಯಾಗುವಂತೆ, ಭ್ರಷ್ಟಾಚಾರ ತಡೆಯುವಂತೆ, ಸಂಪನ್ಮೂಲಗಳ ಸೋರಿಕೆ ತಡೆಯುವಂತೆ- ಪರಿಷ್ಕರಿಸಬೇಕು- ಗ್ರಾಮೀಣ ಪ್ರದೇಶಗಳಲ್ಲಿ ಈಗ ಒಂದು ಅತಿಗಂಭೀರ ಸಮಸ್ಯೆಯಾಗಿರುವ ಗ್ರಾಮೀಣ ನಿರುದ್ಯೋಗದ ಸಮಸ್ಯೆ ಎದುರಿಸಲು ಸ್ವಉದ್ಯೋಗದ ವಿಶೇಷ ಯೋಜನೆ.

ಬಡತನದ ರೇಖೆಯ ಕೆಳಗಿರುವ ಪ್ರತಿಯೊಂದು ಕುಟುಂಬದ ಒಬ್ಬ ಸದಸ್ಯನಿಗಾದರೂ ಉದ್ಯೋಗ ಭರವಸೆ ನೀಡುವ ವಿಶೇಷ ಉದ್ಯೋಗ ಭರವಸೆ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಬೇಕು.

ಕೇಂದ್ರ, ರಾಜ್ಯ ಸರಕಾರಗಳ ಇಲಾಖೆಗಳು ಅಥವಾ ಯಾವುದೇ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳ ಯೋಜನೆಗಳಲ್ಲಿ ಕೂಲಿಯು ಯಾವ ಕಾರಣಕ್ಕೂ ಕನಿಷ್ಠ ಕೂಲಿ ಅಥವಾ ಸ್ಥಳೀಯ ದರಗಳು ಅದಕ್ಕಿಂತ ಹೆಚ್ಚಿದಲ್ಲಿ ಸ್ಥಳೀಯ ದರಕ್ಕಿಂತ ಕಡಿಮೆಯಿರಬಾರದು.

ಗ್ರಾಮೀಣ ಸಾಲಶೂಲೆ

8. ಗ್ರಾಮೀಣ ಸಾಲ ಹೊರೆಯ ಸಮಸ್ಯೆ ಅತ್ಯಂತ ಗಂಭೀರ ಗೊಳ್ಳುತ್ತಿದೆ. ಆದ್ದರಿಂದ ಭೂಹೀನ ಕೃಷಿಕೂಲಿಕಾರರ, ಬಡ ರೈತರ, ಕಸಬುದಾರರ ಹಳೆಯ ಸಾಲಗಳ ಮೊತ್ತದಿಂದ ಪರಿಹಾರ. ಜತೆಗೆ ಗ್ರಾಮೀಣ ಸಾಲವ್ಯವಸ್ಥೆಯನ್ನೇ ಸಮಗ್ರವಾಗಿ ಸುಧಾರಿಸಬೇಕು. ಈ ಮೂಲಕ ಈ ಜನವಿಭಾಗಗಳಿಗೆ ರಿಯಾಯ್ತಿ ದರದಲ್ಲಿ ಸಾಲ ಸಿಗುವಂತಾಗಬೇಕು. ಪ್ರಾಕೃತಿಕ ವಿಪತ್ತುಗಳ ಸಂದರ್ಭದಲ್ಲಿ ಪರಿಹಾರ ಒದಗಿಸಲು ತಕ್ಷಣ ಕ್ರಮ. ಲೇವಾದೇವಿಗಾರರ ಹಿಡಿತದಿಂದ ಈ ಬಡವಿಭಾಗಗಳನ್ನು ಕಾಪಾಡಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು.

ಸಾರ್ವಜನಿಕ ವಿತರಣಾ ವ್ಯವಸ್ಥೆ

9. ಗ್ರಾಮೀಣ ಬಡವರಿಗಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಿ ಅವರಿಗೆ ಎಲ್ಲಾ ಜೀವನಾವಶ್ಯಕ ವಸ್ತುಗಳನ್ನು ತರ್ಕಬದ್ಧ ಬೆಲೆಗಳಲ್ಲಿ ನೀಡಬೇಕು. ಇದಕ್ಕಾಗಿ ಸಬ್ಸಿಡಿ ನೀಡಬೇಕಾಗಿ ಬಂದರೂ ಅದನ್ನು ನೀಡಿ ಒದಗಿಸಬೇಕು. ಗ್ರಾಮೀಣ ಬಳಕೆದಾರರಿಗೆ ಕಿಲೋಮೀಟರ್ ವ್ಯಾಪ್ತಿಯೊಳಗೆ ನ್ಯಾಯ ಬೆಲೆ ಅಂಗಡಿಗಳು ಸಿಗುವಂತಾಗಬೇಕು. ಜೀವನಾವಶ್ಯಕ ಸಾಮಗ್ರಿಗಳ ಬೆಲೆಯೇರಿಕೆಗೆ ತಮ್ಮ ದೊಡ್ಡ ಕಾಣಿಕೆಯನ್ನು ನೀಡುವ ಮೇಲ್ ಖರ್ಚನ್ನು ಕಡಿಮೆ ಮಾಡಲು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು.

ನ್ಯಾಯಬೆಲೆ ಅಂಗಡಿಗಳಲ್ಲಿ ಆಹಾರಧಾನ್ಯಗಳ ಬೆಲೆ ಬೆಳೆಗಾರರಿಗೆ ದೊರೆಯುವ ಬೆಲೆಗಳಿಗಿಂತ 10% ಕ್ಕಿಂತ ಹೆಚ್ಚಿರಬಾರದು.

ಲಾಭಕಾರಿ ಬೆಲೆ

10. ರೈತರ ಉತ್ಪನ್ನಗಳಿಗೆ ಲಾಭಕಾರಿ ಬೆಲೆ ರೈತಾಪಿ ವರ್ಗಗಳ ನಡುವೆ ಎಲ್ಲಾ ಸಂಘಟನೆಗಳ ಒಂದು ಮಹತ್ವದ ಬೇಡಿಕೆ. ಈ ಬಗ್ಗ ಸದಾ ಭರವಸೆಗಳನ್ನು ನೀಡುತ್ತಾ ಬಂದರೂ ರೈತರು ಕಡಿಮೆ ಬೆಲ ಪಡೆದು ಕೊಂದರೆ ಅನುಭವಿಸುತ್ತಾ ಬಂದಿದ್ದಾರೆ. ರಾಷ್ಟ್ರೀಯ ರಂಗ ಸರಕಾರ ಲಾಭಕಾರಿ ಬೆಲೆ ಗ್ಯಾರಂಟಿ ಮಾಡುವ ಪರಿಣಾಮಕಾರಿ ಕ್ರಮದ ಭರವಸೆ ನೀಡಿದೆ. ಈ ಲಾಭಕಾರಿ ಬೆಲೆಯಲ್ಲಿ ಉತ್ಪಾದನಾ ಖರ್ಚು - (ಇದರಲ್ಲಿ ಕುಟುಂಬದ ಶ್ರಮದ ಬೆಲೆಯೂ ಸೇರಿರಬೇಕು. ಮತ್ತು ಕೃಷಿಯಲ್ಲಿ ಮತ್ತೆ ತೊಡಗಲು ಸ್ವಲ್ಪ ಲಾಭದ ಅಂಶವೂ ಸೇರಿರಬೇಕು.

ಲಾಭಕಾರಿ ಬೆಲೆಗಳನ್ನು ಬಿತ್ತನೆ ಸಮಯದಲ್ಲೇ ಪ್ರತಿಯೊಂದು ಉತ್ಪನ್ನಕ್ಕೂ ಘೋಷಿಸಬೇಕು. ಬಿತ್ತನೆ ಸಮಯ ಮತ್ತು ಉತ್ಪನ ಮಾರು ಕಟ್ಟೆಗೆ ಬರುವ ಸಮಯದ ನಡುವಿನ ಅವಧಿಯ ಬೆಲೆಯೇರಿಕೆಯನ್ನು ಗಮನಕ್ಕೆ ತಗೊಂಡು ಸೂಕ್ತವಾಗಿ ಬೆಲೆಗಳನ್ ಹೆಚ್ಚಿಸಬೇಕು.

ಈ ಬೆಲೆಗಳು ಮತ್ತು ಈ ಕೃಷಿ ಸಾಮಗ್ರಿಯನ್ ಕಚ್ಚಾಸಾಮಗ್ರಿಯಾಗಿ ಬಳಸಿ ತಯಾರಿಸುವ ಉತ್ಪನ್ನಗಳ ಬೆಲೆಗಳ ನಡುವೆ ಒಂದು ಸಂಬಂಧ ಕಲ್ಪಿಸಬೇಕು. ಕುಯಿಲು ಆರಂಭವಾದ ಕೂಡಲೇ ಸರಕಾರಿ ಖರೀದಿ ಸಂಸ್ಥೆಗಳು ಮಾರುಕಟ್ಟೆ ಪ್ರವೇಶಿಸಬೇಕು ಮಾರುಕಟ್ಟೆ ಬೆಲೆ ಈ ಬೆಲೆಗಿಂತ ಕೆಳಗೆ ಹೋಗುವಂತಿದ್ದಾಗ ಈ ಬೆಲೆಯಲ್ಲಿ ಬೆಳೆಯ ಒಂದು ಗಮನಾರ್ಹ ಭಾಗವನ್ನು ಖರೀದಿಸಲು ಸಾಲುವಷ್ಟು ಹಣಕಾಸು ಈ ಸಂಸ್ಥೆಗಳ ಕೈಯಲ್ಲಿರಬೇಕು.

ಮಿಗತೆ ಉತ್ಪಾದನೆ ಪ್ರದೇಶಗಳಲ್ಲೆಲ್ಲಾ ಯಾವುದೇ ಬೆಳೆಗಾರ ತನ ಉತ್ಪನ್ನಗಳನ್ನು ಎರಡು ಕಿ.ಮೀ. ಗಿಂತ ಹೆಚ್ಚು ದೂರ ಸಾಗಿಸು ಅಗತ್ಯವಿಲ್ಲದಂತೆ ಖರೀದಿ ಕೇಂದ್ರಗಳನ್ನು ತೆರೆಯಬೇಕು.

11. ಹಾಳಾಗುವ ಕೃಷಿ ಉತ್ಪನ್ನಗಳಿಗೆ (ಕಾಯಿಪಲ್ಲೆ, ಹಣ್ಣು ಕೋಲ್ಡ್ ಸ್ಟೋರೇಜ್, ಉಗ್ರಾಣಗಳು, ಮಾರುಕಟ್ಟೆ ಮತ್ತು ಸಂಸ್ಕರ ಸೌಲಭ್ಯಗಳು ದೊರೆಯುವಂತೆ ಸರಕಾರ ನೋಡಿಕೊಳ್ಳಬೇಕು. ಈ ಮೂಲಕ ಇಂತಹ ಉತ್ಪನ್ನಗಳ ಬೆಳೆಗಾರರಿಗೆ ಸರಿಯಾದ ಬೆ ದೊರೆಯುವಂತೆ, ಸೂಕ್ತ ಮಾರುಕಟ್ಟೆ ದೊರೆಯದೆ ನಷ್ಟವಾಗದಂ ನೋಡಿಕೊಳ್ಳಬೇಕು.

ನಿರ್ವಾಹವಿಲ್ಲದೆ ಅತೀಕಮ್ಮಿ ಬೆಲೆಗೆ ಮಾರುವ ಸ್ಥಿತಿ ಬಂದಂ ರಕ್ಷಿಸಲು ಕೋಲ್ಡ್ ಸ್ಟೋರೇಜ್‌ಗಳಲ್ಲಿ, ಉಗ್ರಾಣಗಳಲ್ಲಿಡುವ ತಮ ಉತ್ಪನ್ನಗಳಿಗೆ ಪ್ರತಿಯಾಗಿ ರೈತರಿಗೆ ಸಾಲಸೌಲಭ್ಯ ದೊರೆಯಬೇಕು.

ಕೃಷಿ - ಆಧಾರಿತ ಉದ್ದಿಮೆಗಳನ್ನು ಬೆಳೆಸಲು ಕ್ರಮ ಕೈಗೊಳ್ಳಬೇಕು ಇದರಿಂದ ಹಣ್ಣು ತರಕಾರಿ ಮುಂತಾದ ಉತ್ಪನ್ನಗಳಿ ತರ್ಕಬದ್ಧ ಪ್ರತಿಫಲ ದೊರೆಯುವಂತೆ ಮಾಡಬಹುದು.

12. ಕೃಷಿ ಉತ್ಪಾದನೆ ಹೆಚ್ಚಿಸಲು ಎಲ್ಲಾ ಅತ್ಯವ ಸಾಮಾಗ್ರಿಗಳನ್ನು ತರ್ಕಬದ್ಧ ಬೆಲೆಯಲ್ಲಿ ಎಲ್ಲಾ ಬೆಳೆಗಾರರಿಗೆ ಬೆ ಸಾಲದ ಆಧಾರದ ಮೇಲೆ ಒದಗಿಸಬೇಕು..ಸಣ್ಣ ಮತ್ತು ಅತಿಸಣ ರೈತರಿಗೆ ಸಾಕಷ್ಟು ಪ್ರಮಾಣದಲ್ಲಿ ಆದ್ಯತೆಯ ಮೇರೆಗೆ ಬಡ್ಡಿದ ಶೇಕಡಾವನ್ನು ಮೀರದಂತೆ ಒದಗಿಸಬೇಕು.

ನೀರಾವರಿ ಸೌಲಭ್ಯ

13. ಹರಿವ ನದಿಗಳನ್ನೂ ಅಂತರ್ಜಲ ಸಂಪನ್ಮೂಲಗಳನ್ನು ಗರಿಷ್ ಪ್ರಮಾಣದಲ್ಲಿ ಬಳಸಿ ನೀರಾವರಿಯನ್ನು ತ್ವರಿತವಾಗಿ ವಿಸ್ತರಿಸಬೇಕು ನೀರು ನಿಲ್ಲುವ ಸಮಸ್ಯೆಯನ್ನು ಸೂಕ್ತ ಚರಂಡಿ ವ್ಯವಸ್ಥೆಯ ಮೂಲ ಎದುರಿಸಿ ಇದರಿಂದ ಘರ್ಷಣೆಗೊಳ್ಳುವ ಭೂಮಿಯನ್ನು. ಮ ತಡೆಯುವಂತಾಗಬೇಕು. ಬೆಳೆಯ ಸಮಯದಲ್ಲಿ ದಿನವಿಡೀ ಕೃಷಿ ವಿದ್ಯುತ್ ಪೂರೈಕೆಯಾಗಬೇಕು. ಎಲ್ಲಾ ಯೋಜನೆಗಳಲ್ಲಿ ನೀರಾವ

ವಿಸ್ತರಣೆಗೆ . ವಿದ್ಯುಚ್ಛಕ್ತಿ ಬೆಳವಣಿಗೆ ಆದ್ಯತೆ ನೀಡಬೇಕು. ಸ್ವಾತಂತ್ರ್ 42 ವರ್ಷಗಳ ನಂತರವೂ 50% ದಷ್ಟು ಮಾತ್ರವೇ ನೀರಾವರಿ ಸಾಮರ್

.ಕೆ.ಎಸ್. ಮನವಿ ಪತ್ರ

ರ್ಕಾರದಿಂದ ವುದೇನು?



ಬಳಿಕೆ ಸಾಧ್ಯವಾಗಿದೆ ಎಂಬುದು ದುರದೃಷ್ಟಕರ ನೀರಾವರಿ ಕೃಷಿ ಉತ್ಪಾದನೆ ಹೆಚ್ಚಿಸುವಲ್ಲಿ ದೊಡ್ಡ ಕೊಡುಗೆ ನೀಡುತ್ತದೆ ಎಂಬುದನ್ನು ನೀರಾವರಿ ಪ್ರದೇಶದ ಅನುಭವ ತೋರಿಸಿಕೊಟ್ಟಿದೆ.

ಪ್ರವಾಹ ಹತೋಟಿ

14. ಪ್ರತಿವರ್ಷ ನೆರೆ ಹಾವಳಿ ದೊಡ್ಡ ಅನಾಹುತ ಮಾಡುತ್ತದೆ-ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ. ಇದರಿಂದಾಗಿ ಮನೆ ಮಾರು, ಬೆಳೆ, ಜಾನುವಾರು, ರಸ್ತೆ, ರೈಲುಗಳ ನಾಶವಾಗುತ್ತದೆ. ಇದರಿಂದಾಗಿ ಪ್ರತಿವರ್ಷ ಕೋಟ್ಯಾಂತರ ರೂಪಾಯಿಗಳ ನಷ್ಟ. ಈ ಪ್ರಾಕೃತಿಕ ವಿಪತ್ತಿನಿಂದ ರಕ್ಷಿಸಿಕೊಳ್ಳುವ ಕ್ರಮಗಳು ಸಾಧ್ಯವಿಲ್ಲ ಎಂದು ಹೇಳುವುದು ತಪ್ಪಾಗುತ್ತದೆ. ಕೆಲವು ದೇಶಗಳು ನದಿಗಳನ್ನು ಹತೋಟಿಗೆ ತಂದು ಜನತೆಗ ಈ ವಿಪತ್ತಿನಿಂದ ರಕ್ಷಣೆ ನೀಡುವ ಒಂದು ಸೂಕ್ತ ವ್ಯವಸ್ಥೆ ಬೆಳಸಿವೆ. ನಮ್ಮ ದೇಶದಲ್ಲೂ ಇದಕ್ಕೆ ಆದ್ಯತೆಯನ್ನು ನೀಡಿ ಪರಿಣಾಮಕಾರಿ ಕ್ರಮ ಕೈಗೊಂಡು ಜನಗಳನ್ನು ನೆರೆಹಾವಳಿಯ ವಿನಾಶಕಾರಿ ಪ್ರಭಾವದಿಂದ ರಕ್ಷಿಸಬೇಕು.

ತೆರಿಗೆಯಿಂದ ಪರಿಹಾರ

15. ಗುತ್ತೇದಾರಿಗಳಿಗೆ ರಿಯಾಯ್ತಿ ಮೇಲೆ ರಿಯಾಯ್ತಿ ನೀಡಿ ಬಡವರ ಮೇಲೆ ಹೊರೆ ಹಾಕುವ ಪರೋಕ್ಷ ತೆರಿಗೆಯ ಮೇಲೇನೇ ಹೆಚ್ಚೆಚ್ಚು ಅವಲಂಬಿಸುವ ಪದ್ಧತಿ ತೊಲಗಬೇಕು. ಈಗಿನ ಅನ್ಯಾಯಕಾರೀ ವ್ಯವಸ್ಥೆಯ ಬದಲು ಆದಾಯದೊಂದಿಗೆ ಹೆಚ್ಚುವ ತೆರಿಗೆ ವ್ಯವಸ್ಥೆಯ, ಹೆಚ್ಚಿನ ಆದಾಯ ಗುಂಪುಗಳ ಮೇಲೆ ಹೆಚ್ಚಿನ ಪ್ರಭಾವದ, ಬಡವರಿಗೆ ವಿನಾಯ್ತಿ ನೀಡುವ ಒಂದು ತೆರಿಗೆ ಪದ್ಧತಿ ತರಬೇಕು.

ದಮನಕಾರಿ ಶಾಸನಗಳ ರದ್ಧತಿ

16. ಎನ್.ಎಸ್.ಎ. ಎಸ್ಮಾ ಮುಂತಾದ ಎಲ್ಲಾ ದಮನಕಾರಿ ಶಾಸನಗಳನ್ನು ವಾಪಸ್ಸು ಪಡೆಯಬೇಕು. ಇಡೀ ಪ್ರದೇಶವನ್ನು ದೀರ್ಘಕಾಲ 144 ನೇ ಸೆಕ್ಷನ್‌ನಲ್ಲಿಡುವ ಕ್ರಮ ನಿಲ್ಲಬೇಕು. 'ಸೇನೆ'ಗಳನ್ನು ಸಂಘಟಿಸುವ ಆಕ್ರಮಣಕಾರಿ ಶೋಷಕ ಗ್ರಾಮೀಣ ಪಟ್ಟಭದ್ರ ಹಿತಾಸಕ್ತಿಗಳಿಂದ ಬಡಜನರ, ದಲಿತರ ರಕ್ಷಣೆ ತಮ್ಮ ಕರ್ತವ್ಯ ಎಂದು ಕಾನೂನು ವ್ಯವಸ್ಥೆಯ ಆಡಳಿತ ಯಂತ್ರ ಭಾವಿಸಬೇಕು. ಯಾಕೆಂದರೆ ಈ 'ಸೇನೆ'ಗಳು ಕಲ್ಯಾಣ ಯೋಜನೆಗಳ, ಕನಿಷ್ಟ ಕೂಲಿ, ಬಡವರಿಗೆ ಭೂಹೀನರಿಗೆ ಜಮೀನು ಹಂಚಿಕೆ ಮುಂತಾದವುಗಳ ಪ್ರಯೋಜ ದೊರೆಯದಂತೆ ಮಾಡುತ್ತವೆ.

ಕೋಮುವಾದಿ ವಿಚ್ಛಿದ್ರಕಾರಿ ಶಕ್ತಿಗಳು

ಗಂಭೀರ ಸ್ಥಿತಿ ಸೃಷ್ಟಿಸಲು, ಕೋಮು, ಜಾತಿ ದಂಗೆಗೆ ಕುಮ್ಮಕ್ಕು ನೀಡಲು, ಸಾಮಾಜಿಕ ಅತ್ಯಾಚಾರಗಳಿಗೆ ಕೋಮು ಅಥವಾ ಜಾತಿ ಬಣ್ಣ ನೀಡಿ ಮರೆಮಾಚುವ ಕೋಮು, ಜಾತಿ ವಿಷ ಹರಡುವ ವಿಚ್ಛಿದ್ರಕಾರಿ, ಪ್ರತ್ಯೇಕತಾವಾದಿ ಶಕ್ತಿಗಳ ವಿರುದ್ಧ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕು.

ಪಂಚಾಯತೀ ರಾಜ್ಯ

ಕೇಂದ್ರ ಸರ್ಕಾರ ಬೇಗನೇ ಒಂದು ಮಾದರಿ ಶಾಸನ ರೂಪಿಸಿ, ರಾಜ್ಯಗಳು ತಮ್ಮ ಸದಸ್ಯರ ಪಂಚಾಯತು ರಾಜ್ಯ ಸಂಸ್ಥೆಗಳ ಶಾಸನಗಳನ್ನು ಈ ಶಾಸನದ ಆಧಾರದ ಮೇಲೆ ತಿದ್ದುಪಡಿ ಮಾಡುವಂತೆ ಹೇಳಬೇಕು. ನಿಯಮಿತ ಚುನಾವಣೆಗಳು, ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲಾಗುವಂತೆ ಚುನಾಯಿತ ಸಂಸ್ಥೆಗಳಿಗೆ ಅಧಿಕಾರದ, ಸಂಪನ್ಮೂಲಗಳ ವಿಕೇಂದ್ರೀಕರಣ, ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆ, ಪರಿಶಿಷ್ಟ ಜಾತಿ, ಬುಡಕಟ್ಟುಗಳಿಗೆ ಹಾಗು ಮಹಿಳೆಯರಿಗೆ ಸಾಕಷ್ಟು ಪ್ರಾತಿನಿಧ್ಯಕ್ಕೆ ಈ ಮಾದರಿ ಶಾಸನದಲ್ಲಿ ಅವಕಾಶವಿರಬೇಕು.

ರೈತರ ಸಾಲ ಮನ್ನಕ್ಕೆ ಅಧಿಕಾರ ಶಾಹಿಯ ವಿರೋಧ

ಬಡ ರೈತರ, ಕೃಷಿ, ಕೂಲಿಕಾರರ, ಕೈ ಕಸಬುದಾರರ ಸಾವಿರ ರೂ.ವರೆಗಿನ ಸಾಲ ಮನ್ನಾ ಮಾಡಿದರೆ 10 ಸಾವಿರ ಕೋಟಿ ರೂ. ವರೆಗೆ ಮನ್ನಾ ಆಗುತ್ತದೆ. ಇದರಿಂದ ಸಮಸ್ತ ಬ್ಯಾಕಿಂಗ್ ವ್ಯವಸ್ಥೆಯೇ ಕುಸಿದು ಬೀಳುತ್ತದೆ ಎಂದು ರಿಝರ್ವ್‌ಬ್ಯಾಂಕ್, ನಬಾರ್ಡ್, ರಾಷ್ಟ್ರೀಕೃತ ಬ್ಯಾಂಕುಗಳ ಅಧಿಕಾರಶಾಹಿ ಬೊಬ್ಬಿಡುತ್ತಿದೆ. ತನ್ನ ಕೇಂದ್ರ ಸರ್ಕಾರ ಇರುವವರೆಗೆ ಇವರೊಂದಿಗೆ ಮೇಳಗಾನ ಮಾಡಿದ್ದ ಕಾಂಗ್ರೆಸ್(ಐ) ಈಗ ರಾಗ ಬದಲಿಸಿದೆ.

ಪಿ.ಕೆ.ಟೆಂಡನ್

ಆಕ್ಟೋಬರ್ 2, 1989ರಂದು ಸಣ್ಣ ರೈತರ, ಭೂಹೀನ ರೈತರ, ಕೈ ಕಸಬುದಾರರ 10 ಸಾವಿರ ರೂ. ವರೆಗಿನ ಸಾಲ ಮನ್ನಾ ಮಾಡುವ ರಾಷ್ಟ್ರೀಯ ರಂಗದ ವಚನ ಪಾಲನೆಗೆ ರಿಝರ್ವ್‌ಬ್ಯಾಂಕ್, ರಾಷ್ಟ್ರೀಯ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್), ಭಾರತೀಯ ಬ್ಯಾಂಕರುಗಳು ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳು ಉಚ್ಛಾಧಿಕಾರಿ ಗಳೆಲ್ಲರ ತೀವ್ರ ವಿರೋಧ ವ್ಯಕ್ತಪಡುತ್ತಿದೆ.

ಸಾಲ ಮನ್ನಾದ ಬೇಡಿಕೆ ದೊಡ್ಡ ಪ್ರಮಾಣದಲ್ಲಿ ಮುಂದೆ ಬಂದದ್ದು 1979-80 ರಲ್ಲಿ ಕೃಷಿ ಉತ್ಪನ್ನಗಳಿಗೆ ಫಲಕಾರಿ ಬೆಲೆಗಾಗಿ ದೇಶಾದ್ಯಂತ ಭುಗಿಲೆದ್ದ ರೈತರ ಹೋರಾಟಗಳಲ್ಲಿ. ನಂತರ ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ ಸರಕಾರಗಳು ನೀಡಿದ ಸಾಕಷ್ಟು ಪ್ರಮಾಣದ ಸಾಲಮನ್ನಾದ ಬಗ್ಗೆ, ರಿಝರ್ವ್ ಬ್ಯಾಂಕ್ ಮತ್ತು ಕೇಂದ್ರ ಹಣಕಾಸು ಇಲಾಖೆ ಹುಬ್ಬೇರಿಸಿತ್ತು. ಬ್ಯಾಂಕಿಂಗ್ ವ್ಯವಸ್ಥೆಯ ಆರೋಗ್ಯಕ್ಕೆ ಇದು ಒಳ್ಳೆಯದಲ್ಲ ಎನ್ನಲಾಯಿತು. ಈ ವಿರೋಧ ಎಷ್ಟರ ಮಟ್ಟಿಗೆ ಹೋಯಿತೆಂದರೆ ಕಾಂಗ್ರೆಯೇತರ ಎನ್.ಟಿ.ಆರ್. ಸರಕಾರಕ್ಕೆ ಮಾತ್ರವಲ್ಲ, ಶರದ್‌ಪವಾರ್‌ರ ಕಾಂಗ್ರೆ ಸರಕಾರಕ್ಕೂ ಕೂಡಾ ಸಹಕಾರಿ ಸಂಘಗಳ ಸಾಲದ ಮೇಲೆ ಬಡ್ಡಿಯನ್ನು ಈ ಸರಕಾರಗಳು ತಮ್ಮ ಖರ್ಚಿನಿಂದಲೇ ಕಡಿಮೆ ಮಾಡುವ ಧೈರ್ಯತೋರಿದರೆ ತಾನು ಹಣಕಾಸು ಪೂರೈಕೆ ನಿಲ್ಲಿಸುವುದಾಗಿ ನಬಾರ್ಡ್ ಬೆದರಿಕೆ ಹಾಕಿತು!

ನಂತರ ಮಹಾರಾಷ್ಟ್ರದಲ್ಲಿ ಶರದ್ ಜೋಶಿ ನೇತೃತ್ವದ ಶೆತ್‌ಕರಿ ಸಂಘಟನ, ಕರ್ನಾಟಕದಲ್ಲಿ ನಂಜುಂಡಸ್ವಾಮಿ ನೇತೃತ್ವದ ರೈತಸಂಘ, ಯು.ಪಿ. ಯಲ್ಲಿ ಟಿಕಾಯತ್ ನೇತೃತ್ವದ ಭಾರತೀಯ ಕಿಸಾನ್ ಯೂನಿಯನ್ ಈ ಬೇಡಿಕೆಯನ್ನು ಮುಂದೆ ಕೊಂಡುಹೋದವು. 1987ರ ಹರ್ಯಾಣಾ ಚುನಾವಣೆಗಳಲ್ಲಿ ಇದು ದೊಡ್ಡ ಪ್ರಶ್ನೆಯಾಯಿತು. ಈ ಪ್ರಶ್ನೆ ದೇವಿಲಾಲ್ ನೇತೃತ್ವದ ಲೋಕದಳವನ್ನು ಅಧಿಕಾರಕ್ಕೇರಿಸಿತು. ಕಳೆದ ಲೋಕಸಭ ಚುನಾವಣೆಗಳಲ್ಲಿ ಇದು ರಾಷ್ಟ್ರೀಯ ರಂಗದ ಚುನಾವಣಾ ಘೋಷಣೆಯ ಭಾಗವಾಯಿತು. ರಾಷ್ಟ್ರೀಯ ರಂಗ ಸರ್ಕಾರ ಈ ವಚನ ಪಾಲಿಸಲು ತಾನು ಬದ್ಧ ಎಂದರೆ. ಐದು ವರ್ಷಗಳಲ್ಲಿ ಹಂತ ಹಂತವಾಗಿ ಪಾಲಿಸುವುದಾಗಿ ಹೇಳಿದೆ.

ರಾಷ್ಟ್ರೀಯರಂಗದ ಕೆಲವು ಮುಖಂಡರು ಎಲ್ಲರಿಗೂ ಸಾವಿರ 10ರೂ. ವರೆಗೆ ಸಾಲ ಮನ್ನ ಮಾಡಬೇಕೆನ್ನುತ್ತಿದ್ದಾರೆ. ಆದರೆ ಹಣಕಾಸು ಮಂತ್ರಿ ದಂಡವತೆಯವರು ಸಣ್ಣ ರೈತರು, ಭೂಹೀನ ಕೃಷಿ ಕೂಲಿಕಾರರು ಮತ್ತು ಕೈಕಸಬುದಾರರಿಗೆ ಮಾತ್ರ ಇದು ಅನ್ವಯಿಸುತ್ತದೆ. ಫಲಾನುಭವಿಗಳನ್ನು ಗುರುತಿಸಲು, ಮನ್ನಾವನ್ನು ಬ್ಯಾಂಕಿಂಗ್ ವ್ಯವಸ್ಥೆ ನೋವಿಲ್ಲದೆ ಪಡೆದುಕೊಳ್ಳುವಂತಾಗಲು ಹಂತಹಂತವಾಗಿ ಜಾರಿಮಾಡುವುದರ ವಿಧಾನಗಳನ್ನು ರೂಪಿಸಬೇಕೆಂದು ಅವರು ಬ್ಯಾಂಕ್ ಮುಖ್ಯಾಧಿಕಾರಿಗಳಿಗೆ, ಮುಖ್ಯ ಮಂತ್ರಿಗಳಿಗೆ ಹೇಳಿದ್ದಾರೆ.

ಕೇಂದ್ರದಲ್ಲಿ ತಮ್ಮ ಪಕ್ಷ ಅಧಿಕಾರದಲ್ಲಿ ಇರುವವರೆಗೆ ಬ್ಯಾಂಕ್ ಉಚ್ಛಾಧಿಕಾರಿಗಳ, ಅಧಿಕಾರಿಶಾಹಿಯ ವಾದಗಳನ್ನು ಪೂರ್ಣವಾಗಿ ಬೆಂಬಲಿಸುತ್ತಿದ್ದ ಕಾಂಗ್ರೆಸ್(ಐ) ಈಗ ಇದ್ದಕ್ಕಿದ್ದಂತೆ ಈ ಬೇಡಿಕೆಗೆ ಗಂಟಲು ಹರಿದುಕೊಂಡು ಬೆಂಬಲ ಸೂಚಿಸುತ್ತಿದ್ದಾರೆ. ರಾಷ್ಟ್ರೀಯರಂಗ ಸರ್ಕಾರಕ್ಕೆ ಮುಜುಗರ ಉಂಟುಮಾಡುವ ಏಕ ಮಾತ್ರ ಉದ್ದೇಶ ಅಧಿಕಾರಶಾಹಿ, ಹಾಗೂ ಅದನ್ನು ಬೆಂಬಲಿಸಿ ಅಧಿಕಾರದಲ್ಲಿದ್ದಾಗ ಕಾಂಗ್ರೆಸ್(ಐ) ಈ ಸಾಲಮನ್ನಾವನ್ನು ವಿರೋಧಿಸಿ ಒಡ್ಡುವ ವಾದಗಳೇನು?

ಮೊದಲನೆಯದಾಗಿ ಇದೊಂದು ದೊಡ್ಡಹೊರೆಯಾಗುತ್ತದೆ. ಇಡೀ ಬ್ಯಾಂಕಿಗ್ ವ್ಯವಸ್ಥೆಯೇ ಈ ಹೊರೆಯಿಂದ ಕುಸಿದು ಬೀಳುತ್ತದೆ ಎನ್ನುತ್ತಾರೆ ಅವರು. ಇದಕ್ಕಾಗಿ ಸಾಲಮನ್ನಾದ ಗಾತ್ರವನ್ನು ಅವರು ಸಾಧ್ಯವಾದಷ್ಟು ಹಿಗ್ಗಿಸಿ ಹೇಳಲು ಯತ್ನಿಸುತ್ತಾರೆ. ಅವರ ಪ್ರಕಾರ ಈ 'ಹೊರೆ' ಒಟ್ಟು 14 ಸಾವಿರ ಕೋಟಿ ರೂ.ಗಳಿಂದ 26 ಸಾವಿರ ಕೋಟಿ ರೂ. ವರೆಗೆ ಹೋಗಬಹುದು!

ಆದರೆ 1985-86, 1980-87ರಲ್ಲಿ ಸಹಕಾರಿ ಸಂಘಗಳು, ಗ್ರಾಮೀಣ ಬ್ಯಾಂಕ್‌ಗಳು, ಭೂ ಅಭಿವೃದ್ಧಿ ಬ್ಯಾಂಕ್‌ಗಳು ನೀಡಿದ ಸಾಲಗಳ ಅಂಕಿ-ಅಂಶಗಳಿಂದ ಲೆಕ್ಕಹಾಕಿದರೆ ಸಾಲ ಮನ್ನಾದ ಒಟ್ಟು ಮೊತ್ತ 2661.12 ಕೋಟಿಯಿಂದ 3011.9ಕೋಟಿ ರೂ.ಗಳವರೆಗೆ ಆಗಬಹುದಷ್ಟೆ. ಇಕನಾಮಿಕ್ಸ್ ಟೈಮ್ಸ್ ಲೆಕ್ಕಾಚಾರದ ಪ್ರಕಾರ 13500ರೂ. ಕೋಟಿ ಆಗುತ್ತದೆ.

ಇನ್ನೂ ಕೆಲವು ಲೆಕ್ಕಾಚಾರ ತೆಗೆದುಕೊಂಡರೆ ಹಣಕಾಸು ಮಂತ್ರಿಯವರು ಹೇಳಿದ ವಿಧಾನಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ ಮನ್ನಾ ಮಾಡಬೇಕಾದ ಸಾಲದ ಮೊತ್ತ 4000 ಕೋಟಿ. ರೂಗಳಿಂದ ಹೆಚ್ಚೆಂದರೆ 8000ಕೋಟಿ ರೂ. ವರೆಗೆ ಆಗಬಹುದು.

ಗ್ರಾಮೀಣ ಸಾಲ ವ್ಯವಸ್ಥೆಯ ಆಮೂಲಾಗ್ರ ಪರಿವರ್ತನೆ ಹಾಗೂ ಪ್ರಜಾಪ್ರಭುತ್ವೀಕರಣದಿಂದ ಮಾತ್ರವೇ ಗ್ರಾಮೀಣ ಬಡವರ ಸಾಲ ಹೊರೆಗೆ ಪರಿಹಾರ ಸಾಧ್ಯ.

ಗ್ರಾಮೀಣ ಬಡವರ ಸಾಲಹೊರೆ

ಗ್ರಾಮೀಣ ಬಡವರು ಸಂಸ್ಥೆಗಳ ಮೂಲಕ ಪಡೆದ ಸಾಲಮನ್ನಾ ಪೂರ್ಣ ನೆರವೇರಿದರೂ ಕೂಡಾ ಅವರಿಗೆ ಸಾಲದ ವಿಪರೀತ ಹೊರೆಯಿಂದ ಪರಿಹಾರ ಸಿಗುವುದಿಲ್ಲ. ಆದರೆ ಈ ಪರಿಹಾರ ನೀಡುವುದು ಒಂದು ರಾಷ್ಟ್ರೀಯ ಬದ್ಧತೆ.

ಅಖಿಲ ಭಾರತ ಸಾಲ, ಬಂಡವಾಳ ಹೂಡಿಕೆ ಸರ್ವೆಗಳ ಅಂಕಿ-ಅಂಶ ಗ್ರಾಮೀಣ ಸಾಲ ಹೊರೆಯ ಗಾತ್ರವನ್ನು ಸರಿಯಾಗಿ ಸೂಚಿಸುವುದಿಲ್ಲ. ಆದರೆ ಈ ಅಂಕಿ ಅಂಶಗಳ ಪ್ರಕಾರ ಕೂಡಾ ಸಾಂಸ್ಥಿಕವಲ್ಲದ ಅಂದರೆ ಖಾಸಗಿ ಲೇವಾದೇವಿಗಾರರಿಂದ ಪಡೆದ ಸಾಲಗಳ ಮೊತ್ತ 6000ಕೋಟಿ ರೂ. ಆದು ಒಟ್ಟು ಸಾಲ ಹೊರೆಯ 40%. ಇವು ವಿಪರೀತ ಬಡ್ಡಿಯ ಸಾಲಗಳು.

ಲೇವಾದೇವಿಗಾರರ ಯಮಹಿಡಿತದಿಂದ ಗ್ರಾಮೀಣ ಬಡವರನ್ನು ಉಳಿಸುವ ಕೆಲಸ ಮುಗಿದಿದೆ ಎಂದು ರಿಝರ್ವ್ ಬ್ಯಾಂಕಿನ ಖುಸ್ರೋ ಸಮಿತಿಯ ವರದಿ ಹೇಳಿರುವುದನ್ನು ನಂಬಲು ಕಾರಣಗಳಿಲ್ಲ. ಉದಾ: ಮೇಲೆ ಹೇಳಿದ ಆದರೆ ಅದರ ಪ್ರಕಾರವೆ 1000ರೂ. ವರೆಗಿನ ಆಸ್ತಿಮೌಲ್ಯ ಹೊಂದಿರುವ ಕುಟುಂಬಗಳಿಗೆ ಸಹಕಾರಿ ಸಂಘ ಮತ್ತಿತರ ಸಂಸ್ಥೆಗಳ ಮೂಲಕ ದೊರೆತ ಸಾಲ ಕೇವಲ 9% ಲೇವಾದೇವಿಗಾರರಿಂದ ಪಡೆದ ಸಾಲವೇ 91% ತದ್ವಿರುದ್ಧವಾಗಿ ಗ್ರಾಮೀಣ ಶ್ರೀಮಂತರಿಗೆ ಈ ಸಂಸ್ಥೆಗಳಿಂದ ದೊರೆತ ಸಾಲ 95% ದಷ್ಟು!

ಪೂರ್ಣ ಪರಿಹಾರ ಹೇಗೆ?

1951-52ರ ಪ್ರಥಮ ಗ್ರಾಮೀಣ ಸಾಲ ಸರ್ವೆ ಗ್ರಾಮೀಣ ಸಾಲ ಪೂರೈಕೆಗೆ ಲೇವಾದೇವಿಗಾರರೇ ಏಕ ಮಾತ್ರ ಮೂಲ ಎಂಬ ಕರಾಳ ಚಿತ್ರ ಮೂಡಿಸಿದ ನಂತರ ಸಹಕಾರೀ ಸಾಲ ವ್ಯವಸ್ಥೆಯನ್ನು ತ್ವರಿತವಾಗಿ ಹರಡಲು ಕ್ರಮ ಕೈಗೊಳ್ಳಲಾಯಿತು. ಆದರೆ ಸಾಲ ಸಮಸ್ಯೆಯ ಪರಿಹಾರಕ್ಕೆ ಅವಲಂಬಿಸಿದ್ದು ಭೂಮಾಲಕ ಪರ ಅಧಿಕಾರಶಾಹಿಗಳನ್ನೇ ಹೊರತು ಸಂಘಟಿತ ರೈತರು, ಕೃಷಿ ಕೂಲಿಗಾರರನ್ನಲ್ಲ. ಇದನ್ನು 1955ರಲ್ಲೇ ಎ.ಐ.ಕೆ.ಎಸ್. ಸರಕಾರದ ಗಮನಕ್ಕೆ ತಂದಿತ್ತು.

ವಾಸ್ತವವಾಗಿ ಸಹಕಾರೀ ಸಾಲದ ವಿಸ್ತರಣೆ, ನಂತರ ಈ ರಂಗಕ್ಕೆ ರಾಷ್ಟ್ರೀಕೃತ ಬ್ಯಾಂಕುಗಳ ಪ್ರವೇಶದ ಭೂಮಾಲಿಕ-ಲೇವಾದೇವಿಗಾರರ ಶೋಷಣೆಯನ್ನು ಅಂತ್ಯಗೊಳಿಸುವ ಉದ್ದೇಶದಿಂದ ನಡೆದಿರಲಿಲ್ಲ. ಸ್ವಾತಂತ್ರ್ಯದ ಮೊದಲು ಕಾಂಗ್ರೆಸ್ ನೀಡಿದ್ದ ಈ ವಚನವನ್ನು ಅಧಿಕಾರ ಪಡೆದ ಕೂಡಲೇ ಅದು ಮರೆತೇ ಬಿಟ್ಟಿತ್ತು. ಈಗಲೂ ಲೇವಾದೇವಿಗಾರ ಇದ್ದಾನೆ. ಬಹುಪಾಲು ಗ್ರಾಮೀಣ ಜನ ಸಮೂಹಗಳ ಬಡತನವೂ ಹಾಗೇ ಇದೆ.

ಕೃಷಿ ಉತ್ಪನ್ನಗಳಿಗೆ ಫಲಕಾರಿ ಬೆಲೆ ಸಿಗದಿರುವುದು ಮತ್ತು, ನೆರೆ ಬರದಿಂದ ಪ್ರತಿವರ್ಷ ಸುಮಾರು 2000 ಕೋಟಿ ರೂ.ಗಳ

ಪುಟ 6 ಕ್ಕೆ

ಗ್ರಾಮೀಣ ಸಾಲ ಯಾರಿಗೆ. ಎಲ್ಲಿಂದ, ಎಷ್ಟು?

ಆಸ್ತಿ ಮೌಲ್ಯ	ಸಾಂಸ್ಥಿಕ ಸಾಲ (ಶೇಕಡಾ)	ಲೇವಾದೇವಿಗಾರರಿಂದ (ಶೇಕಡಾ)
1000 ರೂ. ವರೆಗೆ	9	91
1000-5000 ರೂ.	29	71
5000-10000 ರೂ.	33	67
10000-20000 ರೂ.	46	54
20000-50000 ರೂ.	55	45
50000-1 ಲಕ್ಷ ರೂ.	58	42
1ಲಕ್ಷ- 5ಲಕ್ಷ ರೂ.	76	24
5 ಲಕ್ಷಕ್ಕಿಂತ ಹೆಚ್ಚು	95	5
ಒಟ್ಟು	61	39

ಮೆಹಾಂ ಹಿಂಸಾಚಾರ: ಪಿ.ಬಿ. ಆತಂಕ

ಮೆಹಂ ವಿಧಾನಸಭಾ ಚುನಾವಣಾ ಕ್ಷೇತ್ರದಲ್ಲಿ ಫೆಬ್ರುವರಿ 25ರಂದು ಮತಗಟ್ಟೆಗಳಲ್ಲಿ ಮರುಮತದಾನ ನಡೆಯುವಾಗ ನಡೆದ ಹಿಂಸಾಚಾರದ ಬಗ್ಗೆ, ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ತನ್ನ ತೀವ್ರ ಆಘಾತ ವ್ಯಕ್ತಪಡಿಸಿದೆ. ಇದು ಬಹುಮಂದಿಯ ಜೀವ ಹಾನಿಯಾಗಿ ಮತದಾನ ಪ್ರಕ್ರಿಯೆಯನ್ನು ಕೆಡಿಸಿದೆ. ಈ ಕ್ಷೇತ್ರದ ಹಲವಡೆ ಮುಕ್ತ ನ್ಯಾಯಮತದಾನ ನಡೆಯದಂತೆ ಪ್ರಯತ್ನ ನಡೆದಿದೆಯೆಂಬುದು ಸ್ಪಷ್ಟ ಎಂದಿರುವ ಪಾಲಿಟ್‌ಬ್ಯೂರೋ ಚುನಾವಣಾ ಆಯೋಗ ಒಂದು ತ್ವರಿತ ನಿರ್ಣಯ ಕೈಗೊಂಡು ಯಾವುದೇ ಕಡೆಯಿಂದ ಬೆದರಿಕೆ, ಹಿಂಸಾಚಾರಕ್ಕೆ ಅವಕಾಶವಿಲ್ಲದ ವಾತಾವರಣದಲ್ಲಿ ತೊಂದರೆಗೀಡಾದ ಮತಗಟ್ಟೆಗಳಲ್ಲಿ ಮರುಮತದಾನ ನಡೆಯುತ್ತದೆ ತಮ್ಮ ಮತ ಚಲಾಯಿಸಲು ಜನತೆಗೆ ಪೂರ್ಣ ಅವಕಾಶ ದೊರೆಯುತ್ತದೆ ಎಂದು ಆಶಿಸಿದೆ.

ಮಾರ್ಚ್ 30:15 ಸಾವಿರ ಮಂಡಲ್ ಪಂಚಾಯ್ತ್ ನೌಕರರ ವಿಧಾನ ಸೌಧ ಚಲೋ

ಹೋದ ವರ್ಷ 30-3-89 ರಂದು ಮಂಡಲ ಪಂಚಾಯತ್ ನೌಕರರು ವಿಧಾನಸೌಧದ ಮುಂದೆ ಮತ ಪ್ರದರ್ಶನ ನಡೆಸಿದಾಗ ಅಂದಿನ ಪಂಚಾಯತ್ ರಾಜ್ಯ ಮಂತ್ರಿ ಎಂ.ಪಿ. ಪ್ರಕಾಶ ಅವರು ತಾತ್ಕಾಲಿಕ ಕನಿಷ್ಟ ವೇತನ ರೂ. 500/- ಕೊಟ್ಟು ನೌಕರಿಯ ಭದ್ರತೆ ನೀಡುವುದಾಗಿ ಒಪ್ಪಿದ್ದರು. ಕೆಲವೇ ದಿವಸದಲ್ಲಿ ಅವರ ಮಂತ್ರಿ ಮಂಡಲ ಕಿತ್ತೊಗೆಯಲ್ಪಟ್ಟ ನಂತರ ಒಂದು ವರ್ಷವಾದರೂ ಕೂಡ ಸರಕಾರ ರಾಜ್ಯದಲ್ಲಿಯ 15000 ಮಂಡಲ ಪಂಚಾಯತಿ ನೌಕರರ ಬೇಡಿಕೆಗಳನ್ನು ಈಡೇರಿಸಲುಯಾವುದೇ ಕ್ರಮಕ್ಕೆಗೊಂಡಿಲ್ಲ, ಮಾತ್ರ ವಲ್ಲ ರಾಜ್ಯಪಾಲರ ಆಡಳಿತೆಯಲ್ಲಿ 1-4-87 ರ ನಂತರ ನೇಮಿಸಲ್ಪಟ್ಟ ನೌಕರರಲ್ಲಿ 240 ದಿವಸ ಪೂರ್ಣ ಗೊಳ್ಳದವರನ್ನು ನೌಕರಿಯಿಂದ ತೆಗೆದು ಹಾಕಬೇಕೆಂಬ ಸರಕಾರಿ ಆಜ್ಞೆ ಹೊರಡಿಸಿ ನೂರಾರು ಜನರನ್ನು ಕೆಲಸದಿಂದ ತೆಗೆದು ಹಾಕಲಾಗಿದೆ. ಹೊಸ ಸರಕಾರ ಬಂದ ನಂತರ ಕೂಡ ಮಂತ್ರಿಗಳಿಗೆ ಮನವಿ ಸಲ್ಲಿಸಿದರೂ ಬೇಡಿಕೆ ಈಡೇರದೆ ಇಂದಿಗೂ ತಿಂಗಳು ರೂ 40 ರಷ್ಟು ಸಂಬಳದಲ್ಲಿ ದುಡಿಯುವ ಮಂಡಲ ಪಂಚಾಯತ್ ಕೆಲಸಗಾರಿದ್ದಾರೆ. ನೌಕರಿಯ ಭದ್ರತೆ ಸರಕಾರಿ ನೌಕರರಿಗೆ ಸಿಗುವ ವೇತನ ಮತ್ತು ಇತರ ಸೌಲಭ್ಯಗಳಿಗಾಗಿ 30-2-90 ರಂದು ರಾಜ್ಯದ 15000 ನೌಕರರು ವಿಧಾನ ಸೌಧ ಚಲೋ ಕಾರ್ಯಕ್ರಮವನ್ನು ನಿನ್ನೆ ನಡೆದ ಸಭೆಯಲ್ಲಿ ನಿರ್ಧರಿಸಿದ್ದಾರೆ ಎಂದು ಕರ್ನಾಟಕ ರಾಜ್ಯ ಮಂಡಲ ಪಂಚಾಯತ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಕೆ. ಉಪಾಧ್ಯಾಯರು ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ಸಾಲಮನ್ನಾಕ್ಕೆ......

ಪುಟ 5 ರಿಂದ

ಬೆಳೆನಷ್ಟ. ಇದರಿಂದ ಸಮಸ್ಯೆ ಇನ್ನಷ್ಟು ಬಿಗಡಾಯಿಸಿದೆ. ಗ್ರಾಮೀಣ ಸಾಲಹೊರೆ 1951-52ರಲ್ಲಿ 750 ಕೋಟಿ ರೂ. ಇದ್ದದ್ದು 15 ಸಾವಿರ ಕೋಟಿ ರೂ. ಗೇರಿದೆ. ಕೃಷಿ ಉತ್ಪಾದನೆ ಹೆಚ್ಚಿಸಲು ತಂತ್ರಜ್ಞಾನದ ಬಳಕೆಯ ಮಟ್ಟ ಹೆಚ್ಚಿಸುವುದಕ್ಕಾಗಿ ಹಣಕಾಸು ಒದಗಿಸುವುದು ಅಗತ್ಯ. ನಿಜ. ಆದರೆ ಇದನ್ನು ಗ್ರಾಮೀಣ ಬಡವರನ್ನು ಸಾಲದ ಗುಲಾಮಿಕೆಯಿಂದ, ಲೇವಾದೇವಿಗಾರರ ಶೋಷಣೆಯಿಂದ ಉದ್ಧರಿಸುವ ಪ್ರಶ್ನೆಗೆ ಎದುರಾಗಿ ಎತ್ತುವುದು ಸರಿಯಲ್ಲ.

ಬಡರೈತರ, ಕೃಷಿಕೂಲಿಕಾರರ, ಕಸಬುದಾರರ ಸಾಂಸ್ಥಿಕ ಸಾಲ ಮನ್ನಾ ಹೆಚ್ಚೆಂದರೆ ಭಾಗಶಃ ಪರಿಹಾರ. ಇದರ ಜತೆಗೆ ಖಾಸಗಿ ಲೇವಾದೇವಿಗಾರರಿಂದ ಪಡೆದ ಹಳೆಯ ಸಾಲಗಳಿಂದ ಪರಿಹಾರದ ಪೂರಕ ಕ್ರಮಗಳೂ ಅಗತ್ಯ. 1975ರ ಇಪ್ಪತ್ತಂಶದಲ್ಲಿ ಇದೊಂದು ಅಂಶವಾಗಿದ್ದರೂ, ಒಂದು ಪರ್ಯಾಯ ಸಾಲ ಪೂರೈಕೆ ವ್ಯವಸ್ಥೆಯಿಲ್ಲದ್ದರಿಂದ ಅದು ವಿಫಲಗೊಂಡಿತು.

ಆದ್ದರಿಂದಲೇ ಅಖಿಲ ಭಾರತ ಕಿಸಾನ್ ಸಭಾ ಕೃಷಿ ಮಂತ್ರಿಯವರಿಗೆ ಇತ್ತೀಚೆಗೆ ಸಲ್ಲಿಸಿದ ಮನವಿಯಲ್ಲಿ ಸಮಸ್ತ ಗ್ರಾಮೀಣ ಸಾಲವ್ಯವಸ್ಥೆಯನ್ನೇ ಆಮೂಲಾಗ್ರವಾಗಿ ಬದಲಿಸುವ ಸಲಹೆ ನೀಡಿತು. ಇದರಿಂದ ಈ ಬಡವಿಭಾಗಗಳಿಗೆ ರಿಯಾಯ್ತಿ ದರಗ... ಸಾಲ ಸಿಗುವಂತಾಗಬೇಕು. ಪ್ರಾ... ವಿಪತ್ತುಗಳಿಂದ ಸಾಲ ಮರುಪಾವತಿ ... ಕಳಕೊಂಡವರಿಗೆ ಪರಿಹಾರ ಒದಗಿ... ವ್ಯವಸ್ಥೆಯೂ ಈ ಗ್ರಾಮೀಣ ... ವ್ಯವಸ್ಥೆಯ ಅವಿಭಾಜ್ಯ ಅಂಗವಾಗಬೇಕೆಂ... ಕಿಸಾನ್ ಸಭಾ ಅಭಿಪ್ರಾಯ ಪಟ್ಟಿದೆ.

ಸಾಲವ್ಯವಸ್ಥೆಯನ್ನು, ಮುಖ್ಯವ... ಗ್ರಾಮೀಣ ಸಹಕಾರಿ ಸಂಸ್ಥೆಗಳ... ಭೂಮಾಲಿಕರು ಮತ್ತಿತರ ಗ್ರಾಮೀ... ಶೋಷಕರ ಹಿಡಿತದಿಂದ ತಪ್ಪಿಸಿ ಪ್ರಜಾಸತ್ತಾ... ರೀತಿಯಲ್ಲಿ ಕೆಲಸಮಾಡು ವಂತಾಗಿಸುವ... ಈ ಆಮೂಲಾಗ್ರ ಬದಲಾವಣೆಯ ಅ... ವಾಗಬೇಕೆಂದೂ ಎ.ಐ.ಕೆ.ಎಸ್. ... ಮನವಿಯಲ್ಲಿ ಹೇಳಿದೆ. ಸಾಲ ನೀ... ಸಂಸ್ಥೆಗಳಿಂದ ಸಾಲ ಪಡೆಯುವ ಕ್ರ... ವಿಧಾನಗಳನ್ನು ಸರಳಗೊಳಿಸಬೇ... ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡ... ಈ ಸಂಸ್ಥೆಗಳ ಸಿಬ್ಬಂದಿಗಳು ಇದನ್ನೊಂ... ಗ್ರಾಮೀಣ ಬಡವರ ಹಿತಾಸಕ್ತಿಯಿ... ನಡೆಸುವ ಸಾರ್ವಜನಿಕ ಸೇವಾ ವ್ಯ... ನಡೆಸಬೇಕೇ ಹೊರತು ಲಾಭಗಳಿಸ... ವ್ಯಾಪಾರೀ ಸಂಸ್ಥೆಗಳಂತೆ ಅಲ್ಲ ಎಂಬ ... ಅವರಿಗೆ ತರಬೇತಿ ನೀಡಬೇಕೆಂ... ಎ.ಐ.ಕೆ.ಎಸ್. ಒತ್ತಾಯಿಸಿರುವುದೂ ಹಿನ್ನೆಲೆಯಲ್ಲೇ.

ಯುವಕರನ್ನು ಆಕರ್ಷಿಸಲು...

ಪುಟ 3 ರಿಂದ.

ಹೆಚ್ಚಾಗಿ ಆಕರ್ಷಿಸಲು ಸಾಧ್ಯವಾಗಲಿಲ್ಲ. ಮುಂದೆ ನಾವು ಸಾಂಸ್ಕೃತಿಕ ಚಟುವಟಿಕೆಗಳನ್ನೂ, ಪಂದ್ಯಾಟಗಳನ್ನೂ, ಚರ್ಚಾಕೂಟಗಳನ್ನು, ಪ್ರಬಂಧ ಸ್ಪರ್ಧೆಗಳನ್ನು ನಡೆಸಲು ಪ್ರಾರಂಭಿಸಿದಾಗ ಯುವಕರು, ಆಕರ್ಷಿಸಲ್ಪಟ್ಟರು. ಈಗ ಅದು ವಿಶಾಲ ರೀತಿಯ ಸಾಂಸ್ಕೃತಿಕ ಚಟುವಟಿಕೆಯಾಗಿ ಬೆಳೆದು ಬರುತ್ತಿದೆ. ಅದೇ ರೀತಿಯಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳಗಳಲ್ಲಿ ಸ್ಥಳೀಯ ಸಮಸ್ಯೆಗಳನ್ನು ಎತ್ತಿಕೊಂಡು ಅವುಗಳ ನಿವಾರಣೆಗೆ ಕ್ರಮಕ್ಕೆಗೊಳ್ಳುತ್ತಿದ್ದೇವೆ. ರಸ್ತೆ ನಿರ್ಮಾಣ, ಸ್ವಚ್ಛತೆಯ ಕೆಲಸ ಮುಂತಾದ ಕೆಲಸಗಳಿಗಾಗಿ ಶ್ರಮದಾನ ಏರ್ಪಡಿಸುತ್ತಿದ್ದೇವೆ. ಆಯಾ ಪ್ರದೇಶದ ಜನರೂ ಅದರಲ್ಲಿ ಭಾಗವಹಿಸುತ್ತಾರೆ. ಖರ್ಚಿಲ್ಲದೆ ಅಭಿವೃದ್ಧಿ, ಸ್ವಚ್ಛತೆಯ ಕೆಲಸಗಳನ್ನು ಜನ ನೋಡುತ್ತಾರೆ. ಪ್ರಶಂಸೆ ಮಾಡುತ್ತಾರೆ. ಆಗ ನಾವು ಡಿ.ವೈ.ಎಫ್.ಐ.ಯ ಧ್ಯೇಯ ಧೋರಣೆ ವಿವರಿಸುತ್ತೇವ. ಸದಸ್ಯತ್ವ ನೊಂದಾಯಿಸುತ್ತೇವೆಂದು ಹೇಳಿದರು.

ಆಂಧ್ರಪ್ರದೇಶದಲ್ಲಿ 13000 ಘಟಕಗಳಿವೆ. ಪ್ರತಿಯೊಂದು ಜಿಲ್ಲೆಗೂ ಒಬ್ಬ ಪೂರ್ಣಾವಧಿ ಕಾರ್ಯಕರ್ತ ಕೆಲಸ ಮಾಡುತ್ತಿದ್ದಾನೆ. ನಾವು ಜನವರಿ 21ರಂದು ರಾಜ್ಯಾದ್ಯಂತ ಸದಸ್ಯತ್ವ ನೊಂದಾವಣೆಗೆ ಕರೆ ಕರೆಕೊಟ್ಟಿದ್ದೆವು. ಆ ದಿವಸ 2ಲಕ್ಷ ಸದಸ್ಯರನ್ನು ನೊಂದಾಯಿಸಲು ಸಾಧ್ಯವಾಯಿತು. ಅನಂತರವೂ ಸದಸ್ಯರನ್ನು ಮಾಡುವ ಕೆಲಸ ಮುಂದುವರಿದಿದೆಂದು ಹೇಳಿದರು.

ಹರಿಜನ ಗಿರಿಜನ ಸಮಸ್ಯೆಗಳತ್ತ ಗಮನ ಸೆಳೆಯುತ್ತಾ, ಸಮಾಜದಲ್ಲಿಯ ಭಿನ್ನತೆಗಳಿಂದಾಗಿ ಈ ಸಮಸ್ಯೆ ಬಗೆಹರಿಯದೆ ಉಳಿದಿದೆ ಎಂದೂ, ಕಲಿತ ಜನರೇ ಉತ್ತರಪ್ರದೇಶದಲ್ಲಿ ಬಹುಜನ ಸಮಾಜಪಾರ್ಟಿಯನ್ನೂ ಹಾಗೆಯೇ ಮಹಾರಾಷ್ಟ್ರ ಕರ್ನಾಟಕ ಮತ್ತಿತರ ರಾಜ್ಯಗಳೆಲ್ಲೆಲ್ಲಾ ಡಾ॥ ಅಂಬೇಡ್ಕರ್ ಸಂಘಟನೆ ಮುಂತಾದ ಸಂಘಟನೆಗಳನ್ನು ಹರಿಜನ ಗಿರಿಜನರ ಮಧ್ಯೆ ಕಟ್ಟಿ ಚಟುವಟಿಕೆ ನಡೆಸುತ್ತಿದ್ದಾರೆ. ಹರಿಜನ ಯುವಕರೆಲ್ಲ ಪಾಳೆಗಾರಿಗಿ ಪದ್ಧತಿಗೆ ವಿರೋಧವಾಗಿದ್ದಾರೆ. ಅದು ಸ್ವಾಗತಾರ್ಹ. ಆದರೆ ಆ ಯುವಕರನ್ನು ಸಾಮೂಹಿಕ ಸಂಘಟನೆಗಳನ್ನು ಮುರಿಯಲು ಉಪಯೋಗಿಸುತ್ತಿದ್ದಾರೆ. ಅದರ ಕುರಿತು ನಾವು ಎಚ್ಚರಿಕೆಯಿಂದಿರಬೇಕು. ಅವರ ಸಂಘಟನೆಯ ಜೊತೆಯಲ್ಲಿ ಜಂಟೀ ಕಾರ್ಯಕ್ರಮ, ಹೋರಾಟ ನಡೆಸಬೇಕು. ಆ ರೀತಿಯಲ್ಲಿ ಅವರನ್ನೆಲ್ಲಾ ನಮ್ಮ ಸಂಘಟನೆಯತ್ತ ಸೆಳೆಯಬೇಕೆಂದೂ ಹೇಳಿದರು.

ಡಿ.ವೆ.ಎಫ್.ಐ. ಒಂದು ವರ್ಗ ಸಂಘಟನೆಯಲ್ಲ. ಅದು ಬಹುವರ್ಗಗಳ ಸಂಘಟನೆಯಾಗಿರುವುದರಿಂದ ನಮ್ಮ ಚಟುವಟಿಕೆಗಳು ನಡೆಯುವಾಗ ಜಾಗತಿಕತೆಯಿಂದ ನಡೆಯಬೇಕೆಂದು ತಿಳಿಸಿದರು.

ಕರ್ನಾಟಕದಲ್ಲಿ ಡಿ.ವೈ.ಎಫ್.ಐ. ಸಂಘಟನೆ ವಿಸ್ತಾರವಾಗಿ ಬೆಳೆಯಬೇಕಾದರೆ ರಾಜ್ಯ ಕೇಂದ್ರ ಬಲಿಷ್ಟವಾಗಿರಬೇಕೆಂದೂ ಅದಕ್ಕೆ ಹಣದ ಅವಶ್ಯಕತೆಯಿದೆ ಎಂದೂ, ಸಿನೆಮಾ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ನಿಧಿ ಸಂಗ್ರಹಿಸಿ ಸಂಘಟನೆ ಬೆಳೆಬೇಕೆಂದೂ ಸೂಚಿಸಿದರು.

1990 ಡಿ.ವೈ.ಎಫ್.ಐ. ಸ್ಥಾಪನೆಯ 10ನೆಯ ವಾರ್ಷಿಕೋತ್ಸವ ನಡೆಸುವ ವರ್ಷ. ನವಂಬರ್ ತಿಂಗಳಲ್ಲಿ ಪಶ್ಚಿಮ ಬಂಗಾಲದಲ್ಲಿ ಈ ಸಂಘಟನೆಯ ನಾಲ್ಕನೆಯ ರಾಷ್ಟ್ರೀಯ ಸಮ್ಮೇಳನ ನಡೆಯುತ್ತದೆ. ಈ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ದೇಶದಲ್ಲಿ ಕಳೆದ 10 ವರ್ಷಗಳಲ್ಲಿ ಡಿ.ವೈ.ಎಫ್.ಐ.ಯ ಧ್ಯೇಯ ಧೋರಣೆಗಳನ್ನೂ, ಚಳುವಳಿ ಹೋರಾಟಗಳನ್ನು ತ್ಯಾಗ ಬಲಿದಾನಗಳ ವೀರಗಾಥೆಗಳನ್ನು ಪ್ರಚಾರ ಮಾಡಿರಿ. ಜಾತೀಯ ಸೌಹಾರ್ದತೆಗಾಗಿ, ರಾಷ್ಟ್ರೀಯ ಐಕ್ಯತೆ ಸಮಗ್ರತೆಗಾಗಿ ನಾವು ನಡೆಸಿದ ಹೋರಾಟಗಳ ಪರಿಚಯವನ್ನು ಸೆಮಿನಾರ, ಮುಂತಾದ ಕಾರ್ಯಕ್ರಮ ಮೂಲಕ ಜನರ ಮಧ್ಯೆ ಕೊಂಡೊಯಿರಿ. 1980 ರಲ್ಲಿ ನಾವು 15,000 ಸದಸ್ಯರಿಂದ ಸಂಘಟನೆ ಪ್ರಾರಂಭಮಾಡಿದ್ದೆವು. ಈ ಹೊತ್ತು 71 ಲಕ್ಷ ಸದಸ್ಯರನ್ನು ಹೊಂದಿದ ಬೃಹತ್ ಸಂಘಟನೆಯಾಗಿ ಬೆಳೆದಿದ್ದೇವೆಂದು ಹೇಳಿದರು.

ಪ್ರಾರಂಭದಲ್ಲಿ ಅವರು ಪೂರ್ವ ಯುರೋಪಿನ ಸಮಾಜವಾದಿ ದೇಶಗಳಲ್ಲಿಯ ಘಟನೆಗಳತ್ತ ಗಮನ ಸೆಳೆಯುತ್ತಾ, ಬಂಡವಾಳಶಾಹಿ ಪ್ರಚಾರ ಮಾಧ್ಯಮಗಳು ಸಮಾಜವಾದಿ ದೇಶ್ಯಗಳ ವಿರುದ್ಧ ಯಾವ ರೀತಿ ಅಪಪ್ರಚಾರ ಮಾಡುತ್ತವೆಂದು ಹೇಳಿ, ಅವುಗಳ ವಿರುದ್ಧ, ನಿಜಪರಿಸ್ಥಿತಿಯನ್ನು ವಿವರಿಸಲು, ಸೆಮಿನಾರ, ಸಿಂಪೋಸಿಯಂಗಳನ್ನು ನಡೆಸಬೇಕೆಂದು ಸೂಚಿಸಿದರು.

ಸಿ.ಐ.ಟಿ.ಯು. ಕೇಂದ್ರ ಕಛೇರಿಯ ದೂರವಾಣಿ ಸಂಖ್ಯೆಯಲ್ಲಿ ಬದಲಾವಣೆ

ಸಿ.ಐ.ಟಿ.ಯು. ಕೇಂದ್ರ ಕಚೇರಿಯ ದೂರವಾಣಿ ನಂಬರು ಮಾರ್ಚ್ 9 ರಿಂದ 3714071. ಈ ಬದಲಾವಣೆಯನ್ನು ಗಮನಿಸಬೇಕೆಂದು ಸಿ.ಐ.ಟಿ.ಯು. ತಿಳಿಸಿದೆ.

... ಒಂದು ಕಿರು ನೋಟ

ಪುಟ 2 ರಿಂದ

ಸಮಾಜವಾದಿ ಶಕ್ತಿಗಳು, ಶಾಂತಿ ಪ್ರಿಯ ಶಕ್ತಿಗಳು, ವಿಶಾಲ ಜನ ಸಮುದಾಯಗಳ ಹಿತಗಳನ್ನು ಪ್ರತಿಪಾದಿಸಿದ ಪ್ರಜಾಸತ್ತಾತ್ಮಕ ಶಕ್ತಿಗಳು ಕೆಲವೇ ಜನರ ಪ್ರಬಲ ಸಮುದಾಯದ ಹಿತಗಳನ್ನು ಪ್ರತಿಪಾದಿಸುವ ಅಲ್ಪ ಸಂಖ್ಯಾತರ ಪ್ರಜಾಸತ್ತೆ" ಜಯಪ್ರದವಾಗಬಹುದು.

ಒಂದೆಡೆ ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿ ಶಕ್ತಿಗಳು ತಮ್ಮ ಕ್ರಮಗಳಿಂದ ಲಾಭ ಪಡೆದು ಎಣಿಸಲಾಗದ ಮುನ್ನಡೆಯನ್ನು ಸಮಾಜವಾದಿ ಮತ್ತು ಕಾರ್ಮಿಕ ವರ್ಗದ ಶಕ್ತಿಗಳು ಸಾಧಿಸಿದರೆ, ಇನ್ನೊಂದೆಡೆ ಸಮಾಜವಾದಿ ಶಕ್ತಿಗಳ ಮತ್ತು ಕಾರ್ಮಿಕ ವರ್ಗದ ಶಕ್ತಿಗಳ ತಪ್ಪು ಕ್ರಮಗಳಿಂದ ಲಾಭ ಪಡೆದು ಎಣಿಸಲಾಗದ ಮುನ್ನಡೆಯನ್ನು ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿ ಶಕ್ತಿಗಳು ಪಡೆಯಬಹುದು.

ಇತ್ತೀಚೆಗೆ ಪೂರ್ವ ಯೂರೋಪ್ ರಾಷ್ಟ್ರಗಳ ಸಮಾಜವಾದಿ ರಾಷ್ಟ್ರಗಳಲ್ಲಿ ನಡೆಯುತ್ತಾ ಬಂದ ಹಾಗೂ ಬರುತ್ತಿರುವ ಕೆಲವೊಂದು ಘಟನೆಗಳು, ಬೆಳವಣಿಗೆಗಳು ಜಾಗತಿಕ ಸಮಾಜವಾದಿ ಮತ್ತು ಕಾರ್ಮಿಕ ವರ್ಗದ ಶಕ್ತಿಗಳ ಈ ತರದ ಹಿನ್ನಡೆ ಎಂದು ನಾವು ಭಾವಿಸುತ್ತೇವೆ.

ಈ ಹಿನ್ನಡೆಯಲ್ಲಿ ಪೋಲೆಂಡ್ ಮತ್ತು ಹಂಗರಿಯಲ್ಲಿ ಪ್ರತಿಕ್ರಾಂತಿ ಶಕ್ತಿಗಳಿಗೆ ಅಂದರೆ, ಸಾಮ್ರಾಜ್ಯಶಾಹಿ ಮತ್ತು ಬಂಡವಾಳ ಶಕ್ತಿಗಳಿಗೆ, ಕಳೆದ 15 ವರ್ಷಗಳಿಂದ ನಡೆಯುತ್ತಾ ಬಂದ ಸತತ ಯುದ್ಧದಲ್ಲಿ ಅವರಿಗೆ ಸಿಕ್ಕಿದ ತಾತ್ಕಾಲಿಕ ವಿಜಯವೆಂದು ನಾವು ಪರಿಗಣಿಸುತ್ತೇವೆ. ಉಳಿದೆಡೆ ಪ್ರತಿಕ್ರಾಂತಿಕಾರಿ ಶಕ್ತಿಗಳಿಗೆ ವಿಪುಲ ಅವಕಾಶ ದೊರಕಿದೆಯೆಂದು ಪರಿಗಣಿಸುತ್ತೇವೆ.

ಈ ಹಿನ್ನಡೆಯಿಂದ "ಸಮಾಜವಾದದ ಅವಸಾನ ಸಮೀಪಿಸಿದೆ" ಎಂದಾಗಲಿ "ಮಾರ್ಕ್ಸ್‌ವಾದ-ಲೆನಿನ್‌ವಾದ ಕಾಲಾತೀತವಾಗಿದೆ" ಎಂದಾಗಲಿ ತೀರ್ಮಾನಕ್ಕೆ ಬರುವುದು ಸರಿಯಾಗದು (ಬಂಡವಾಳಶಾಹಿ- ಸಾಮ್ರಾಜ್ಯವಾದಿ ದೃಷ್ಟಿಕೋನವುಳ್ಳವರು ಹಾಗೆನೇ ಅದನ್ನು ವ್ಯಾಖ್ಯಾನಿಸುವುದು ಸ್ವಾಭಾವಿಕ) ಈ ಹಿನ್ನಡೆಗೆ ಆ ರಾಷ್ಟ್ರಗಳ ಆಡಳಿತ ಮಾಡುತ್ತಿರುವ ಕಮ್ಯುನಿಸ್ಟ್ ಪಕ್ಷಗಳು ತಮ್ಮ ದೇಶಗಳಲ್ಲಿರುವ ವಿಶಿಷ್ಟ ಮತ್ತು ನಿರ್ದಿಷ್ಟ ಪರಿಸ್ಥಿತಿಗಳಿಗೆ ಈ ಮಾರ್ಕ್ಸ್‌ವಾದ ಲೆನಿನ್‌ವಾದವನ್ನು ಅನ್ವಯಿಸುವುದರಲ್ಲಿ ಕೆಲವೊಂದು ಧೋರಣೆಗಳನ್ನು ಕೈಗೊಳ್ಳುವುದರಲ್ಲಿ ತಪ್ಪಿದುದೇ ಕಾರಣವಾಗಿದೆ ಎಂಬುದು ನಮ್ಮ ಅಭಿಮತ. ಅವರಲ್ಲಿ ಎದ್ದು ಬಂದ ವ್ಯಕ್ತಿಗತ ಪ್ರತಿಷ್ಠೆಯು ಇದಕ್ಕೆ ಕಾರಣವಾಗಿದೆ. ಖಂಡಿತವಾಗಿ ಇಂದಲ್ಲ ನಾಳೆ, ಈ ರಾಷ್ಟ್ರಗಳ ದುಡಿಯುವ ಜನವಿಭಾಗಗಳು ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಸಹಾಯದಿಂದ ತಮ್ಮ ತಪ್ಪುಗಳನ್ನು ತಿದ್ದಿಕೊಂಡು ಪ್ರಬಲ ಸಮಾಜವಾದಿ ರಾಷ್ಟ್ರಗಳಾಗಿ ಮುನ್ನಡೆಯುವರು ಎಂಬ ವಿಶ್ವಾಸ ನಮಗಿದೆ.

ಡಿ.ವೈ.ಎಫ್.ಐ ಅಧ್ಯಯನ ಶಿಬಿರ

ಕಾಸರಗೋಡಿನಲ್ಲಿ ಕನ್ನಡ ಮಾತಾನಾಡುವ ಡಿವೈಎಫ್‌ಐ ಕಾರ್ಯಕರ್ತರಿಗೆ ಅಧ್ಯಯನ ಶಿಬಿರ ಏರ್ಪಡಿಸಲಾಗಿತ್ತು. ಕಾಸರಗೋಡು ಕ್ಷೇತ್ರದ ಲೋಕಸಭಾ ಸದಸ್ಯರಾದ ಕಾಂ. ರಾಮಣ್ಣರೈರವರು ಅಧ್ಯಯನ ಶಿಬಿರವನ್ನು ಉದ್ಘಾಟಿಸಿದರು. ಪಕ್ಷದ ಕರ್ನಾಟಕ ರಾಜ್ಯ ಸಮಿತಿ ಸದಸ್ಯರಾದ ಕಾಂ. ಎಸ್.ಆರ್. ಆರಾಧ್ಯ ಪ್ರಸ್ತುತ ರಾಜಕೀಯ ಪರಿಸ್ಥಿತಿ ಬಗ್ಗೆ ಮಾತನಾಡಿದರು. ಕೇರಳ ಡಿವೈಎಫ್‌ಐ ಕಾರ್ಯದರ್ಶಿಯವರಾದ ಸತೀಶ್‌ಚಂದ್ರನ್ ಹಾಗೂ ಕಾಂ. ವರ್ಗೀಸ್‌ರವರೂ ಸ... ಶಿಬಿರದಲ್ಲಿ ಭಾಗವಹಿಸಿದರು. ಸಂ... ನಡೆದ ಬಹಿರಂಗ ಸಭೆಯನ್ನುದ್ದೇಶಿ... ಮಂಜೇಶ್ವರ ಪ್ರದೇಶ ಸಿಪಿಐ(ಎಂ) ಕಾರ್ಯದರ್ಶಿ ರಾಮಯ್ಯ ಶೆಟ್ಟಿ, ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಜಯರಾಜನ್ ಹಾಗೂ ಎಸ್.ಆರ್. ಆರಾಧ್ಯ, ಮಾತನಾಡಿ ಹರಿಪ್ಪಾಡ್ ಉ... ಚುನಾವಣೆಯಲ್ಲಿ ಎಲ್.ಡಿ.ಎಫ್ ಅಭ್ಯರ್ಥಿಯನ್ನು ಗೆಲ್ಲಿಸುವುದರ... ಜನತೆಯನ್ನು ಅಭಿನಂದಿಸಿದರು

ನಿಕರಾಗುವಾದ ಚುನಾವಣಾ ಫಲಿತಾಂಶ

ನಿಕರಾಗುವಾದ ಅಧ್ಯಕ್ಷೀಯ ಚುನಾವಣೆಯಲ್ಲಿ ಡೇನಿಯಲ್ ಒರ್ಟೆಗಾರವರ ಅನಿರೀಕ್ಷಿತ ಸೋಲು ನಮ್ಮ ದೇಶದ ಪ್ರಗತಿಪರ ಶಕ್ತಿಗಳಿಗೆ ಆಘಾತ ತಂದಿರುವ ಸುದ್ದಿ. ಬೂರ್ಜ್ವಾ ಪತ್ರಿಕೆಗಳಿಗೆ ಕೂಡಾ. ಅಮೆರಿಕಾ ಬಹಿರಂಗವಾಗಿಯೇ 40 ಲಕ್ಷ ಡಾಲರುಗಳನ್ನು ವಿರೋಧಿ ಅಭ್ಯರ್ಥಿಗೆ ಶ್ರೀಮತಿ ಚಮೋರೋನ್‌ಗೆ ಈ ಚುನಾವಣೆಯಲ್ಲಿ 'ಬೆಂಬಲವಿದ್ದರೂ ಆಕೆ ಗೆಲ್ಲಬಹುದೆಂಬ ನಿರೀಕ್ಷೆಯಿರಲಿಲ್ಲ.

ವಿಶ್ವದಲ್ಲಿ ಪ್ರಜಾಸತ್ತೆ ಹೇಗಿರಬೇಕೆಂದು ಪಾಠ ಹೇಳುವ ಅಧಿಕಾರವನ್ನು ತಾವೇ ಆರೋಪಿಸಿಕೊಂಡಿರುವ ಅಮೆರಿಕನ್ ಆಳುವ ವಲಯಗಳು ತಮ್ಮ 'ಹಿತ್ತಲ'ಲ್ಲಿ ಮುಳ್ಳಾಗಿದ್ದ, ಕಾಂಟ್ರಾಗಳ ಮೂಲಕ ಸೋಲಿಸಲಾಗದ ನಿಕರಾಗುವಾದ ಸ್ಯಾಂಡಿನಿಸ್ಟ್ ಸರಕಾರವನ್ನು "ಮುಕ್ತ" ಚುನಾವಣೆಯಲ್ಲಿ ಸೋಲಿಸಲು ನಡೆಸಿದ ಪ್ರಯತ್ನ ಕೇವಲ ಮೇಲೆ ಹೇಳಿದ ನಲ್ವತ್ತು ಲಕ್ಷ ಡಾಲರುಗಳಷ್ಟೇ ಅಲ್ಲ.

ಅಮೆರಿಕನ್ ಸಲಹೆಗಾರರು, ಸಂಘಟಕರು, ಚುನಾವಣಾ ಪ್ರಚಾರ ತಜ್ಞರು ತಂಡ-ತಂಡವಾಗಿ ನಿಕರಾಗುವಾದ ವಿರೋಧಿ ಅಭ್ಯರ್ಥಿಯ ನೆರವಿಗೆ ಧಾವಿಸಿ ಬಂದರು. ಅಮೆರಿಕನ್ ಸಂಪತ್ತು 1.25 ಕೋಟಿ ಡಾಲರುಗಳನ್ನು ನಿಕರಾಗುವಾದ ವಿರೋಧಿಗಳಿಗೆ 1989-90 ರಲ್ಲಿ ನೀಡಿತು. ಇದು ನೇರವಾಗಿ ಕಂಡ 'ಪ್ರಜಾಸತ್ತೆಗೆ ಬೆಂಬಲ'ವಾಗಿದ್ದರೆ, ಅದೃಶ್ಯ ಬೆಂಬಲ ಮುಖ್ಯವಾಗಿ ಸಿ.ಐ.ಎ. ಮತ್ತಿತರ ಅಮೆರಿಕನ್ ಆಳುವ ವಲಯಗಳ ಗುಪ್ತ ಸಂಸ್ಥೆಗಳ ಮೂಲಕ ಎಷ್ಟಿತ್ತೆಂಬುದನ್ನು 'ಗಾರ್ಡಿಯನ್' ಪತ್ರಿಕೆ ಫ್ರೆಬ್ರವರಿ 21 ರ ತನ್ನ ಸಂಚಿಕೆಯಲ್ಲಿ ಪಟ್ಟಿ ಮಾಡಿತ್ತು. ಇದು ಚುನಾವಣೆ ನಡೆಯುವ ನಾಲ್ಕು ದಿನಗಳ ಮೊದಲೇ ಎಂಬುದನ್ನು ಗಮನಿಸಬೇಕು.

ಜುಲೈ 19, 1979. ಸರ್ವಾಧಿಕಾರಿ ಸೊಮೋಜನ ಆಳ್ವಿಕೆಯನ್ನು ಕಿತ್ತೆಸೆದ ನಂತರ ನಡೆದ ಬೃಹತ್ ಸಭೆ.



ಸಿ.ಐ.ಎ. 1989 ರಲ್ಲಿ ಐವತ್ತು ಲಕ್ಷ ಡಾಲರುಗಳನ್ನು ನೀಡಿತು. ನಂತರವೂ 1 ಕೋಟಿ ಡಾಲರುಗಳನ್ನು ಸಿದ್ಧವಾಗಿಟ್ಟು ಕೊಂಡಿತ್ತು.

ಅಮೇರಿಕಾದ "ಪ್ರಜಾಸತ್ತೆಗೆ ರಾಷ್ಟ್ರೀಯ ಉಂಬಳಿ" ಎಂಬ ಸಂಸ್ಥೆ ನಿಕರಾಗುವಾದ ಸ್ಯಾಂಡಿನಿಸ್ಟ್ - ವಿರೋಧಿ ರಾಜಕೀಯ ಪಕ್ಷಗಳಿಗೆ, ವಾರ್ತ ಮಾಧ್ಯಮಗಳಿಗೆ, ಕಾರ್ಮಿಕ ಸಂಘಗಳಿಗೆ, ವ್ಯಾಪಾರಿ, ಯುವಜನ ಮಹಿಳೆಯರಿಗೆ "ರಾಜಕೀಯ ಸಂಘಟನೆ"ಯ ಅ.ಆ.ಇ.ಈ ಕಲಿಸಲು 'ಸ್ವಯಂ ಸೇವಕ'ರನ್ನು ಕಳಿಸಿತು. ಇದು ಅತ್ಯಗತ್ಯವಾಗಿತ್ತು. ಏಕೆಂದರೆ ನಿಕರಾಗುವಾದ ವಿರೋಧ ಪಕ್ಷಗಳಿಗೆ ಇದು ಗೊತ್ತೇ ಇರಲಿಲ್ಲ. ಕಾಂಟ್ರಾಗಳ ವಿಜಯ ಅಥವಾ ಅಮೆರಿಕನ್ ಆಕ್ರಮಣ ತಮ್ಮನ್ನು ಕೆನಡಾ, ಚಿಲಿ, ಪನಾಮಾಗಳಂತೆ ಅಧಿಕಾರಕ್ಕೆ ತರಬಹುದೆಂದು ಅವರು ಆರಾಮವಾಗಿದ್ದರು ಎಂದು 'ಗಾರ್ಡಿಯನ್' ಪತ್ರಿಕೆ ಹೇಳಿದೆ.

ಸ್ಯಾಂಡಿನಿಸ್ಟ್ ಪಕ್ಷ 1979 ರಲ್ಲಿ ಸೊಮೋಝ ಸರ್ವಾಧಿಕಾರವನ್ನು ಕಿತ್ತೊಗೆದು ನಿಕರಾಗುವನ್ನರಿಗೆ ಹೊಸ ಬಾಳು ಆರಂಭಿಸಲು ಅವಕಾಶ ತಂದಿತ್ತು. ಮಧ್ಯ ಅಮೆರಿಕಾದ ಎಲ್ಲಾ ದೇಶಗಳಂತೆ ನಿಕರಾಗುವಾ ಕೂಡಾ ಅಮೆರಿಕನ್ ಬಹುರಾಷ್ಟ್ರೀಯ ಹಣ್ಣು ಕಂಪೆನಿಗಳ "ಬಾಳೆಹಣ್ಣು" ದೇಶಗಳಾಗಿದ್ದವು (Banana republics). ಸೊಮೋಝ ಅಮೆರಿಕನ್ ನೌಕಾ ಸೇನೆಯಲ್ಲಿ ತರ್ಜುಮೆಗಾರನಾಗಿದ್ದಾತ. ನಿಕರಾಗುವಾದ ಶೋಷಿತ ಜನರ ಸಿಟ್ಟಿನಿಂದ ಅಮೆರಿಕನ್ ಹಿತಾಸಕ್ತಿ ಕಾಪಾಡಲು ರಚಿಸಿದ 'ನ್ಯಾಶನಲ್ ಗಾರ್ಡ್' ನ ಅಮೆರಿಕನ್ ಆಳರಸರು ಸೋಮೋಝಾನನ್ನು ಮುಖ್ಯಸ್ಥನನ್ನಾಗಿ ನೇಮಿಸಿದರು. ಆ ಮೂಲಕ ಸುಮಾರು 50 ವರ್ಷ ನಿಕರಾಗುವಾನ್ನರ ಬಾಳಿನ ಮೇಲೆ ಸವಾರಿ ಮಾಡಿದಾತ ಈ ಸರ್ವಾಧಿಕಾರಿ. ಆಗ ತಮ್ಮ ಹಿತಾಸಕ್ತಿ ಕಾಪಾಡಲು ಈ ಸರ್ವಾಧಿಕಾರಿ. ಸರ್ವೋತ್ತಮ ಎಂದು ಬಗೆದಿದ್ದ ಅಮೆರಿಕನ್ ಆಳುವ ವಲಯಗಳು ಈಗ 'ಪ್ರಜಾಪ್ರಭುತ್ವವಾದಿ' ಚಮೋರೋ ಆ ಪಾತ್ರವಹಿಸಬಹುದೆಂದು ನಿರೀಕ್ಷಿಸುತ್ತಿರಬಹುದು. ನಿಕರಾಗುವಾದ ಜನಸಾಮಾನ್ಯರ ನಿರೀಕ್ಷೆಯೇನು ಎಂದು ಕಾದು ನೋಡೋಣ.

ಡಿಸೆಂಬರ್‌ನಲ್ಲಿ ಎ.ಎನ್.ಸಿ. ಸಮ್ಮೇಳನ

ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್ 1960 ರಲ್ಲಿ ನಿಷೇಧಿಸಲ್ಪಟ್ಟಿತ್ತು. ಅನಂತರ ಅದು ದಕ್ಷಿಣ ಆಫ್ರಿಕಾದ ಹೊರಗಿನಿಂದ ತನ್ನ ಚಟುವಟಿಕೆ ನಡೆಸಬೇಕಾಗಿ ಬಂತು. ಸುಮಾರು 3 ದಶಕಗಳ ನಂತರ ನಿಷೇಧ ತೆಗೆಯಲಾಗಿದೆ. ಆದ್ದರಿಂದ ಇದೇ ಡಿಸೆಂಬರ್ 16 ರಂದು ದಕ್ಷಿಣ ಆಫ್ರಿಕಾದ ನೆಲದಲ್ಲಿ ಪ್ರಥಮ ಸಮ್ಮೇಳನ ನಡೆಸಲು ಈಗ ಎ.ಎನ್.ಸಿ. ನಿರ್ಧರಿಸಿದೆ. ಡಿಸೆಂಬರ್ 16, ದಕ್ಷಿಣ ಆಫ್ರಿಕಾದಲ್ಲಿ 'ವೀರರ ದಿನ' ವರ್ಣದ್ವೇಷಿಗಳ ಗುಂಡುಗಳಿಗೆ ಬಲಿಯಾದ, ನೇಣ್ಗೇರಿದ ವೀರರನ್ನು ನೆನಪಿಸಿಕೊಳ್ಳುವ ದಿನ. ಎ.ಎನ್.ಸಿ.ಯ ವಿಮೋಚನಾ ಸೇನೆ 'ಉಮ್ ಖೊಂಡೋ ವಿ ಸಿಜ್ವೆ' ಕೂಡಾ ಡಿಸೆಂಬರ್ 16, 1960 ರಲ್ಲಿ ಸ್ಥಾಪಿಸಲ್ಪಟ್ಟಿತು.

"ಶ್ರೀಲಂಕಾ ಸರ್ಕಾರ ಜವಾಬ್ದಾರಿ ನಿರ್ವಹಿಸುತ್ತಿಲ್ಲ"

ವಾಯುವ್ಯ ಪ್ರಾಂತೀಯ ಮಂಡಳಿಯ ಸದಸ್ಯ ಎಂ.ವೈ.ಎಂ. ಮನ್ಸೂರ್‌ರವರ ಕೊಲೆ, ಜತೆಗೆ ಈ ಪ್ರಾಂತದ ಮುಸ್ಲಿಂ ಮತ್ತಿತರ ಕೋಮುಗಳ ಜನರಿಗೆ ಕಿರುಕುಳ ಶ್ರೀಲಂಕಾದ ಯು.ಎನ್.ಪಿ. ಸರಕಾರ ಈ ಪ್ರಾಂತದ ನಾಗರೀಕರ ಜೀವರಕ್ಷಣೆಯ ತನ್ನ ಪ್ರಾಥಮಿಕ ಜವಾಬ್ದಾರಿಯನ್ನು ಕೂಡಾ ನಿರ್ಲಕ್ಷಿಸುತ್ತಿದೆ ಎಂಬುದನ್ನು ತೋರಿಸಿಕೊಡುತ್ತಿದೆ. ಈ ಪ್ರದೇಶದ ಮುಸ್ಲಿಂ ಜನತೆ ಮಾತ್ರವಲ್ಲ, ಸಿಂಹಳೀ, ತಮಿಳು ಜನತೆ ಕೂಡಾ ಎಲ್.ಟಿ.ಟಿ.ಇ. ಭಯೋತ್ಪಾದನೆ ಮತ್ತು ಕಿರುಕುಳದಿಂದಾಗಿ ಊರು ಬಿಟ್ಟೋಡುತ್ತಿದ್ದಾರೆ. ಎಲ್.ಟಿ.ಟಿ.ಇ. ಯೊಂದಿಗೆ ಪರೋಕ್ಷವಾಗಿ ಕೈ ಮಿಲಾಯಿಸಿ ರಾಜಕೀಯ ದುರ್ಲಾಭ ಪಡೆಯಲು ಯು.ಎನ್.ಪಿ. ಸರಕಾರ ಪ್ರಯತ್ನಿಸುತ್ತಿದೆ. ಶ್ರೀ ಲಂಕಾದಲ್ಲಿ ಸರಕಾರವೆಂಬುದಿದೆಯೋ ಎಂಬ ಸಂಶಯ ಇದರಿಂದ ಬರುವಂತಾಗಿದೆ ಎಂದು ಶ್ರೀಲಂಕಾದ ಸಂಯುಕ್ತ ಸಮಾಜವಾದಿ ಮಿತ್ರಕೂಟ ಹೇಳಿಕೆಯೊಂದರಲ್ಲಿ ತಿಳಿಸಿದೆ.

ದೇಶ - ವಿದೇಶ

ರಾಷ್ಟ್ರೀಯ ಐಕ್ಯತೆಗಾಗಿ ಸೈಕಲ್ ಪಯಣ

ತಮಿಳುನಾಡಿನ ನೀಲಗಿರಿ ಜಿಲ್ಲೆಯ ಡಿ.ವೈ.ಎಫ್.ಐ. ಕಾರ್ಯದರ್ಶಿ, 27 ವರ್ಷದ ಎನ್.ಸುಕುಮಾರನ್ ದೇಶದ ತುಂಬೆಲ್ಲಾ ಜಾಗತಿಕ ಶಾಂತಿ, ನ್ಯೂಕ್ಲಿಯರ್ ನಿಶ್ಶಸ್ತ್ರೀಕರಣ, ಕೋಮು ಸೌಹಾರ್ದ, ರಾಷ್ಟ್ರೀಯ ಸಮಗ್ರತೆಯ ಸಂದೇಶ ಸಾರುತ್ತಾ ಸಾಗಿದ್ದಾರೆ, ಸೈಕಲ್ ಮೇಲೆ. ಕಳೆದ ಸ್ವಾತಂತ್ರ್ಯದಿನದಂದು ತಮಿಳುನಾಡಿನ ಕೋಟಗಿರಿಯಿಂದ ಆರಂಭಿಸಿದ ಇವರು ಈಗಾಗಲೇ ತಮಿಳುನಾಡು, ಕೇರಳ, ಕರ್ನಾಟಕ, ಗೋವಾ, ಮಹಾರಾಷ್ಟ್ರ, ರಾಜಸ್ತಾನ, ಹರ್‍ಯಾಣದ ಮೂಲಕ 900 ಕಿ.ಮಿ/ ಪಯಣ ಸಾಗಿಸಿ ದೆಹಲಿಯನ್ನೂ ದಾಟಿದ್ದಾರೆ. ಇನ್ನು ಮುಂದೆ ಪಂಜಾಬ್, ಕಾಶ್ಮೀರ್, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ, ನೇಪಾಳ, ಸಿಕ್ಕಿಂ, ಭೂತಾನ್, ವಾಯುವ್ಯದ ರಾಜ್ಯಗಳು, ಪಶ್ಚಿಮ ಬಂಗಾಳ, ಬಿಹಾರ, ಒರಿಸ್ಸಾ, ಮಧ್ಯಪ್ರದೇಶ, ಆಂಧ್ರಪ್ರದೇಶದ ಮೂಲಕ ಈ ವರ್ಷ ಸ್ವಾತಂತ್ರ್ಯದಿನದಂದು ಉದಕಮಂಡಲಕ್ಕೆ ಮರಳುವ ಯೋಜನೆ ಹಾಕಿಕೊಂಡಿದ್ದಾರೆ. ಮುಂಬೈಯಲ್ಲಿ ಸಿ.ಪಿ.ಐ.(ಎಂ) ಸಂಗಾತಿಗಳೂ ಅವರಿಗೆ ಈ ಸಾಹಸದಲ್ಲಿ ಆರ್ಥಿಕ ನೆರವು ನೀಡಿದ್ದಾರೆ.

ಜನವಾದಿ ಮಹಿಳಾ ಸಮಿತಿ ಮುಖಂಡರ ಮೇಲೆಹಲ್ಲೆ

ದೆಹಲಿಯ ಜನವಾದಿ ಮಹಿಳಾ ಸಮಿತಿಯ ಉಪಾಧ್ಯಕ್ಷೆ ಶ್ಯಾಮ್ ಕಲಿ ಅವರು ದೆಹಲಿ ಮಹಿಳಾ ಆಂದೋಲನದಲ್ಲಿ ಚಿರಪರಿಚಿತ ಮುಖ. ಇಂತಹವರ ಮೇಲೂ ಗೂಂಡಾಗಳು ಫೆಬ್ರವರಿ 20ರಂದು ತೀವ್ರ ಹಲ್ಲೆ ಮಾಡಿದ್ದಾರೆ. ಅವರ ಕಣ್ಣಿಗೆ ತೀವ್ರಗಾಯವಾಗಿ ಅದರ ಶಸ್ತ್ರಚಿಕಿತ್ಸೆ ಮಾಡಬೇಕಾಗಿ ಬಂತು. ದೆಹಲಿಯಾದ್ಯಂತ ಇದಕ್ಕೆ ತೀವ್ರಪ್ರತಿಭಟನೆ ವ್ಯಕ್ತವಾಗಿದೆ.

ಹೈದರಾಬಾದಿನಲ್ಲಿ ಬೃಹತ್‌ಕಿಸಾನ್ ರ್‍ಯಾಲಿ

ಫೆಬ್ರವರಿ 14 ಹೈದರಾಬಾದಿನ ಸಚಿವಾಲಯದ ಎದುರು ಸುತ್ತಲಿನ ಜಿಲ್ಲೆಗಳಿಂದ ಬಂದ 15 ಸಾವಿರ ರೈತರು ವಿದ್ಯುಚ್ಛಕ್ತಿ ವಿತರಣೆಯಲ್ಲಿ ಭೇದವನ್ನು ನಿರ್ಲಕ್ಷಿಸಿ ಕೈಗಾರಿಕೆಗೆ ಹೆಚ್ಚು ಪ್ರಾಶಸ್ತ್ಯ ನೀಡುವುದನ್ನು, ನೀರಿನ ಸೆಸ್ ಹೆಚ್ಚಳವನ್ನು ವಿರೋಧಿಸಿ ಬೃಹತ್ ರ್‍ಯಾಲಿ ನಡೆಸಿದರು. ಎರಡೂ ರೈತ ಸಂಘಗಳ ಕಾರ್ಯಕರ್ತರು ಹಿಡಿದಿದ್ದ ಬಾವುಟ, ಪತಾಕೆಗಳ ಕೆಂಪು ರ್‍ಯಾಲಿಯಲ್ಲೆಲ್ಲಾ ಎದ್ದುಕಾಣುತ್ತಿತ್ತು. ತೆಲುಗುದೇಶಂ ಪಕ್ಷದ ಮುಖಂಡರು, ಸಿ.ಪಿ.ಐ., ಸಿ.ಪಿ.ಐ.(ಎಂ) ಮುಖಂಡರು ಈ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು.

ಪ. ಬಂಗಾಳ ಕಾಂಗ್ರೆ ಮುಖಂಡರಿಗೆ ಮಂಗಳಾರತಿ

"ಆಯೋಗ ನವಂಬರ್ ಚುನಾವಣೆಗಳಲ್ಲಿ ನಿಮ್ಮ ಸರ್ಕಾರ ಹಾಗೂ ವಿವಿಧ ಹಂತಗಳಲ್ಲಿ ನಿಮ್ಮ ಸಿಬ್ಬಂದಿ ನೀಡಿದ ಸಹಕಾರ, ನೆರವಿಗೆ ಕೃತಜ್ಞತೆ ವ್ಯಕ್ತಪಡಿಸಬಯಸುತ್ತೇನೆ. ಆದಾಗಲೇ ಬಹಳ ಹೊರೆಯಿದ್ದ ಆಡಳಿತದಿಂದ ಚುನಾವಣಾ ಆಯೋಗ ಬಹಳಷ್ಟು ಬಯಸಿತ್ತು. ಅವನ್ನೆಲ್ಲಾ ಅತ್ಯುತ್ತಮವಾಗಿ ಪೂರೈಸಲು ಉತ್ಸಾಹದಿಂದ, ಚೈತನ್ಯದಿಂದ ಸರ್ವಪ್ರಯತ್ನ ಮಾಡಿದ್ದೀರಿ". ಇದು ಮುಖ್ಯ ಚುನಾವಣಾ ಆಯುಕ್ತರು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸು ರವರಿಗೆ ಬರೆದ ಪತ್ರದ ಒಂದು ಅಂಶ. ಮುಖ್ಯ ಕಾರ್ಯದರ್ಶಿ, ಡಿ.ಜಿ.ಪಿ. ಹಾಗೂ ಐ.ಜಿ.ಪಿ. ಗಳನ್ನೂ 'ಮುಕ್ತ' ಚುನಾವಣೆಗೆ ಅಗತ್ಯವಾದ ವಾತಾವರಣ ಕಾದುಕೊಳ್ಳಲು ಸಕಲ ಪ್ರಯತ್ನಮಾಡಿದ್ದಕ್ಕಾಗಿ ಅಭಿನಂದಿಸಿದ್ದಾರೆ.

ಜನವರಿ 29ರಂದ ಶ್ರೀ ಆರ್.ವಿ.ಎಸ್. ಪೆರಿಶಾಸ್ತ್ರಿಯವರು ಜ್ಯೋತಿ ಬಸುರವರಿಗೆ ಬರೆದ ಪತ್ರದಲ್ಲಿ ಈ ಕೃತಜ್ಞತೆ ಸಲ್ಲಿಸಿದ್ದಾರೆ.

ಕಾಂಗ್ರೆಸ್(ಐ) ಮುಂದಾಳುಗಳು ದೇಶದಲ್ಲೆಲ್ಲಾ ಅಧಿಕಾರಿದಲ್ಲಿರುವವರು ಸೋಲುವಾಗ ಪಶ್ಚಿಮಬಂಗಾಳದಲ್ಲಿ ಗೆಲ್ಲಲು ಹೇಗೆ ಸಾಧ್ಯ ಕೇವಲ ಚುನಾವಣಾ ಮೋಸದಿಂದ, ಕಾನೂನು ವ್ಯವಸ್ಥೆ ಹದಗೆಡಿಸಿದ್ದರಿಂದ ಇತ್ಯಾದಿಯಾಗಿ ಗಳಹಿದ್ದು ನಮ್ಮ ಓದುಗರಿಗೆ ನೆನಪಿರಬಹುದು. ಅವರ ಏಕಮೇವಾದ್ವಿತೀಯ ಮುಖಂಡ ರಾಜೀವಗಾಂಧಿಯೇ ನೇಮಿಸಿದ ಮುಖ್ಯ ಚುನಾವಣಾ ಆಯುಕ್ತರ ಈ ಅಭಿನಂದನೆ, ಪಶ್ಚಿಮ ಬಂಗಾಳದ ಕಾಂಗ್ರೆ ಮುಖಂಡರ ಮುಖಕ್ಕೆ ಮಂಗಳಾರತಿ ಕೂಡಾ. ಆದರೂ ಪಂಜಾಬಿನಿಂದ ಪೆಟ್ಟುಮೊರೆ ಹಾಕಿ ಹಿಂದಿರುಗಿದ ಪ್ರಜಾಪ್ರಭುತ್ವದ ಆರಂಭದ ಕಟುಕರಲ್ಲೊಬ್ಬರಾದ ಸಿದ್ಧಾರ್ಥ ಶಂಕರ್‌ರಾಯ್ ಕಾನೂನು ವ್ಯವಸ್ಥೆ ಪಂಜಾಬಿಗಿಂತಲೂ ಕೆಟ್ಟದೆಯೆಂದು ಹೇಳಲು ಹೇಸುತ್ತಿಲ್ಲ.

ಕಾಂಗ್ರೆಸ್(ಐ) ನಲ್ಲಿ ಯಾರು, ಎಲ್ಲಿ?

ಎಂಟು ರಾಜ್ಯಗಳ ವಿಧಾನಸಭೆಗಳಿಗೆ ಚುನಾವಣೆ ನಡೆಯುವ ಮೊದಲೇ ಉತ್ತರ ಪ್ರದೇಶ, ಗುಜರಾತ್, ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತಿತರ ರಾಜ್ಯಗಳಲ್ಲಿ ಪ್ರಮುಖ ಕಾಂಗ್ರೆಸ್ಸಿಗರು ಒಬ್ಬೊಬ್ಬರಾಗಿ ಪಕ್ಷ ಬಿಡಲಾರಂಭಿಸಿದ್ದರು.

ಉತ್ತರ ಪ್ರದೇಶದಲ್ಲಿ ಮಾಜಿ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿಯವರ ಇನ್ನೊಬ್ಬ ಮಗ ಸುನಿಲ್ ಶಾಸ್ತ್ರಿ ಕಾಂಗ್ರೆಸ್(ಐ) ಬಿಟ್ಟು ಜನತಾದಳ ಸೇರಿದ್ದಾರೆ. 1988ರ ಅಲಹಾಬಾದ್ ಲೋಕಸಭಾ ಚುನಾವಣೆಯಲ್ಲಿ ವಿ.ಪಿ.ಸಿಂಗ್‌ರ ಎದುರು ನಿಲ್ಲಲು ರಾಜೀವಗಾಂಧಿ ಆರಿಸಿದ್ದ ವ್ಯಕ್ತಿಯವರು.

ನಂತರ ಉತ್ತರ ಪ್ರದೇಶದಲ್ಲಿ ಅಲ್ಪಸಂಖ್ಯಾತ ಕೋಮಿನಿಂದ ಬಂದ ಇಬ್ಬರು ಮುಖಂಡರು ಮೌಲಾನಾ ಒಬೇದುಲ್ಲಾ ಆಜ್ಮಿ ಮತ್ತು ಮೆಹ್ಮೂದ್ ಮದನಿ ಕಾಂಗ್ರೆಸ್ ಬಿಟ್ಟರು.

ಮಹಾರಾಷ್ಟ್ರದಲ್ಲಿ ಇದು ಇನ್ನೂ ದೊಡ್ಡ ಪಟ್ಟಿ. ಮಾಜಿ ಮುಖ್ಯಮಂತ್ರಿ ಭೋಸಲೆ, ಇನ್ನೊಬ್ಬ ಮಾಜಿ ಮುಖ್ಯಮಂತ್ರಿಯ ಪತ್ನಿ, ಹಾಗೂ ಪ್ರಮುಖ ನಾಯಕಿ ಶಾಲಿನಿತಾಯಿ ಪಾಟೀಲ್, ವಿದರ್ಭಾದ ಪ್ರಭಾವೀ ಹರಿಜನ ಮುಖಂಡ ನಾಸಿಕ್‌ರಾವ್ ತಿರ್ಪುಡೆ ಇತ್ಯಾದಿ.

ಮಧ್ಯಪ್ರದೇಶದಲ್ಲಂತೂ ಕಾಂಗ್ರೆಸ್(ಐ) ವಿಘಟನೆ ಚುನಾವಣೆ ಮೊದಲೇ ಆರಂಭವಾಗಿತ್ತು. ಮಾಜಿ ಮಂತ್ರಿಗಳು, ಎಂ.ಎಲ್.ಎ.ಗಳು, ಜಿಲ್ಲಾ ಕಾಂಗ್ರೆ ಪದಾಧಿಕಾರಿಗಳು, ಯುವ ಕಾಂಗ್ರೆಸ್ ಪದಾಧಿಕಾರಿಗಳು ಹೀಗೆ ಹಲವಾರು ಮಂದಿ ಪಕ್ಷ ಬಿಟ್ಟಿದ್ದಾರೆ. ಮಾಜಿ ಸ್ಪೀಕರ್ ಗುಲ್ಶನ್ ಅಹ್ಮದ್, ಯುವ ಕಾಂಗ್ರೆಸ್(ಐ) ರಾಜ್ಯ ಉಪಾಧ್ಯಕ್ಷ ಆರಿಫ್ ಗಿಲ್, ಮಾಜಿ ಮಂತ್ರಿಗಳಾದ ರಾಮ್‌ಕಿಶೋರ್ ಶುಕ್ಲ, ತೇಜ್‌ಲಾಲ್ ತೇಂಬ್ರೆ ಪಕ್ಷ ತ್ಯಜಿಸಿದ ಪ್ರಮುಖರು.

ಕಾಂಗ್ರೆಸ್ ಭದ್ರಕೋಟೆಯಂತಿದ್ದ ಗುಜರಾತ್ ಕೂಡಾ ಕಾಂಗ್ರೆ ಕೈಬಿಟ್ಟಿದೆ. ಇಡೀ ಸೌರಾಷ್ಟ್ರ ಪ್ರದೇಶದಲ್ಲಿ ಕಾಂಗ್ರೆಸ್(ಐ)ನಿಂದ ಹಿಂಡುಹಿಂಡಾಗಿ ಜನತಾದಳದತ್ತ ಸಾಗಿದರು.

ಬಿಹಾರದಲ್ಲಿ ಮಾಜಿ ಮುಖ್ಯಮಂತ್ರಿ ಅಬ್ದುಲ್ ಗಫೂರ್ ಕಾಂಗ್ರೆಸ್(ಐ)ಗೆ ರಾಜೀನಾಮೆ ನೀಡಿದರು.


ಪಶ್ಚಿಮ ಬಂಗಾಳದಲ್ಲಿ ಘನಿಖಾನ್ ಚೌಧುರಿ ಪಂಜಾಬ್ ಕುಖ್ಯಾತಿಯ ಸಿದ್ಧಾರ್ಥ ಶಂಕರ್‌ರಾಯ್‌ರ ಚಲನ ವಲನಗಳನ್ನು ಸಂಶಯದಿಂದ ವೀಕ್ಷಿಸುತ್ತಿದ್ದಾರೆ.

ಮಹಾರಾಷ್ಟ್ರದಲ್ಲಿ, ಕಷ್ಟದಿಂದ ತಲೆ ಎತ್ತಿ ನಿಂತಿರುವ ಸೋಲಿಡದೆಗಳಲ್ಲೆಲ್ಲಾ ಮಣ್ಣು ಮುಕ್ಕಿರುವ ಕಾಂಗ್ರೆಸ್(ಐ)ನ ಗತಿ ಮುಂದೇನು? ಕಾದು ನೋಡೋಣ.

ಸ್ಪಷ್ಟ ದಿಕ್ಕು ಅಗತ್ಯ....

ಪುಟ 1 ರಿಂದ

ಹೀಗೆ ಹೇಳಿ ಅವರು ಯಾರನ್ನು ತಪ್ಪು ದಾರಿಗೆಳೆಯಲು ಪ್ರಯತ್ನಿಸುತ್ತಿದ್ದಾರೋ ಗೊತ್ತಿಲ್ಲ. ಈಗಿನ ಪ್ರಶ್ನೆ ಆ ಚುನಾವಣೆಗಳು ಮುಕ್ತ, ನ್ಯಾಯ ಪೂರ್ಣವಾಗಿದ್ದವೇ ಎಂದಲ್ಲ. ಈಗಿನ ಪ್ರಶ್ನೆ ಪ್ರತ್ಯೇಕತಾವಾದದ ವಿರುದ್ಧ ರಾಷ್ಟ್ರೀಯ ಐಕ್ಯತೆಯದ್ದು. ಈ ಸಮಯದಲ್ಲಿ ರಾಜಕೀಯ ಹೋರಾಟದ ಅಗತ್ಯ. ಇದರಲ್ಲಿ ರಾಷ್ಟ್ರೀಯ ಕಾನ್ಫರೆನ್ಸ್‌ನ ನೆರವೂ ಬೇಕು. ಯಾಕೆಂದರೆ



ಆ ಪಕ್ಷ ಏನೇ ಪ್ರಮಾದ ಮಾಡಿದ್ದರೂ ತನ್ನ ದೀರ್ಘ ಇತಿಹಾಸದಿಂದಾಗಿ ಅದಕ್ಕೆ ಈಗಲೂ ಕಾಶ್ಮೀರ ಜನತೆಯ ನಡುವೆ ಪ್ರಭಾವವಿದೆ.

ಆದರೆ ದುರದೃಷ್ಟವಶಾತ್ ಜಗನ್ಮೋಹನ್‌ರವರ ವಿಚಾರವೇ ಬೇರೆ. ಈ ಪಕ್ಷವನ್ನು ಪುಡಿಗುಟ್ಟಲು ಇದೇ ಸಮಯ ಎಂದು ಅವರು ಬಗೆದಂತಿದೆ. ವಾಸ್ತವವಾಗಿ ಅವರು ಈ ಮೂಲಕ ಹಿಂದಿನ ಕಾಂಗ್ರೆಸ್(ಐ)ನ ಧೋರಣೆಯನ್ನೇ ಅನುಸರಿಸುತ್ತಿದ್ದಾರೆ.

ದೇಶದ ಹಿಂದಿನ ಅನುಭವಗಳಿಂದ ಪಾಠ ಕಲಿತ ರಾಷ್ಟ್ರೀಯ ರಂಗ ಸರ್ಕಾರ ರಾಷ್ಟ್ರೀಯ ಸಮಸ್ಯೆಗಳನ್ನು ಸ್ವಾರ್ಥಕ್ಕಾಗಿ ಬಳಸುವುದಿಲ್ಲ ಎಂದು ಜನತೆಗೆ ಭರವಸೆ ನೀಡಿತು. ರಾಷ್ಟ್ರೀಯ ಅಭಿಪ್ರಾಯ ರೂಪಿಸಲು ಪ್ರಯತ್ನಿಸುವುದಾಗಿ ಹೇಳಿತು. ಜಗನ್ಮೋಹನ್‌ರನ್ನು ರಾಜ್ಯಪಾಲರನ್ನಾಗ ನೇಮಿಸಿ ಪರಿಣಾಮವಾಗಿ ಫಾರುಕ್ ಸರ್ಕಾರ ರಾಜೀನಾಮೆ ನೀಡಿದಾಗ ಎಡಪಕ್ಷಗಳ ಪ್ರತಿಭಟನೆಗೆ ತಕ್ಷಣ ಓಗೊಟ್ಟು ಪ್ರಧಾನಮಂತ್ರಿಗಳು ಸರ್ವಪಕ್ಷ ಸಭೆ ನಡೆಸುವುದಾಗಿ ಹೇಳಿದರು. ಅದು ನಡೆಯಲಿಲ್ಲ. ಈ ನಡುವೆ ಪಾಕಿಸ್ತಾನೀ ಆಳರಸರು ಅಲ್ಲಿನ ಎಲ್ಲಾ ಶಕ್ತಿಗಳಿಂದ ತಮ್ಮ ಬುಡ ಮೇಲು ಕೃತ್ಯಗಳಿಗೆ ಬೆಂಬಲಪಡೆಯಲು ಯತ್ನಿಸಿದಾಗ ಪಾಕಿಸ್ತಾನದ ಜನತೆಯೊಂದಿಗೆ ಯಾವುದೇ ದ್ವೇಷವಿಲ್ಲದ ನಮ್ಮ ಜನತೆಗೆ ಒಂದು ಮನವಿಯನ್ನೂ ನಾವು ಮಾಡಿಕೊಳ್ಳಲಿಲ್ಲ.

ಮುಂಬರಲಿರುವ ವಿಧಾನಸಭಾ ಚುನಾವಣೆಗಳಿಂದ ಇದು ಸಾಧ್ಯವಾಗಲಿಲ್ಲ ಎನ್ನುವುದಾದರೆ ಈ ನಡುವೆ ವಿಧಾನಸಭೆ ವಿಸರ್ಜಿಸುವಂತಹ ನಿರ್ಣಯ ಕೈಗೊಳ್ಳುವ ಧೈರ್ಯ ರಾಜ್ಯಪಾಲರಿಗೆ ಹೇಗೆ ಬಂತು? ಪ್ರತ್ಯೇಕತಾವಾದಿಗಳ ಸವಾಲನ್ನು ಎದುರಿಸಲು ಎಡಶಕ್ತಿಗಳು ನ್ಯಾಷನಲ್‌ಕಾನ್ಫರೆನ್ಸ್ ಕೂಡಾ ಸೇರಿದಂತೆ ಜಮ್ಮುಕಾಶ್ಮೀರದ ಎಲ್ಲಾ ರಾಜಕೀಯ ಶಕ್ತಿಗಳನ್ನು ಅಣಿನೆರೆಸುತ್ತಿದ್ದಾಗಲೇ ಅವರು ಈ ಕ್ರಮ ಕೈಗೊಂಡರು. ಸರ್ವಪಕ್ಷ ಅಭಿಪ್ರಾಯದ ಮಾತು ಹಾಗಿರಲಿ, ರಾಷ್ಟ್ರೀಯ ರಂಗ ಸರ್ಕಾರವನ್ನು ಬೇಷರತ್ತಾಗಿ ಬೆಂಬಲಿಸುವ ಎಡಪಕ್ಷಗಳಲ್ಲಿ ಈ ಬಗ್ಗೆ ಸಮಾಲೋಚನೆ ಕೂಡಾ ನಡೆಸಲಿಲ್ಲ. ವಿಸರ್ಜನೆಯಾದ ಮೇಲೆ ರೇಡಿಯೋದಿಂದಲೇ ಎಡಪಕ್ಷಗಳಿಗೆ ಈ ಸುದ್ದಿ ತಿಳಿದದ್ದು. ಪ್ರಧಾನಮಂತ್ರಿ ವಿ.ಪಿ.ಸಿಂಗರಿಗೂ ಇದರ ಬಗ್ಗೆ ಗೊತ್ತಿರಲಿಲ್ಲ ಎನ್ನಲಾಗುತ್ತಿದೆ. ಅಂದರೆ ರಾಜ್ಯಪಾಲರು ತಾನೇ ಈ ಕ್ರಮ ಕೈಗೊಂಡಿದ್ದಾರೆಂದರೆ ಇದೊಂದು ಅಪಾಯಕಾರೀ ಉದಾಹರಣೆ ಹಾಕಿಕೊಟ್ಟಂತೆ.

ಸಂವಿಧಾನದ 370 ನೇ ವಿಧಿಯನ್ನು ತೀವ್ರವಾಗಿ ವಿರೋಧಿಸುವ ಬಿ.ಜೆ.ಪಿ. ಈ ವಿಧಿಯ ಪ್ರಕಾರವೇ ರಾಷ್ಟ್ರಪತಿಯ ಅನುಮತಿಯ ಅಗತ್ಯವಿಲ್ಲದ ರಾಜ್ಯಪಾಲರು ಈ ಕ್ರಮವನ್ನು ತಕ್ಷಣ ಸ್ವಾಗತಿಸಿರುವುದು ಆಶ್ಚರ್ಯದ ಸಂಗತಿ. ಬಿ.ಜೆ.ಪಿ. ಫಾರುಕ್ ಸರಕಾರವನ್ನು ವಜಾ ಮಾಡಬೇಕೆಂದೂ, ವಿಧಾನ ಸಭೆಯನ್ನೂ ವಿಸರ್ಜಿಸಬೇಕೆಂದೂ ಒತ್ತಾಯಿಸುತ್ತಿತ್ತು. ಬಿ.ಜೆ.ಪಿ.ಯ ಈ ಧೋರಣೆಯ ಪರಿಣಾಮವೇನು ಎಂಬುದರ ಅರಿವೇ ಇಲ್ಲದೆ ರಾಜ್ಯಪಾಲರು ಬಿ.ಜೆ.ಪಿ. ಧೋರಣೆಯನ್ನು ಜ್ಯಾರಿಗೆ ತಂದಿದ್ದಾರೆ. ಏಕೆ ಹೀಗಾಯಿತು, ಸಮಸ್ಯೆ ಪರಿಹಾರಕ್ಕೆ ಅದರ ಧೋರಣೆಯ ದಿಕ್ಕೇನು ಎಂಬುದನ್ನೂ ಕೇಂದ್ರ ಸರಕಾರ ವಿವರಿಸಬೇಕಾಗಿದೆ.

ಎಡಪಕ್ಷಗಳ ಸ್ಪಷ್ಟ ನಿಲುವು

ಎಡಪಕ್ಷಗಳ ನಿಲುವಂತೂ ಈ ಬಗ್ಗೆ ಸ್ಪಷ್ಟ. ಕಾಶ್ಮೀರ ಸಮಸ್ಯೆ ಎದುರಿಸುವಾಗ ಒಂದೆಡೆ ಕಾಶ್ಮೀರಿಗಳ ಸ್ವಂತಿಕೆಯ ರಕ್ಷಣೆಯಾಗಬೇಕು. ಇನ್ನೊಂದೆಡೆ ಭಾರತೀಯ ಐಕ್ಯತೆಯ ಚೌಕಟ್ಟಿನೊಳಗೇ ಪರಿಹಾರ ಕಾಣಬೇಕು. ಪಾಕಿಸ್ತಾನದೊಂದಿಗೆ ಸೇರುವುದು ಅಥವಾ ಸ್ವತಂತ್ರ ಕಾಶ್ಮೀರ ಇದಕ್ಕೆ ಪರ್ಯಾಯವಲ್ಲ. ಈ ಹಿನ್ನೆಲೆಯಲ್ಲೇ 370 ನೇ ವಿಧಿಯ ಮಹತ್ವವಿರುವುದು. ಅದು ಕಾಶ್ಮೀರಿಗಳಿಗೆ ನೀಡಿದ ರಿಯಾಯ್ತಿ ವಿನಲ್ಲ. ಅದು ಕಾಶ್ಮೀರಿ ಜನತೆ ನ್ಯಾಶನಲ್ ಕಾನ್ಫರೆನ್ಸ್‌ನ ನೇತೃತ್ವದಲ್ಲಿ ಜಾತ್ಯತೀತ ಭಾರತದೊಡನೆ ತಮ್ಮ ಭವಿಷ್ಯವನ್ನು ಜೋಡಿಸಿಕೊಂಡು ಪಾಕಿಸ್ತಾನೀ ಅತಿಕ್ರಮಣಕಾರರ ವಿರುದ್ಧ ಶಸ್ತ್ರ ಎತ್ತಿ ಹೋರಾಡಿದ ಚಾರಿತ್ರಿಕ ಪ್ರಕ್ರಿಯೆಯ ಫಲ. ಆದ್ದರಿಂದ 370 ನೇ ವಿಧಿಯನ್ನು ರದ್ದು ಮಾಡಬೇಕೆನ್ನುವವರು ಪ್ರತ್ಯೇಕತಾವಾದಿಗಳ ಬಲೆಗೆ ಬೀಳುತ್ತಾರಷ್ಟೆ. ಕಾಶ್ಮೀರಿ ಜನತೆ ಇದಕ್ಕೆಂದೂ ತಲೆಬಾಗುವುದಿಲ್ಲ ಎಂಬುದನ್ನು ಅವರು ಅರಿಯಬೇಕು.

ಈಗ ಕಾಶ್ಮೀರದಲ್ಲಿ ಎರಡು ಪ್ರತ್ಯೇಕತಾವಾದಿ ಶಕ್ತಿಗಳಿವೆ. ಒಂದು ಜಮಾತ್-ಎ-ಇಸ್ಲಾಮಿ ನೇತೃತ್ವದ ಮೂಲಭೂತವಾದಿಗಳ ಗುಂಪು. ಧಾರ್ಮಿಕ ಕಾರಣಕ್ಕೆ ಪಾಕಿಸ್ತಾನದೊಡನೆ ಸೇರಬೇಕೆಂದು ಇವರು ಹೇಳುತ್ತಾರೆ. ಇದಕ್ಕೆ ತಮ್ಮದೇ ಪರಂಪರೆಯ ಕಾಶ್ಮೀರಿ ಜನ ಮಾರು ಹೋಗುತ್ತಿಲ್ಲ. ಏಕೆಂದರೆ ಅವರ ಮೊದಲ ಸಮಸ್ಯೆ ತಮ್ಮ ಕಾಶ್ಮೀರಿ ಸ್ವಂತಿಕೆ ಉಳಿಸಿ ಕೊಳ್ಳುವುದು ಎಂದು ಹೇಳುತ್ತಾರೆ. ಪ್ರತ್ಯೇಕತಾವಾದಿಗಳ ಇನ್ನೊಂದು ಗುಂಪಾದ ಜಮ್ಮು ಕಾಶ್ಮೀರ ವಿಮೋಚನಾ ರಂಗ ಅಥವಾ ಜೆ.ಕೆ.ಎಲ್.ಎಫ್. ಆದ್ದರಿಂದಲೇ ಈ ಸಂಘಟನೆ ಸ್ವಾತಂತ್ರ್ಯದ ಘೋಷಣೆಯೆತ್ತುತ್ತದೆ. ಈ ಸಂಘಟನೆ ಶಾಲೆ ಇತ್ಯಾದಿಗಳಿಗೆ ಬೆಂಕಿ ಹಚ್ಚುವುದನ್ನು ವಿರೋಧಿಸುತ್ತದೆ.

ಪ್ರಧಾನ ಮಂತ್ರಿಗಳು, ವಿದೇಶಾಂಗ ಮಂತ್ರಿಗಳು ನಿರಂತರವಾಗಿ ಇದರಲ್ಲಿ ಪಾಕಿಸ್ತಾನೀ ಆಳರಸರ ಪಾತ್ರದ ಬಗ್ಗೆ ಒತ್ತು ನೀಡುತ್ತಾ ಬಂದಿದ್ದರೆ, ರಾಜ್ಯಪಾಲ ಜಗನ್ ಮೋಹನ್‌ರು ಮಾತ್ರ ನ್ಯಾಶನಲ್ ಕಾನ್ಫರೆನ್ಸನ್ನು ಪುಡಿಗುಟ್ಟುವ ತನ್ನ ಕಾತುರದಲ್ಲಿ ಈ ಬಗ್ಗೆ ವಿಧಾನಸಭೆಯ ವಿಸರ್ಜನೆಯ ತನ್ನ ಘೋಷಣೆಯಲ್ಲಿ ಏನೂ ಹೇಳಿಲ್ಲ.

ತೀವ್ರ ಆಂತರಿಕ ಸಮಸ್ಯೆಗಳನ್ನು ಎದುರಿಸುತ್ತಿರುವ ಪಾಕಿಸ್ತಾನದ ಆಳುವ ಜನ ಈ ಮೂಲಕ ತಮ್ಮ ಜನತೆಯ ಗಮನವನ್ನು ಬೇರೆಡೆಗೆ ಸೆಳೆಯಲು ಯತ್ನಿಸುತ್ತಿದ್ದಾರೆ. ಆದರೆ ಅವರ ಲೆಕ್ಕಾಚಾರ ತಪ್ಪಿದೆ. ಮಾತುಕತೆಯ ಧೋರಣೆಯು ಈಗ ಅಂತರಾಷ್ಟ್ರೀಯ ಸನ್ನಿವೇಶದ ಪ್ರಮುಖ ಲಕ್ಷಣ. ಅಮೆರಿಕಾದಂತಹ ಆಕ್ರಮಣಕಾರಿ ದೇಶ ಕೂಡಾ ಭಾರತದಲ್ಲಿ ಕಿರಿ ಕಿರಿ ಉಂಟು ಮಾಡಲು ಬಹಿರಂಗವಾಗಿ ಪಾಕಿಸ್ತಾನವನ್ನು ಬೆಂಬಲಿಸುವ ಸ್ಥಿತಿಯಲ್ಲಿಲ್ಲ. ಸೌದಿ ಅರೇಬಿಯಾ, ಇರಾನ್ ಬಿಟ್ಟು ಬೇರೆ ಯಾವ ಇಸ್ಲಾಮೀ ಸಂಘಟನೆಯ ದೇಶವೂ ಪಾಕಿಸ್ತಾನದ ಬೆಂಬಲಕ್ಕೆ ಬಂದಿಲ್ಲ. ಶಿಮ್ಲಾ ಒಪ್ಪಂದದ ಆಧಾರದ ಮೇಲೆ ಪರಿಹರಿಸಿಕೊಳ್ಳಿ ಎಂದಿವೆ. ಆದ್ದರಿಂದ ಭಾರತ, ಪಾಕಿಸ್ತಾನಗಳ ನಡುವೆ ಯುದ್ಧದ ಸಂಭವ ಈಗ ಇಲ್ಲ. ಆದರೂ ಪಾಕಿಸ್ತಾನ ತನ್ನ ದುಷ್ಟ ಆಟ ಮುಂದುವರೆಸಿದೆ.

ಈ ಸವಾಲನ್ನು ಸ್ವೀಕರಿಸುವುದು ಹೇಗೆ? ನಾಲ್ಕು ರಂಗಗಳಲ್ಲಿ ಇದನ್ನು ಎದುರಿಸಬಹುದು. ರಾಜ ತಾಂತ್ರಿಕ, ರಾಜಕೀಯ, ಆರ್ಥಿಕ ಮತ್ತು ಆಡಳಿತಾತ್ಮಕ.

ರಾಜ ತಾಂತ್ರಿಕ ರಂಗದಲ್ಲಿ,

ನಾವು ಈಗಾಗಲೇ ಸಾಕಷ್ಟು ಸಾಧಿಸಿದ್ದೇವೆ. ಇದನ್ನು ಇನ್ನಷ್ಟು ಮುಂದುವರಿಸಬೇಕು. ನಮಗೆ ಈ ಪ್ರದೇಶದಲ್ಲಿ ಶಾಂತಿ ಬೇಕು, ಪರಸ್ಪರ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪವಿಲ್ಲದ, ಶಿಮ್ಲಾ ಒಪ್ಪಂದದ ಆಧಾರದ ಮೇಲೆ ಪಾಕಿಸ್ತಾನ ಮತ್ತಿತರ ನೆರೆ ದೇಶಗಳೊಡನೆ ಸಂಬಂಧಗಳುಮಾಮೂಲು ಸ್ಥಿತಿಗೆ ಬರಬೇಕೆಂಬುದು ನಮ್ಮ ಬಯಕೆ ಎಂದು ವಿಶ್ವಕ್ಕೆ ಮನವರಿಕೆ ಮಾಡಿಕೊಡಬೇಕು. ನಾವು ಶಾಂತಿಯುತ ನೆರೆ ಕೆರೆಯವರಂತೆ ಬಾಳ ಬಯಸುತ್ತೇವೆ ಎಂದು ಪಾಕಿಸ್ತಾನೀ ಜನತೆಗೆ ಸತತ ಮನವಿ ಮಾಡಿಕೊಳ್ಳುತ್ತಿರಬೇಕು.

ರಾಜಕೀಯ ರಂಗದಲ್ಲಿ,

ಪ್ರತ್ಯೇಕತಾವಾದ, ಭಯೋತ್ಪಾದನೆಯ ವಿರುದ್ಧ ಎಲ್ಲಾ ರಾಜಕೀಯ ಶಕ್ತಿಗಳನ್ನು ಅಣಿನೆರೆಸಬೇಕು. ಅವುಗಳ ರಾಜಕೀಯ ಪ್ರಚಾರಕ್ಕೆ ತಕ್ಕ ಉತ್ತರ ನೀಡಬೇಕು. ಇದಕ್ಕೆ ಕಾಶ್ಮೀರಿಗಳ ಸಾಂಸ್ಕೃತಿಕ ಪರಂಪರೆಯನ್ನು ಪೂರ್ಣವಾಗಿ ರಕ್ಷಿಸುವ ಭರವಸೆ ನೀಡಬೇಕು. ಇಲ್ಲೇ ನ್ಯಾಶನಲ್ ಕಾನ್ಫರೆನ್ಸ್‌ನ ದೊಡ್ಡ ಪಾತ್ರವಿರುವುದು. ರಾಷ್ಟ್ರೀಯ ಐಕ್ಯತೆ ಬಯಸುವ ಶಕ್ತಿಗಳಲ್ಲೇ ಪರಸ್ಪರ ತಾನು ಮೇಲು, ನಾನು ಮೇಲೆಂದು ಸಾಧಿಸುವ ಪ್ರಯತ್ನ ಅಪಾಯಕಾರಿ. ರಾಷ್ಟ್ರೀಯ ಐಕ್ಯತೆ ಬಯಸುವವರು ಮತ್ತು ಅದನ್ನು ವಿರೋಧಿಸುವವರು ಹೀಗೆ ನೇರ ವಿಂಗಡಣೆ ಮಾಡಿಕೊಳ್ಳಬೇಕು. ಪ್ರತ್ಯೇಕತಾವಾದ ವಿರೋಧಿಸುವ ಧಾರ್ಮಿಕ ಶಕ್ತಿಗಳನ್ನು ಅಣಿನೆರಸಬೇಕು.

ಆರ್ಥಿಕ ರಂಗದಲ್ಲಿ,

ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆಯನ್ನು ಎದುರಿಸಲು ತುರ್ತು ಕ್ರಮ ಅಗತ್ಯ. ಉದ್ದಿಮೆಗಳ ಬೆಳವಣಿಗೆಯ ವಿಷಯದಲ್ಲಿ ಕಾಶ್ಮೀರವನ್ನು ಉಪೇಕ್ಷಿಸಲಾಗಿದೆ. ಹಿಂದಿನ ಡೋಗ್ರಾ ಆಳ್ವಿಕೆಯಲ್ಲಿದ್ದಂತೆ ಈಗಲೂ ಪ್ರವಾಸೋದ್ಯಮದ ಮೇಲೇನೇ ಜನ ಬದುಕಿರಬೇಕು. ಒಂದೇ ವ್ಯತ್ಯಾಸವೆಂದರೆ ಶಿಕ್ಷಣದ ಬೆಳವಣಿಗೆಯೊಂದಿಗೆ ಬುದ್ಧಿಜೀವಿಗಳ ದೊಡ್ಡ ವಿಭಾಗವೊಂದು ಬೆಳೆದು ಬರುತ್ತಿದೆ. ಇಂಜಿನಿಯರುಗಳು, ಡಾಕ್ಟರುಗಳಿಗೂ ಇಲ್ಲಿ ಉದ್ಯೋಗಾವಕಾಶ ಬಹಳ ಕಮ್ಮಿ ಎಂಬುದು ಶೋಚನೀಯ. ಕಾಶ್ಮೀರದ ಜನರನ್ನು ಜನಸಂಖ್ಯೆಯ ಆಧಾರದ ಮೇಲೆ ಅಖಿಲ ಭಾರತ ಸೇವೆಗಳಲ್ಲಿ ಸಮಗ್ರೀಕರಿಸಿಕೊಳ್ಳಲಿಲ್ಲ. ಏಕೆ ಎಂಬುದು ಅರ್ಥವಾಗದ ವಿಷಯ. ಈಗಿನ ಅತೃಪ್ತಿಗೆ ಒಂದು ಪ್ರಮುಖ ಕಾರಣವಾಗಿರುವ ಆರ್ಥಿಕ ಸಮಸ್ಯೆಗಳನ್ನು ಎದುರಿಸಲು ವಿಶೇಷ ಪ್ರಯತ್ನ ನಡೆಸಬೇಕು.

ಇನ್ನು ಆಡಳಿತ ರಂಗದಲ್ಲಿ

ರಾಜ್ಯದಲ್ಲಿ ಆಡಳಿತ ಕುಸಿಯಲು ಕೇಂದ್ರ ಎಷ್ಟು ಹೇಗೆ, ರಾಜ್ಯ ಎಷ್ಟು ಹೊಣೆ ಎಷ್ಟು ಎಂದು ಪರಿಶೀಲಿಸಲು ಇದು ಸಮಯವಲ್ಲ. ತಕ್ಷಣದ ಅವಶ್ಯಕತೆಯೆಂದರೆ ಆಡಳಿತವೆಂಬುದೊಂದಿದೆ ಅದು ಉಗ್ರವಾದಿಗಳನ್ನು, ಪ್ರತ್ಯೇಕತಾವಾದಿಗಳನ್ನು ದೃಢವಾಗಿ ಎದುರಿಸಬಲ್ಲದು ಎಂಬ ವಿಶ್ವಾಸ ಜನರಲ್ಲಿ ಮೂಡುವಂತಾಗಬೇಕು. ದುರುದ್ದೇಶಗಳಿಂದ ಕೂಡಿದ ಮಂದಿ ಯಾವುದೇ ತರ್ಕವನ್ನು ಲೆಕ್ಕಿಸುವುದಿಲ್ಲ. ಯಾವುದೇ ಒಳ್ಳೆ ಮಾತುಗಳಿಗೆ ಬಗ್ಗುವುದಿಲ್ಲ. ಆದ್ದರಿಂದ ಅವರ ಬಗ್ಗೆ ದೃಢ ಕ್ರಮ ಅಗತ್ಯ. ಅವರನ್ನು ಜನರಿಂದ ದೂರಮಾಡಿ ಅವರ ನೆಲೆ ವ್ಯಾಪಕಗೊಳ್ಳದಂತೆ ನೋಡಿಕೊಳ್ಳಬೇಕು. ಕಾಶ್ಮೀರದ ಜನತೆ ತಮ್ಮ ಭವಿಷ್ಯವನ್ನು ಭಾರತದ ಜನತೆಯೊಂದಿಗೆ ಬೆಸೆದುಕೊಂಡಿದ್ದಾರೆ. ಇದನ್ನು ಬದಲಿಸಲು ಸಾಧ್ಯವಿಲ್ಲ ಎಂದು ಅವರಿಗೆ ಸ್ಪಷ್ಟವಾಗಿ ಹೇಳಬೇಕು. ಎಲ್ಲಾ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಕಂಡು ಕೊಳ್ಳಬಹುದು. ಆದರೆ ಪ್ರತ್ಯೇಕತಾವಾದ ಪ್ರತಿಪಾದಿಸುವವರಿಗೆ ಯಾವ ಅವಕಾಶವನ್ನೂ ಕೊಡಬಾರದು.

ಆದ್ದರಿಂದ ನಮ್ಮ ಕಾಶ್ಮೀರ ಧೋರಣೆಗೆ ಒಂದು ಸ್ಪಷ್ಟ ದಿಕ್ಕು ಅಗತ್ಯ. ಅದನ್ನೊಂದು ಪಕ್ಷದ ಪ್ರಶ್ನೆಯಾಗಿಸದೆ ರಾಷ್ಟ್ರೀಯ ಸಮಸ್ಯೆಯಾಗಿ ಕಾಣಬೇಕು. ಯಾಕೆಂದರೆ ಈ ವಿಷಯದಲ್ಲಿ ಯಾವುದೇ ತಪ್ಪು ಇಡಿ ದೇಶದ ಭವಿಷ್ಯವನ್ನು ತಟ್ಟುತ್ತದೆ. ಆದ್ದರಿಂದಲೇ ಒಂದು ರಾಷ್ಟ್ರೀಯ ಅಭಿಪ್ರಾಯ ರೂಪಿಸಬೇಕೆಂದು ನಾವು ಆರಂಭದಿಂದಲೂ ಪ್ರತಿಪಾದಿಸುತ್ತಾ ಬಂದಿದ್ದೇವೆ. ಇದಕ್ಕಾಗಿ ಸರ್ವಪಕ್ಷ ಸಭೆ ಅಗತ್ಯ. ರಾಜ್ಯಪಾಲರೇ ಆಗಲಿ, ಸರಕಾರವೇ ಆಗಲಿ ತಮ್ಮ ಮನಬಂದಂತೆ ಕೈಗೊಳ್ಳುವ ನಿರ್ಣಯ ವಿನಾಶಕಾರಿಯಾಗಬಹುದು.

ಈ ವಾರ

ವಿಶ್ವಹಿಂದೂ ಪರಿಷತ್ ಮುಖಂಡರು ರಾಮಮಂದಿರ ನಿರ್ಮಾಣದ ಹೆಸರಲ್ಲಿ ವಿದೇಶಗಳಿಂದ 500ಕೋಟಿ ರೂಪಾಯಿ ಸಂಗ್ರಹಿಸಿದ್ದಾರೆ. ಅದಕ್ಕೆ ಲೆಕ್ಕಪತ್ರ ಇಲ್ಲ.

- 'ಬ್ಲಿಟ್ಸ್' ಪತ್ರಿಕೆಯಲ್ಲಿ ದ್ವಾರಕಾ ಶಂಕರಾಚಾರ್ಯ ಸ್ವಾಮಿ ಸ್ವರೂಪಾನಂದ

ಕಳೆದವಾರ ಅಂತಿಮವಾಗಿ ಸಿದ್ಧಪಟ್ಟ ಸೋಲುಗಳನ್ನು ನಿರೀಕ್ಷಿತ ಎಂದಷ್ಟೇ ವಿವರಣೆಯಿಂದಾಗಲಿ, ಜನರು ಬದಲಾವಣೆಗಾಗಿ ಹಾತೊರೆಯುತ್ತಿದ್ದರು ಎಂಬ ವರ್ಣನೆಯಿಂದಾಗಲಿ ವಿಶ್ಲೇಷಿಸಿ ತಪ್ಪಾಗುವುದು ಮತ್ತು ಸ್ಥಿತಿಯನ್ನು ಎದುರಿಸಲಾಗದ ಮನೋಭಾವದ ಫಲ.

- ಪ್ರಜಾವಾಣಿ, ಮಾರ್ಚ್ 5

ಎಲ್ಲಕ್ಕೂ ಮಿಗಿಲಾಗಿ, ಇದೂ (ವಿಧಾನಸಭಾ ಚುನಾವಣಾ ಫಲಿತಾಂಶ) ಕೂಡಾ ಹಿಂದಿನ ಆಳ್ವಿಕೆಯಲ್ಲಿ ದುರಾಡಳಿತದ ವಿರುದ್ಧ ಪ್ರತಿಭಟನೆಯ ಮತವೇ ಆಗಿದೆ.

- ಡೆಕ್ಕನ್ ಹೆರಾಲ್ಡ್, ಮಾರ್ಚ್ 2

ಬಿಹಾರದಲ್ಲಿ ಜನತಾದಳ ಎಡಪಕ್ಷಗಳೊಂದಿಗೆ ಪೂರ್ಣ ಪ್ರಮಾಣದಲ್ಲಿ ಸ್ಥಾನ ಹೊಂದಾಣಿಕೆ ಮಾಡುವಲ್ಲಿ ತನ್ನ ವಿಫಲತೆಯ ಬಗ್ಗೆ ಈಗ ತನ್ನನ್ನೆ ನಿಂದಿಸಿಕೊಳ್ಳುತ್ತಿರಬೇಕು. ಹಾಗಾಗಿದ್ದರೆ ಅದಕ್ಕೆ ಪೂರ್ಣ ಬಹುಮತ ಸಿಗುವ ಸಾಧ್ಯತೆಯೂ ಇತ್ತು. ಬೇಗುಸರಾಯ್ ಜಿಲ್ಲೆಯ ಅನುಭವದಿಂದ ಇದು ಸ್ಪಷ್ಟವಾಗುತ್ತದೆ. ಜನತಾದಳ, ಸಿ.ಪಿ.ಐ., ಸಿ.ಪಿ.ಐ.(ಎಂ) ನಡುವೆ ಪೂರ್ಣ ಸ್ಥಾನ ಹೊಂದಾಣಿಕೆಯ ಫಲವಾಗಿ ಅಲ್ಲಿ ಕಾಂಗ್ರೆಸ್ ಮಾತ್ರವಲ್ಲ ಬಿ.ಜೆ.ಪಿ. ಕೂಡಾ ಸಂಪೂರ್ಣ ಪರಾಭವ ಕಂಡಿವೆ.

- ಟೈಂಸ್ ಆಫ್ ಇಂಡಿಯಾ, ಮಾರ್ಚ್

ರಾಜ್ಯ (ಮಧ್ಯಪ್ರದೇಶ) ದ ಇತಿಹಾಸದಲ್ಲೇ ಪ್ರಪ್ರಥಮ ಬಾರಿಗೆ ಲಾಲ್ ಪರೇಡ್ ಮೈದಾನದಲ್ಲಿ ನಿನ್ನೆ ಸಂಜೆ ಎನ್.ಟಿ. ರಾಮರಾವ್ ಶೈಲಿಯಲ್ಲಿ ಅದ್ಧೂರಿಯಾಗಿ ಸರ್ಕಾರ ರಚನೆಗೆ ಬಿ.ಜೆ.ಪಿ. ವ್ಯವಸ್ಥೆ ಮಾಡಿದ್ದ ಸಮಾರಂಭದಲ್ಲಿ ಮುಖ್ಯಮಂತ್ರಿಯ ಹೊರತಾಗಿ ಬೇರೆ ಯಾರೂ ಪ್ರಮಾಣವಚನ ಸ್ವೀಕರಿಸಲಿಲ್ಲ. ಭಾರೀ ನಿರೀಕ್ಷೆಯೊಂದಿಗೆ ಕಾದು ಕುಳಿತಿದ್ದ ಹತ್ತು ಸಾವಿರಕ್ಕೂ ಹೆಚ್ಚು ಜನಸಮೂಹ ಸಮಾರಂಭ ಐದೇ ನಿಮಿಷದಲ್ಲಿ ಮುಗಿದ ಪರಿಣಾಮವಾಗಿ ಭ್ರಮನಿರಸನ ಗೊಂಡಿತ್ತು.

- ಪಿ.ಟಿ.ಐ., ಮಾರ್ಚ್ 6

ನನ್ನನ್ನು ಕೇವಲ ಒಂದು ದಿನಕ್ಕೆ ಈ ದೇಶದ ಪ್ರಧಾನಮಂತ್ರಿ ಮಾಡಿ, ಶಸ್ತ್ರಾಸ್ತ್ರ ಬಳಸಲು ಅನುಮತಿ ನೀಡಿ. ಒಂದೇ ದಿನದಲ್ಲಿ ನಾನು ಪಂಜಾಬ್, ಕಾಶ್ಮೀರ ಸಮಸ್ಯೆಗಳನ್ನು ಪರಿಹರಿಸಿ ಬಿಡುತ್ತೇನೆ. ಪ್ರಜಾಪ್ರಭುತ್ವ ವಿಧಾನಗಳಿಂದ ಅಲ್ಲ, ಸರ್ವಾಧಿಕಾರದಿಂದ.

- ಶಿವಸೇನೆ ಮುಖ್ಯಸ್ಥ ಬಾಳ ಠಾಕ್ರೆ ಚುನಾವಣಾ ಭಾಷಣ

ಚುನಾವಣಾ ಸಮಯದಲ್ಲಿ ಪೂರ್ಣವಾಗಿ ಆರ್.ಎಸ್.ಎಸ್. ಹಿಡಿತದಲ್ಲಿದ್ದ ಸಹಜವಾಗಿ ಬಾಳ ಠಾಕ್ರೆ, ಬಿ.ಜೆ.ಪಿ. ಮುಖಂಡ ಪ್ರಮೋದ್ ಮಹಾಜನ್‌ರನ್ನೇ ತೋರಿಸುತ್ತಿದ್ದ ಮುಂಬೈ ದೂರದರ್ಶನ ಕೇಂದ್ರ ಈಗ ಶರದ್ ಪವಾರ್ ಏನು ಬೇಕಾದರೂ ಹೇಳಲು ಅವಕಾಶ ನೀಡುವುದಾಗಿ ಹೇಳಿದೆ. ಶಿವಸೇನೆ, ಬಿ.ಜೆ.ಪಿ. ಯ ಕೋಮು ಕೂಟ-ಚುನಾವಣೆಯಲ್ಲಿ ಸೋತ ನಂತರ ಅದು ಬಣ್ಣ ಬದಲಾಯಿಸಿತು.

- ಟೈಂಸ್ ಆಫ್ ಇಂಡಿಯಾ ಸುದ್ದಿ ಮಾರ್ಚ್ 4

Printed and published by P Ramachandra Rao on behalf of Communist party of India (Marxist), Karnataka State Committee